ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 11 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 25 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಮೈಸೂರು ಮಿತ್ರ

ಸೋಮವಾರ 11 ಮೇ 2026

ಅರಮನೆ ದೀಪಾಲಂಕಾರ, ಧ್ವನಿ, ಬೆಳಕು ಕಾರ್ಯಕ್ರಮ ತಾತ್ಕಾಲಿಕ ಸ್ಥಗಿತ

ಮೈಸೂರು,ಮೇ10(ಜಿಎ)–ಮೈಸೂರು ಅರಮನೆ ದೀಪಾಲಂಕಾರ ಹಾಗೂ




ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ರಾಜ್ಯದ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಮೇ 10ರಂದು ನಿಧನರಾಗಿರುವುದರಿಂದ ಮೂರು ದಿನಗಳು ರಾಜ್ಯಾದ್ಯಂತ ಶೋಕಾಚರಣೆ ಹಿನ್ನೆಲೆಯಲ್ಲಿ ಮೇ 10ರಂದು ಅರಮನೆ ದೀಪಾಲಂಕಾರ ಹಾಗೂ ಮೇ 11 ಮತ್ತು 12ರಂದು ಎರಡು ದಿನ ಅರಮನೆ ಆವರಣದಲ್ಲಿ ನಡೆಯುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ. ಮೇ 13ರಿಂದ ಎಂದಿನಂತೆ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ಅರಮನೆ ಮಂಡಳಿ ಉಪನಿರ್ದೇಶಕ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಡಿಪ್ಲೋಮಾ ತರಗತಿಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 10–ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರ. ಸಿಪೆಟ್ ಸಂಸ್ಥೆಯು CIPET 2026–27ನೇ ಸಾಲಿನ ಉದ್ಯೋಗಾಧಾರಿತ ಮತ್ತು ಉದ್ಯೋಗ ಖಚಿತ ಡಿಪ್ಲೊಮಾ, ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ, ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ 3 ವರ್ಷದ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದು. ಎಸ್.ಎಸ್.ಎಲ್.ಸಿ, ಪಿ.ಯು.ಸಿ ಮತ್ತು ಐ ಟಿ ಐ ಪರೀಕ್ಷೆಯಲ್ಲಿ ತೇರ್ಗಡೆಯಾದವರು/ಹಾಜರಾದವರು ಆನ್‌ಲೈನ್, ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಹಾಗೂ ಪಿ.ಯು.ಸಿ(ವಿಜ್ಞಾನ), ಐಟಿಐ ತೇರ್ಗಡೆಯಾದವರು ಡಿಪ್ಲೋಮಾ 2ನೇ ವರ್ಷಕ್ಕೆ ಪ್ರವೇಶ ಪಡೆಯ ಬಹುದು. ಅರ್ಜಿ ಸಲ್ಲಿಸಲು ಮೇ 28 ಕೊನೆ ದಿನಾಂಕ.

ಲಾರಿ ಚಕ್ರದಡಿ ಸಿಲುಕಿದ ಬೈಕ್: ಸವಾರ ಪಾರು



ಲಾರಿ ಚಕ್ರದಡಿ ಸಿಲುಕಿರುವ ಬೈಕ್ ಅನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮೇ 10(ಜಿಎ)–ಬೈಕೊಂದು ಡಿಕ್ಕಿ ಹೊಡೆದು ಲಾರಿ ಚಕ್ರದಡಿ ಸಿಲುಕಿ ಯಾವುದೇ ಪ್ರಾಣಾಪಾಯವಿಲ್ಲದೆ ಚಾಲಕ ಪಾರಾಗಿರುವ ಘಟನೆ ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿ ಸಂಭವಿಸಿದೆ.

ಮಹಾರಾಷ್ಟ್ರದ ಲಾರಿಯೊಂದು ಸರಕನ್ನು ಮೈಸೂರಿಗೆ ತಲುಪಿಸಿ ಬನುಮಯ್ಯ ವೃತ್ತದಿಂದ ಚಾಮರಾಜ ಜೋಡಿ ರಸ್ತೆಗೆ ಬಂದು ಪಾಠಶಾಲಾ ಜಂಕ್ಷನ್ ಕಡೆಗೆ ತಿರುಗುವಾಗ ಲಾರಿಯ ಎಡಭಾಗದಲ್ಲಿ ಪಲ್ಸರ್ (ಕೆಎ–45 ಇಬಿ–0736) ಬೈಕ್‌ನಲ್ಲಿ ಬರುತ್ತಿದ್ದ ಯುವಕನ ಬೈಕ್ ಚಕ್ರ ಲಾರಿ ಹಿಂಬದಿ ಚಕ್ರಕ್ಕೆ ತಾಕಿದೆ. ಈ ವೇಳೆ ಬೈಕ್ ಲಾರಿ ಚಕ್ರದಡಿ ಸಿಲುಕುತ್ತಿದ್ದಂತೆ ಯುವಕ ಬೈಕ್ ಬಿಟ್ಟು ಹಾರಿದ್ದಾನೆ. ಇದರಿಂದ ಯುವಕನಿಗೆ ಸಣ್ಣಪುಟ್ಟ ಗಾಯವಾಗಿದ್ದು, ತಕ್ಷಣ ಖಾಸಗಿ ಆಸ್ಪತ್ರೆಗೆ ಕರದೊಯ್ಯಲಾಯಿತು.

ಸ್ಥಳಕ್ಕೆ ಆಗಮಿಸಿದ ಕೃಷ್ಣರಾಜ ಸಂಚಾರ ಪೊಲೀಸರು ಲಾರಿ ಅಡಿ ಸಿಲುಕಿದ ವಾಹನವನ್ನು ತೆಗೆಯಲು ಹರಸಾಹಸಪಟ್ಟರು. ಲಾರಿಯನ್ನು ಬೈಕ್ ಮೇಲೆ ಹತ್ತಿಸಿ ತೆಗೆಯಲಾಯಿತು. ಈ ವೇಳೆ ಚಾಮರಾಜ ಜೋಡಿ ರಸ್ತೆಯಲ್ಲಿ ವಾಹನ ಸವಾರರು ಟ್ರಾಫಿಕ್ ಜಾಮ್‌ನಿಂದ ಪರದಾಡುವಂತಾಯಿತು.

ಭುವಿ–ಕೃನಾಲ್ ಆಟಕ್ಕೆ ಒಲಿದ ಜಯ; ಟೇಬಲ್ ಟಾಪರ್ ಆದ ಆರ್‌ಸಿಬಿ



ಕೃನಾಲ್ ಪಾಂಡ್ಯ ಬ್ಯಾಟಿಂಗ್ ವೈಖರಿ.

ರಾಯ್‌ಪುರ್, ಮೇ 10(ವಿವಿಹೆಚ್)–ಭುವನೇಶ್ವರ್ ಕುಮಾರ್ ಅವರ ಬಿಗಿ ಬೌಲಿಂಗ್ ದಾಳಿ ಹಾಗೂ ಕೊನೆಯ ಓವರ್‌ನಲ್ಲಿ ಭರ್ಜರಿ ಸಿಕ್ಸರ್ ಮೂಲಕ ಮುಂಬೈ ಇಂಡಿಯನ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 2 ವಿಕೆಟ್‌ಗಳ ಗೆಲುವು ದಾಖಲಿಸಿತು. ಈ ಪಂದ್ಯದಲ್ಲಿ ಗೆಲುವು ದಾಖಲಿಸುವ ಮೂಲಕ 14 ಪಾಯಿಂಟ್ ಮೂಲಕ ಆರ್‌ಸಿಬಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ಸಾಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಮುಂಬೈ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 166 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಮೊದಲು ಬ್ಯಾಟ್ ಮಾಡಿದ ಮುಂಬೈಗೆ ಭುವಿ, ಮೊದಲ ಓವರ್‌ನಲ್ಲೇ ರಿಯಾನ್ ರಿಕ್ಲೆಸ್ (2) ವಿಕೆಟ್ ಉರುಳಿಸುವ ಮೂಲಕ ಆಘಾತ ನೀಡಿದರು. ರೋಹಿತ್ ಶರ್ಮಾ 22(10), ನಾಯಕ ಸೂರ್ಯಕುಮಾರ್ ಯಾದವ್ ಗೋಲ್ಡನ್ ಡಕ್ ಆಗಿ ನಿರಾಸೆ ಮೂಡಿಸಿದರು.

ಈ ವೇಳೆ ಜೊತೆಯಾದ ನಮನ್ ಧಿರ್ ಮತ್ತು ತಿಲಕ್ ವರ್ಮಾ, ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 82 ರನ್ ಕಲೆಹಾಕಿದರು. ನಮನ್ ದರ್ 32 ಎಸೆತಗಳಲ್ಲಿ 47 ರನ್ ಗಳಿಸಿದರೆ, 42 ಎಸೆತಗಳಲ್ಲಿ 57 ರನ್ ಗಳಿಸಿ ತಿಲಕ್ ಆಟ ಮುಗಿಸಿದರು.

ಉಳಿದಂತೆ ವಿಲ್ ಜಾಕ್ಸ್ 10(10), ರಾಜ್ ಬಾವಾ 16(14), ಕಾರ್ಬಿನ್ ಬಾಷ್ ಅಜೇಯ 5(5), ದೀಪಕ್ ಚಾಹರ್ ಅಜೇಯ 1(2) ರನ್ ಗಳಿಸಿದರು.

ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ 23 ರನ್ ನೀಡಿ 4 ವಿಕೆಟ್ ಪಡೆದರೆ, ಜೋಶ್ ಹ್ಯಾಜಲ್‌ವುಡ್, ರಸೀಕ್ ಸಲಾಂ ದರ್, ರೊಮಾರಿರೊ ಶೆಫರ್ಡ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಆರ್‌ಸಿಬಿಗೆ ಆರಂಭಿಕ ಆಘಾತ ಎದುರಾಯಿತು. ವಿರಾಟ್ ಕೊಹ್ಲಿ ಗೋಲ್ಡನ್ ಡಕ್ ಆಗಿ ಹೊರನಡೆದರೆ, ದೇವ್‌ದತ್ ಪಡಿಕ್ಕಲ್ 12(11) ಹಾಗೂ ನಾಯಕ ರಜತ್ ಪಾಟೀದರ್ 8(8)ರನ್ ಗಳಿಗೆ ಆಟ ಮುಗಿಸಿದರು. ಜಾಕೋಬ್ ಬೆಥೆಲ್ 27(27) ಅಲ್ಪ ಹೋರಾಟ ತೋರಿ ನಿರ್ಗಮಿಸಿದರು.

ಈ ವೇಳೆ ಏಕಾಂಗಿಯಾಗಿ ಬ್ಯಾಟ್ ಬೀಸಿದ ಕೃನಾಲ್ ಪಾಂಡ್ಯ 46 ಎಸೆತಗಳಲ್ಲಿ 4 ಬೌಂಡರಿ, 5 ಸಿಕ್ಸರ್ ಸಹಿತ 73 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಉಳಿದಂತೆ ಜಿತೇಶ್ ಶರ್ಮಾ 18(12), ಟಿಮ್ ಡೇವಿಡ್ ಗೋಲ್ಡನ್ ಡಕ್, ರೊಮಾರೊಯೊ ಶೆಫರ್ಡ್ 4(11), ಭುವನೇಶ್ವರ್ ಕುಮಾರ್ ಅಜೇಯ 7(2) ಹಾಗೂ ರಸಿಕ್ ಸಲಾಂ ಧರ್ ಅಜೇಯ 3(2) ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು.

ಮುಂಬೈ ಪರ ಕಾರ್ಬಿನ್ ಬಾಷ್ ಪ್ರಮುಖ 4 ವಿಕೆಟ್ ಕಿತ್ತರು. ದೀಪಕ್ ಚಾಹರ್ 2, ಘಜನ್ಫರ್ ಹಾಗೂ ಬಾವಾ ತಲಾ ಒಂದೊಂದು ವಿಕೆಟ್ ಪಡೆದರು.

ರೈಲ್ವೆ ಸೇವಾ ಪುರಸ್ಕಾರ, ಡಿಆರ್‌ಎಂ ಪ್ರಶಂಸಾ ಪ್ರಶಸ್ತಿ ಪ್ರದಾನ



ಮೈಸೂರಿನ ಚಾಮುಂಡಿ ಕ್ಲಬ್‌ನಲ್ಲಿ ಭಾನುವಾರ ನಡೆದ 70ನೇ ರೈಲ್ವೆ ಸಪ್ತಾಹದಲ್ಲಿ ರೈಲ್ವೆ ಸೇವಾ ಪುರಸ್ಕಾರ, ಡಿಆರ್‌ಎಂ ಪ್ರಶಂಸಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಮೇ 10(ಜಿಎ)–ಮೈಸೂರಿನ ಚಾಮುಂಡಿ ಕ್ಲಬ್‌ನಲ್ಲಿ ನೈಋತ್ಯ ರೈಲ್ವೆಯ ಮೈಸೂರು ವಿಭಾಗದ ವತಿಯಿಂದ 2025ನೇ ಸಾಲಿನ 70ನೇ ರೈಲ್ವೆ ಸಪ್ತಾಹವನ್ನು ಯಶಸ್ವಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಉದ್ಘಾಟಿಸಿ, ರೈಲ್ವೆ ಸೇವಾ ಪುರಸ್ಕಾರ 2025 ಹಾಗೂ ಡಿಆರ್‌ಎಂ ಪ್ರಶಂಸಾ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಭಾರತೀಯ ರೈಲ್ವೆಯ ಕಾರ್ಯಕ್ಷಮತೆ ಮತ್ತು ಅಭಿವೃದ್ಧಿಗೆ ನೀಡಿದ ಅತ್ಯುತ್ತಮ ಸೇವೆ, ಸಮರ್ಪಣೆ ಮತ್ತು ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿಗಳನ್ನು ನೀಡಲಾಯಿತು. ಒಟ್ಟು 22 ಮಂದಿ ರೈಲ್ವೆ ಸೇವಾ ಪುರಸ್ಕಾರವನ್ನು ಪಡೆದರೆ, 55 ಮಂದಿ ಡಿಆರ್‌ಎಂ ಪ್ರಶಂಸಾ ಪ್ರಶಸ್ತಿಗೆ ಭಾಜನರಾದರು. ಈ ವೇಳೆ ಎಸ್‌ಡಬ್ಲ್ಯೂಆರ್, ಡಬ್ಲ್ಯೂಡಬ್ಲ್ಯೂಓ/ಮೈಸೂರು ವಿಭಾಗದ ವತಿಯಿಂದ ಹಿರಿಯ ಹಾಗೂ ನಿವೃತ್ತ ರೈಲ್ವೆ ನೌಕರರನ್ನು ಗೌರವಿಸುವ ಹಿರಿಯ ಸಮರ್ಪಿತ ನೌಕರರ ಸನ್ಮಾನಿಸಲಾಯಿತು.

ಈ ವೇಳೆ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಪ್ರಶಸ್ತಿ ವಿಜೇತರಿಗೆ ಅಭಿನಂದನೆ ಸಲ್ಲಿಸಿ, ರೈಲ್ವೆ ನೌಕರರ ಸಮರ್ಪಣೆ ಮತ್ತು ಪರಿಶ್ರಮವನ್ನು ಶ್ಲಾಘಿಸಿದರು. ಅವರು ಸುರಕ್ಷತೆ, ಸಮಯ ಪಾಲನೆ ಮತ್ತು ತಂಡ ಕಾರ್ಯದ ಮಹತ್ವವನ್ನು ಒತ್ತಿಹೇಳಿ, ಉತ್ತಮತೆಗೆ ಸದಾ ಪ್ರಯತ್ನಿಸಿ ಭಾರತೀಯ ರೈಲ್ವೆಯ ಬೆಳವಣಿಗೆಗೆ ಕೈಜೋಡಿಸುವಂತೆ ಕರೆ ನೀಡಿದರು.

ಈ ಸಮಾರಂಭವು ಮೈಸೂರು ವಿಭಾಗದ ಉತ್ತಮ ಕಾರ್ಯಪಟುತ್ವವನ್ನು ಗುರುತಿಸುವ, ನವೀನತೆ ಉತ್ತೇಜಿಸುವ ಮತ್ತು ದೇಶಸೇವೆಯತ್ತ ನೌಕರರನ್ನು ಪ್ರೇರೇಪಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ವಿವಿಧ ಉತ್ತಮ ನಿರ್ವಹಣೆ ಮತ್ತು ಕಾರ್ಯಕ್ಷಮತೆ ಶೀಲ್ಡ್‌ಗಳನ್ನು ಪ್ರದಾನ ಮಾಡಲಾಯಿತು. ಚಿಕ್ಕಜಾಜೂರು ನಿಲ್ದಾಣವು ಅತ್ಯುತ್ತಮ ನಿರ್ವಹಿತ ಪ್ರಮುಖ ನಿಲ್ದಾಣ ಪ್ರಶಸ್ತಿಯನ್ನು ಪಡೆದರೆ, ಹೊನ್ನವಳ್ಳಿ ರಸ್ತೆ ನಿಲ್ದಾಣವು ಅತ್ಯುತ್ತಮ ನಿರ್ವಹಿತ ಸಣ್ಣ ನಿಲ್ದಾಣ ಪ್ರಶಸ್ತಿಯನ್ನು ಪಡೆಯಿತು. ಶಿವಮೊಗ್ಗ ರೈಲ್ವೆ ಕಾಲೋನಿ ಮತ್ತು ಮೊಳಕಾಲ್ಮೂರು ರೈಲ್ವೆ ಕಾಲೋನಿಗಳು ಕ್ರಮವಾಗಿ ಅತ್ಯುತ್ತಮ ನಿರ್ವಹಿತ ದೊಡ್ಡ ಮತ್ತು ಸಣ್ಣ ಕಾಲೋನಿಗಳಾಗಿ ಗುರುತಿಸಲ್ಪಟ್ಟವು. ಮೈಸೂರು–ಸಾಯಿನಗರ ಶಿರಡಿ ವಾರಾಂತ್ಯ ಎಕ್ಸ್‌ಪ್ರೆಸ್ (ರೇಕ್ ಸಂ.16217/18) ಅತ್ಯುತ್ತಮ ನಿರ್ವಹಿತ ರೇಕ್ ಪ್ರಶಸ್ತಿಯನ್ನು ಪಡೆದರೆ, ಸುಬ್ರಹ್ಮಣ್ಯ ರಸ್ತೆ ರನ್ನಿಂಗ್ ರೂಮ್ ಅತ್ಯುತ್ತಮ ನಿರ್ವಹಿತ ರನ್ನಿಂಗ್ ರೂಮ್ ಪ್ರಶಸ್ತಿಗೆ ಪಾತ್ರವಾಯಿತು.

ಚಿತ್ರದುರ್ಗವು ಅತ್ಯುತ್ತಮ ನಿರ್ವಹಿತ ಟ್ರಾಕ್ಷನ್ ಸಬ್ ಸ್ಟೇಷನ್ ಹಾಗೂ ಎಸ್ ಎಸ್‌ಇ/ಸಿಗ್ನಲ್ ವಿಭಾಗ ಪ್ರಶಸ್ತಿಗಳನ್ನು ಪಡೆಯಿತು. ಹಾಸನ ವಿಭಾಗ ಎಸ್‌ಎಸ್‌ಇ/ಟೆಲಿಕಾಂ ಪ್ರಶಸ್ತಿ ಪಡೆದರೆ, ಸಕಲೇಶಪುರ ಅತ್ಯುತ್ತಮ ಅಪಘಾತ ಪರಿಹಾರ ರೈಲು ಪ್ರಶಸ್ತಿ ಪಡೆದಿತು. ಟ್ರಾಕ್ಷನ್ ಆಪರೇಷನ್ಸ್ ವಿಭಾಗಕ್ಕೆ ನವೀನತಾ ಶೀಲ್ಡ್ ನೀಡಲಾಯಿತು. ಮೈಸೂರು ಯಾಂತ್ರಿಕ ವಿಭಾಗದ ಕಚೇರಿಗೆ ಅತ್ಯುತ್ತಮ ನಿರ್ವಹಿತ ಕಚೇರಿ ಪ್ರಶಸ್ತಿ ನೀಡಲಾಯಿತು. ಎಸ್‌ಎಸ್‌ಇ/ಪಿ.ವೇ/ಕೃಷ್ಣರಾಜನಗರ ವಿಭಾಗಕ್ಕೆ ಅತ್ಯುತ್ತಮ ಪಿ.ವೇ ವಿಭಾಗ ಪ್ರಶಸ್ತಿ ನೀಡಲಾಯಿತು. ಕೋಚ್ ಮತ್ತು ವ್ಯಾಗನ್ ರೈಲ್ ಮದಾದ್ ವಾರ ರೂಮ್ ಅತ್ಯುತ್ತಮ ವಿಭಾಗೀಯ ನಿಯಂತ್ರಣವಾಗಿ ಗುರುತಿಸಲಾಯಿತು. ಈ ವೇಳೆ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಶಮ್ಮಾ ಹಮೀದ್, ಶಾಖಾಧಿಕಾರಿಗಳು, ಮಾನ್ಯತೆ ಪಡೆದ ಸಂಘಗಳು ಮತ್ತು ಸಂಘಟನೆಗಳು, ಎಸ್‌ಡಬ್ಲ್ಯೂಆರ್ ಡಬ್ಲ್ಯೂಡಬ್ಲ್ಯೂಓನ ಮೈಸೂರು ಸದಸ್ಯರು, ಉದ್ಯೋಗಿಗಳು ಉಪಸ್ಥಿತರಿದ್ದರು.

ಹುಣಸೂರಲ್ಲಿ 12 ಕೋಟಿ ಡ್ರಗ್ಸ್ ವಶಪಡಿಸಿಕೊಂಡ ಪ್ರಕರಣ: ಪ್ರಮುಖ ಆರೋಪಿ ಬಂಧನಕ್ಕೆ

ನಾಳೆ ಮುಂಬೈಗೆ ಪೊಲೀಸರ ವಿಶೇಷ ತಂಡ ಪ್ರಯಾಣ

- ಪ್ರಮುಖ ಆರೋಪಿ ಬಗ್ಗೆ ಸುಳಿವು
- ಡ್ರಗ್ಸ್ ಪೆಡ್ಲರ್ ಪತ್ತೆಗೆ ಟೆಕ್ನಿಕಲ್ ಫಾಲೋಅಪ್
- ಇಬ್ಬರು ಇನ್ಸ್‌ಪೆಕ್ಟರ್ ನೇತೃತ್ವದ ವಿಶೇಷ ತಂಡ ರಚನೆ
- ಡ್ರಗ್ಸ್ ಜಾಲ ಪತ್ತೆಗೆ ಪೊಲೀಸರ ಬೇಟೆ

ಮೈಸೂರು, ಮೇ.10(ಬಿಎಲ್‌ಯು)–ಮೈಸೂರು ಜಿಲ್ಲೆ ಹುಣಸೂರು ಬಳಿಯ ದಾಸನಪುರ ಹಾಗೂ ರತ್ನಪುರಿ ಗ್ರಾಮದ ನಡುವಿನ ತೋಟದಲ್ಲಿ 12 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡ ಪ್ರಕರಣದ ಪ್ರಮುಖ ಆರೋಪಿಯನ್ನು ಬಂಧಿಸಲು ಮೈಸೂರು ಜಿಲ್ಲಾ ಪೊಲೀಸರ ವಿಶೇಷ ತಂಡ ಮೇ 12ರಂದು ಮುಂಬೈಗೆ ತೆರಳಲಿದೆ.

ತೋಟದ ಮನೆಯ ಮೇಲೆ ಮಾರ್ಚ್ 27ರಂದು ರಾತ್ರಿ ದಾಳಿ ಮಾಡಿದ ಪೊಲೀಸರು 48 ಕೆ.ಜಿ.ತೂಕದ 12 ಕೋಟಿ ಮೌಲ್ಯದ ಮೆಫೆಡ್ರೋನ್ (Mephedrone) ಎಂಬ ಸಿಂಥೆಟಿಕ್ ಡ್ರಗ್ಸ್‌ನ್ನು ವಶಪಡಿಸಿಕೊಂಡಿದ್ದರು. ಈ ಸಂಬಂಧ ಮೈಸೂರು ಮಾತ್ರವಲ್ಲದೆ ಮುಂಬೈ, ರಾಜಸ್ಥಾನ ಹಾಗೂ ದೆಹಲಿಯಲ್ಲಿ ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು ಇರ್ಫಾನ್ ಖಾನ್, ಇಕ್ರಂ ಖಾನ್ ಹಾಗೂ ಇರ್ಫಾನ್ ಷರೀಫ್ ಎಂಬುವರನ್ನು ಬಂಧಿಸಿದ್ದರು. ಆದರೆ ಪರಿಣಾಮಕಾರಿಯಾದ ಕಾರ್ಯಾಚರಣೆ ನಡೆಸಿದರೂ ಪ್ರಮುಖ ಆರೋಪಿ ಪತ್ತೆ ಮಾತ್ರ ಸಾಧ್ಯವಾಗಿರಲಿಲ್ಲ. ಆತನ ಸುಳಿವು ದೊರೆತರೂ ಆತ ಮಾತ್ರ ಪೊಲೀಸರ ಕೈಗೆ ಸಿಗದೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ. ಈತನ ಬಂಧನಕ್ಕೆ ಮುಂಬೈ, ದೆಹಲಿ ಹಾಗೂ ರಾಜಸ್ಥಾನದಲ್ಲಿ 15 ದಿನ ಕಾರ್ಯಾಚರಣೆ ನಡೆಸಿ ವಿಫಲವಾದ ಪೊಲೀಸರು ಮೈಸೂರಿಗೆ ವಾಪಾಸಾಗಿದ್ದರು.

ಆದರೆ ಹಿಡಿದ ಕೆಲಸವನ್ನು ಅರ್ಧಕ್ಕೆ ನಿಲ್ಲಿಸದ ಮೈಸೂರು ಜಿಲ್ಲಾ ಪೊಲೀಸರು ಡ್ರಗ್ಸ್ ಪ್ರಕರಣದ ಪ್ರಮುಖ ಆರೋಪಿ ಬಗ್ಗೆ ಟೆಕ್ನಿಕಲ್ ಫಾಲೋಅಪ್ ಮಾಡಿ ಆತನ ಸುಳಿವು ಅರಿತಿದ್ದಾರೆ. ಈ ಹಿನ್ನೆಲೆಯಲ್ಲಿ ಮೇ 12ರಂದು ಇಬ್ಬರು ಇನ್ಸ್ ಪೆಕ್ಟರ್‌ಗಳು, ಇಬ್ಬರು ಸಬ್ ಇನ್ಸ್ ಪೆಕ್ಟರ್ ಗಳು ಹಾಗೂ ಎಂಟು ಸಿಬ್ಬಂದಿಗಳು ಸೇರಿದಂತೆ ಒಟ್ಟು 12 ಮಂದಿಯ ತಂಡ ಮಹಾರಾಷ್ಟ್ರಕ್ಕೆ ತೆರಳಲಿದೆ.

ಡ್ರಗ್ಸ್ ಚೈನ್ ಲಿಂಕ್ ನಂತೆ ಒಬ್ಬರಿಂದ ಒಬ್ಬರಿಗೆ ಸಂಪರ್ಕವಿರುವ ದೊಡ್ಡ ಜಾಲವಾಗಿ ಕಾರ್ಯ ನಿರ್ವಹಿಸುತ್ತಿದೆ. ಡ್ರಗ್ಸ್ ತಯಾರಿಸಿ, ಸಾಗಾಣಿಕೆ ಮಾಡಿ, ಮಾರಾಟ ಮಾಡುವ ದೊಡ್ಡ ಗ್ಯಾಂಗ್ ಇದ್ದು, ಅಂತರರಾಜ್ಯಕ್ಕೂ ವ್ಯಾಪಿಸಿದೆ. ಸದ್ಯ ಈ ಜಾಲ ಮಟ್ಟ ಹಾಕಲು ಪೊಲೀಸರು ಬೆನ್ನತ್ತಿ ಹೊರಟಿದ್ದಾರೆ. ಈ ಪ್ರಕರಣದ ಪ್ರಮುಖ ಆರೋಪಿಯನ್ನು ಪತ್ತೆ ಮಾಡಿದರೆ ಈ ಕೃತ್ಯದಲ್ಲಿ ಭಾಗಿಯಾಗಿರುವ ಇತರರ ಬಂಧನಕ್ಕೆ ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಪ್ರಮುಖ ಆರೋಪಿಯ ಬೇಟೆಗೆ ಹೊರಟಿದ್ದಾರೆ. ಡ್ರಗ್ಸ್ ಮಾರಾಟಕ್ಕೆ ಕಾಲೇಜು ಯುವಕ, ಯುವತಿಯರನ್ನೇ ಟಾರ್ಗೆಟ್ ಮಾಡಿದ್ದು, ಒಂದು ಬಾರಿ ಮಾದಕ ವಸ್ತು ಸೇವನೆಯ ನಶೆಗೆ ಸಿಲುಕಿದರೆ ಆತ ವ್ಯಸನಿಯಾಗುತ್ತಾನೆ. ತರುವಾಯ ಡ್ರಗ್ಸ್ ಖರೀದಿಗಾಗಿ ಎಂತಹ ಅಪರಾಧ ಕೃತ್ಯ ಎಸಗಲು ಹಿಂದೆ ಮುಂದೆ ನೋಡುವುದಿಲ್ಲ. ಇದರಿಂದ ಯುವ ಪೀಳಿಗೆಯ ಬದುಕೆ ನಾಶವಾಗುತ್ತಿದೆ. ಒಂದು ಗ್ರಾಂನ ಎಂಡಿಎಂಎ ಟ್ಯಾಬ್ಲೆಟ್ ಬೆಲೆ 1,500 ರೂ. ಇದ್ದು, ಇದರಿಂದ ಡ್ರಗ್ಸ್ ಪೆಡ್ಲರ್‌ಗಳು ಭಾರೀ ಲಾಭ ಗಳಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಡ್ರಗ್ಸ್ ಮಾರಾಟವನ್ನೇ ಮೂಲ ವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಆದರೆ ಇವರ ಲಾಭದ ಆಸೆಗೆ ಅರಿಯದ ಯುವಕ, ಯುವತಿಯರ ಬದುಕನ್ನೇ ನಾಶ ಮಾಡುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಇದರ ಗಂಭೀರತೆ ಅರಿತಿರುವ ಮೈಸೂರು ಜಿಲ್ಲಾ ಪೊಲೀಸರು ಡ್ರಗ್ಸ್ ಜಾಲವನ್ನು ಮಟ್ಟ ಹಾಕಲು ಪಣ ತೊಟ್ಟಿದ್ದು, ಕರ್ನಾಟಕ ಮಾತ್ರವಲ್ಲದೆ ಉತ್ತರ ಭಾರತದಲ್ಲೂ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ವೀರಶೈವ ಅನಾಥಾಲಯ ಟ್ರಸ್ಟ್ ವತಿಯಿಂದ 2026–27ನೇ ಸಾಲಿನ ಪ್ರಥಮ, ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿರುವ ಶೇ.50 ಕ್ಕಿಂತ ಹೆಚ್ಚು ಅಂಕಗಳಿಸಿರುವ, ಆರ್ಥಿಕವಾಗಿ ಹಿಂದುಳಿದ ಗ್ರಾಮಾಂತರ ಭಾಗದ ವೀರಶೈವ ವಿದ್ಯಾರ್ಥಿಗಳಿಂದ ಅನಾಥಾಲಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ.

ಅರ್ಜಿಗಳನ್ನು ಸಂಸ್ಥೆಯ ಕಚೇರಿಯಲ್ಲಿ ವಿತರಿಸಲಾಗುವುದು. ಅರ್ಜಿಯನ್ನು ಮೇ15 ರೊಳಗೆ ಭರ್ತಿ ಮಾಡಿ ಸಲ್ಲಿಸಬೇಕು. ಹೆಚ್ಚು ಅಂಕ ಪಡೆದ ಬಡ ವಿದ್ಯಾರ್ಥಿಗಳನ್ನು ಸಂದರ್ಶನದ ಮೂಲಕ ಆದ್ಯತೆ ಮೇರೆಗೆ ಪ್ರವೇಶಾತಿಗೆ ಆಯ್ಕೆ ಮಾಡಲಾಗುತ್ತದೆ. ಮೇ17ರಂದು ಬೆಳಗ್ಗೆ 10 ಗಂಟೆಗೆ ಅನಾಥಾಲಯದ ಕಚೇರಿಯಲ್ಲಿ ಸಂದರ್ಶನ ನಡೆಯಲಿದ್ದು, ವಿದ್ಯಾರ್ಥಿಗಳು ತಮ್ಮ ಪೋಷಕರನ್ನು ಕಡ್ಡಾಯವಾಗಿ ಜೊತೆಗೆ ಕರೆತರಬೇಕು.ಮಾಹಿತಿಗೆ ಮೊ:9916650106 ಸಂಪರ್ಕಿಸಬಹುದು.

ಕ್ಯಾನ್ಸರ್‌ಮುಕ್ತ ಸಮಾಜಕ್ಕಾಗಿ ಕ್ಯಾನ್ಸರ್ ಜಾಗೃತಿ ಮ್ಯಾರಥಾನ್




ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಭಾರತ್ ಕ್ಯಾನ್ಸರ್ ಆಸ್ಪತ್ರೆ ವತಿಯಿಂದ 'ಕ್ಯಾನ್ಸರ್ ಜಾಗೃತಿ ಮ್ಯಾರಥಾನ್' ನಡೆಸಲಾಯಿತು.

ಮೈಸೂರು, ಮೇ 10(ಎಂಕೆ)–ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ(ಎಂಎಂಸಿ ಅಂಡ್ ಆರ್‌ಐ) ಹಾಗೂ ಭಾರತ್ ಕ್ಯಾನ್ಸರ್ ಆಸ್ಪತ್ರೆ(ಬಿಹೆಚ್‌ಐಒ) ಸಹಯೋಗದೊಂದಿಗೆ 'ವೇಗಸ್–26' ಮತ್ತು 'ಸಂಸ್ಕೃತಿ–26' ಸಾಂಸ್ಕೃತಿಕ ಕಾರ್ಯಕ್ರಮಗಳ ಪೂರ್ವಭಾವಿಯಾಗಿ 'ಕ್ಯಾನ್ಸರ್ ಮುಕ್ತ ಸಮಾಜಕ್ಕಾಗಿ' ಹಮ್ಮಿಕೊಂಡಿದ್ದ ಕ್ಯಾನ್ಸರ್ ಜಾಗೃತಿ ಮ್ಯಾರಥಾನ್ ಯಶಸ್ವಿಯಾಯಿತು.

ಮೈಸೂರು ಮೆಡಿಕಲ್ ಕಾಲೇಜು ಆವರಣದಿಂದ ಆರಂಭವಾದ 5 ಕಿಲೋ ಮೀಟರ್ ಮ್ಯಾರಥಾನ್‌ನ ಪುರುಷರ ವಿಭಾಗದಲ್ಲಿ ಪುರುಷೋತ್ತಮ್ ಪ್ರಥಮ ಸ್ಥಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ದಿವ್ಯಶ್ರೀ ವಿಜೇತರಾಗಿ ಹೊರಹೊಮ್ಮಿದರು. ಇದಕ್ಕೂ ಮುನ್ನ ಮ್ಯಾರಾಥಾನ್‌ಗೆ ಚಾಲನೆ ನೀಡಿದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಮಾತನಾಡಿ, ವೇಗದ ಜಗತ್ತಿನಲ್ಲಿ ಜನರು ಒತ್ತಡ ಮತ್ತು ಅನಾರೋಗ್ಯಕರ ಜೀವನಶೈಲಿಯಿಂದ ಬಳಲುತ್ತಿದ್ದು, ಮ್ಯಾರಥಾನ್‌ಗಳು ದೈಹಿಕ ಶಕ್ತಿ, ಮಾನಸಿಕ ಶಾಂತಿ ಮತ್ತು ಆತ್ಮವಿಶ್ವಾಸ ಹೆಚ್ಚಿಸಲು ಸಹಕಾರಿಯಾಗಿವೆ. ಒಂದೇ ಗುರಿಯೊಂದಿಗೆ ವಿವಿಧ ಸ್ತರದ ಜನರನ್ನು ಒಗ್ಗೂಡಿಸಿ ಮುನ್ನಡೆಸಲು ಇಂತಹ ಕ್ರೀಡೆಗಳು ಪ್ರೇರಣೆಯಾಗಲಿವೆ ಎಂದರು.

ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಹಿರಿಯ ವೈದ್ಯ ಡಾ.ಕೆ.ಎನ್.ಸಂತೋಷ್ ಕುಮಾರ್ ಮಾತನಾಡಿ, ಕ್ಯಾನ್ಸರ್ ಕೇವಲ ರೋಗಿಯನ್ನಷ್ಟೇ ಅಲ್ಲದೆ ಇಡೀ ಕುಟುಂಬ ಮತ್ತು ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಸಮಯೋಚಿತ ಚಿಕಿತ್ಸೆಯಿಂದ ಜೀವ ಉಳಿಸಬಹುದು ಮತ್ತು ಚಿಕಿತ್ಸೆಯ ಸಮಯದಲ್ಲಿ ದೈಹಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಚೇತರಿಕೆಯ ವೇಗ ಹೆಚ್ಚಲಿದೆ ಮಾಹಿತಿ ನೀಡಿದರು. ಪೊಲೀಸ್ ಕಮಾಂಡಿಂಗ್ ಆಫೀಸರ್ ಗಂಗಾಧರ್, ವೈದ್ಯರಾದ ಡಾ.ಸರ್ವೇಶ ರಾಜೇಅರಸ್, ಡಾ.ಎಸ್.ಚಂದ್ರಶೇಖರ್, ಡಾ.ಶಶಿಧರ್, ಡಾ.ಎಂ.ಬಿ.ಆಶಾ, ಡಾ.ಸಚಿನ್, ಡಾ.ರಾಜಾಪುರ ಪರಶುರಾಮ್, ಡಾ.ಸುಮಂತ್, ಡಾ.ಹೇಮಂತ್ ಸೇರಿದಂತೆ ಕಾಲೇಜಿನ ಅಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.5.2026 ಸೋಮವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10ರಿಂದ.
- **ಹೈಲೈಫ್ ಶಾಪಿಂಗ್ ಮಹೋತ್ಸವ:** 18ನೇ ವರ್ಷದ ಹೈಲೈಫ್ ಶಾಪಿಂಗ್ ಮಹೋತ್ಸವ, ಅತ್ಯುತ್ತಮ ಉಡುಪು, ಆಭರಣ, ಫ್ಯಾಷನ್ ವಸ್ತುಗಳ ಪ್ರದರ್ಶನ–ಮಾರಾಟ, ಸ್ಥಳ: ರ್‍ಯಾಡಿಸನ್ ಬ್ಲೂ ಹೋಟೆಲ್, ಬೆಳಗ್ಗೆ 10ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಚರ್ಮ, ಬೆನ್ನುಮೂಳೆ ಮತ್ತು ಕೀಲು ನೋವು ಸಮಸ್ಯೆ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಒತ್ತಡ, ಆತಂಕ, ಬಾಲನೆರೆ, ದೃಷ್ಟಿಮಾಂದ್ಯ, ತಲೆನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ, ಅರ್ಥರೈಟಿಸ್, ಸಂಧಿವಾತ, ಆಮವಾತ, ಗೌಟ್, ಕುತ್ತಿಗೆನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಸೂತ್ರ ಆಯುರ್ಧಾಮ**: ವೇರಿಕೋಸ್ ವೇನ್ಸ್ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಕಾಲಿನ ರಕ್ತನಾಳ ಊತ, ಕಾಲಿನ ನೋವು, ಉಬ್ಬರೆ, ಚರ್ಮದ ಬಣ್ಣ ಬದಲಾವಣೆ, ಕಾಲಿನಲ್ಲಿ ಜೋಮು ಹಿಡಿಯುವುದು, ವಾಸಿಯಾಗದ ಗಾಯಗಳ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಸೂತ್ರ ಆಯುರ್ಧಾಮ, ಜೆಎಲ್‌ಬಿ ರಸ್ತೆ, ಚಾಮುಂಡಿಪುರಂ. ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ–ಹೆಚ್.ಎಂ.ಸುರೇಶ್, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಚಿನ್ಮಯ್ ಆತ್ರೇಯ, 7.45 ಚಿತ್ರಗೀತೆಗಳು, 8.30 ಮತ್ತು ಸಂಜೆ 5.30 ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್–ಶಿಶುಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 9.00 ನೆನಪಿನಂಗಳ–ಹಿರಿಯ ಸಂಸ್ಕೃತ ವಿದ್ವಾಂಸರಾದ ಪ್ರೊ.ಕೆ.ಕೃಷ್ಣಮೂರ್ತಿ ಅವರೊಂದಿಗೆ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎನ್.ರವಿಕಿರಣ್–ಚಿತ್ರವೀಣಾವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ. ಪ್ರಸ್ತುತಿ–ದಿಗ್ವಿಜಯ್.ಬಿ, **ಮಧ್ಯಾಹ್ನ** 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ–ಮಕ್ಕಳಲ್ಲಿ ಕಣ್ಣಿನ ಸಮಸ್ಯೆಗಳು ಮತ್ತು ಚಿಕಿತ್ಸೆ ಈ ಕುರಿತು ನೇತ್ರ ತಜ್ಞರಾದ ಡಾ.ರವಿಶಂಕರ್.ಜಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ರೇಣುಕಾ ನಾಕೋಡ್, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎ.ಜ್ಯೋತಿ–ಹಾಡುಗಾರಿಕೆ, 4.00 ಮಹಿಳಾರಂಗ–ಹನುಮ ಜಯಂತಿ ಕುರಿತು ಕಾರ್ಯಕ್ರಮ ವೈವಿಧ್ಯ. ಪ್ರಸ್ತುತಿ–ಮೈಸೂರಿನ ಕೃಷ್ಣಮೂರ್ತಿಪುರಂನ ಮಾನಸಿ ಮಂಡಳಿ ಸದಸ್ಯೆಯರು. 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಜಿಲ್ಲಾ ವಾರ್ತಾಪತ್ರ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ತರಕಾರಿ ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳನ್ನ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯದ, ವಿ.ಸಿ.ಫಾರಂ, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ದಿವ್ಯಾ ಮತ್ತು ಮೈಸೂರು ತಾಲೂಕು ನಾಗನಹಳ್ಳಿಯ ವಿಸ್ತರಣಾ ಶಿಕ್ಷಣ ಘಟಕದ ಸಹಾಯಕ ಪ್ರಾಧ್ಯಾಪಕರಾದ ಡಾ.ಶಿವಕುಮಾರ್. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: 2026ನೇ ಸಾಲಿನ ನವದೆಹಲಿಯ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಭಾಗವಹಿಸಿದ ಮೈಸೂರಿನ NCC ಕೆಡೆಟ್‌ಗಳಾದ ಸಾಂಚ್ ಮಂದಣ್ಣ.ಸಿ, ಅಂಶುಹೆಗಡೆ, ಅಹಮದ್ ಅಮರ್ ಖಾನ್, ನಂದನ್.ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಮಧುರೈ ಮಣಿ ಅಯ್ಯರ್ –ಹಾಡುಗಾರಿಕೆ, 10.00 'ಶ್ರೀ ವಿದ್ಯಾವಿಶಾರದ' ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಸವಿನೆನಪು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 11 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 25 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕರ್ನಾಟಕದ ಮುಖ್ಯಮಂತ್ರಿ ಎಷ್ಟು ದಿನ ಹುದ್ದೆಯಲ್ಲಿ ಇರ್ತಾರೋ ಗೊತ್ತಿಲ್ಲ!

ರಾಜ್ಯ ಕಾಂಗ್ರೆಸ್ ನಾಯಕತ್ವ ಬದಲಾವಣೆ ಪ್ರಹಸನಕ್ಕೆ ಪ್ರಧಾನಿ ಮೋದಿ ವ್ಯಂಗ್ಯ

● ಒಳಜಗಳ, ಸಿಎಂ ಕುರ್ಚಿ ಕಿತ್ತಾಟದಿಂದ ಜನರ ಸಮಸ್ಯೆ ಮೂಲೆಗುಂಪು ● ನಂಬಿದವರ ಬೆನ್ನಿಗೆ ಚೂರಿ ಹಾಕುವುದು ಕಾಂಗ್ರೆಸ್‌ಗೆ ರಕ್ತಗತವಾಗಿದೆ ● ಬೆಂಗಳೂರಲ್ಲಿ ಬಿಜೆಪಿ ಅಭಿನಂದನೆ ಸ್ವೀಕರಿಸಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ



ಬೆಂಗಳೂರಿಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿಯವರನ್ನು ರಾಜ್ಯ ಬಿಜೆಪಿ ವತಿಯಿಂದ ಅಭಿನಂದಿಸಲಾಯಿತು.

ಬೆಂಗಳೂರು: ಕರ್ನಾಟಕದ ಕಾಂಗ್ರೆಸ್ ಸರ್ಕಾರದಲ್ಲಿ ಒಳಜಗಳ ಹಾಗೂ ನಾಯಕತ್ವ ಗೊಂದಲದಿಂದ ಜನರ ಸಮಸ್ಯೆಗಳು ಮೂಲೆ ಗುಂಪಾಗಿವೆ ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದರು.

ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿದ ಬೆನ್ನಲ್ಲೇ ಬೆಂಗಳೂರು ಪ್ರವಾಸ ಕೈಗೊಂಡಿದ್ದ ಮೋದಿ ಅವರನ್ನು ಅಭಿನಂದಿಸಲು ರಾಜ್ಯ ಬಿಜೆಪಿ ವತಿಯಿಂದ ಹೆಚ್‌ಎಎಲ್ ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ನಾಯಕತ್ವದ ಚರ್ಚೆಯನ್ನು ಉಲ್ಲೇಖಿಸಿದ ಮೋದಿ, ಜನರ ಸಮಸ್ಯೆ ಪರಿಹರಿಸುವ ಬದಲು ಕಾಂಗ್ರೆಸ್ ಸರ್ಕಾರ, ಕಳೆದ ಮೂರು ವರ್ಷಗಳಿಂದ ಒಳಜಗಳ ಬಗೆಹರಿಸುವಲ್ಲೇ ಸಮಯ ಕಳೆಯುತ್ತಿದೆ. ಮುಖ್ಯಮಂತ್ರಿ ಎಷ್ಟು ದಿನ ಹುದ್ದೆಯಲ್ಲಿ ಇರುತ್ತಾರೆ ಎಂಬುದನ್ನೂ ಕಾಂಗ್ರೆಸ್ ನಿರ್ಧರಿಸಲಾಗುತ್ತಿಲ್ಲ. ಮತ್ತೊಬ್ಬರಿಗೆ ಅವಕಾಶ ಸಿಗುತ್ತದೆಯೋ ಇಲ್ಲವೋ ಎಂಬುದೂ ಸ್ಪಷ್ಟವಿಲ್ಲ. ಎಲ್ಲವೂ ತೂಗು ಹಗ್ಗದಲ್ಲಿ ಸಿಲುಕಿದೆ. ಈ ಕಿತ್ತಾಟದಿಂದಾಗಿ ಜನಸಾಮಾನ್ಯರ ಸಮಸ್ಯೆಗಳು ಮೂಲೆಗುಂಪಾಗಿವೆ ಎಂದು ಕುಟುಕಿದರು.

ಬೆನ್ನಿಗೆ ಚೂರಿ: ಬೆನ್ನಿಗೆ ಚೂರಿ ಹಾಕುವ ಬುದ್ಧಿ ಕಾಂಗ್ರೆಸ್‌ಗೆ ರಕ್ತಗತವಾಗಿ ಬಂದಿದೆ. ಅಧಿಕಾರಕ್ಕಾಗಿ ಅದು ಏನು ಬೇಕಾದರೂ ಮಾಡುತ್ತದೆ. ಕಾಂಗ್ರೆಸ್ 2014ಕ್ಕೂ

■ 6ನೇ ಪುಟಕ್ಕೆ



ತಮಿಳುನಾಡಿನಲ್ಲಿ 'ವಿಜಯ ಪರ್ವ' ಆರಂಭ

ಮುಖ್ಯಮಂತ್ರಿಯಾಗಿ ಜೋಸೆಫ್ ವಿಜಯ್ ಪ್ರಮಾಣ ವಚನ

● 9 ಸಚಿವರೂ ಶಪಥ ● ಮೊದಲ ದ್ರಾವಿಡೇತರ ಟಿವಿಕೆ ಮೈತ್ರಿಕೂಟ ಸರ್ಕಾರ ಅಸ್ತಿತ್ವಕ್ಕೆ ● ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿ ಹಲವು ಗಣ್ಯರು ಸಮಾರಂಭದಲ್ಲಿ ಭಾಗಿ



ಚೆನ್ನೈ: ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಮುಖ್ಯಸ್ಥ, ನಟ ಸಿ.ಜೋಸೆಫ್ ವಿಜಯ್ ಭಾನುವಾರ ತಮಿಳುನಾಡು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಚೆನ್ನೈನ ಜವಾಹರಲಾಲ್ ನೆಹರು ಇಂಡೋರ್ ಸ್ಟೇಡಿಯಂನಲ್ಲಿ ಬೆಳಗ್ಗೆ 10ಕ್ಕೆ ನಡೆದ ಭವ್ಯ ಸಮಾರಂಭದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ವಿಜಯ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಇದೇ ವೇಳೆ ಸಚಿವರಾಗಿ ಬಸ್ಸಿ ಎನ್.ಆನಂದ್, ಆಧವ್ ಅರ್ಜುನ, ಕೆ.ಎ.ಸೆಂಗೊಟ್ಟಯ್ಯನ್, ಕೆ.ಜಿ.ಅರುಣ್‌ರಾಜ್, ಪಿ.ವೆಂಕಟರಮಣನ್, ನಿರ್ಮಲ್ ಕುಮಾರ್, ಎ.ರಾಜ್ ಮೋಹನ್, ಎಸ್.ಕೀರ್ತನಾ ಹಾಗೂ ಕೆ.ಟಿ.ಪ್ರಭು ಸೇರಿ 9 ಶಾಸಕರು ಪ್ರಮಾಣ ವಚನ ಸ್ವೀಕರಿಸಿದರು. ಇದರೊಂದಿಗೆ ಸಾಂಪ್ರದಾಯಿಕ ದ್ರಾವಿಡ ಪಕ್ಷಗಳಾದ ಡಿಎಂಕೆ ಹಾಗೂ ಎಐಡಿಎಂಕೆ ವಾಡಿಕೆ ಮುರಿಯಿತು.

■ 6ನೇ ಪುಟಕ್ಕೆ

ಅಸ್ಸಾಂ ಮುಖ್ಯಮಂತ್ರಿಯಾಗಿ ಹಿಮಂತ ಬಿಸ್ವಾ ನಾಳೆ ಪ್ರಮಾಣವಚನ

ಹೊಸ ಸರ್ಕಾರ ರಚನೆಗೆ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಆಹ್ವಾನ



ಹಿಮಂತ ಬಿಸ್ವಾ

ಗುವಾಹಟಿ: ಅಸ್ಸಾಂನಲ್ಲಿ ಹೊಸ ಸರ್ಕಾರ ರಚಿಸಲು ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಹಿಮಂತ ಬಿಸ್ವಾ ಶರ್ಮಾ ಅವರಿಗೆ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಭಾನುವಾರ ಆಹ್ವಾನ ನೀಡಿದ್ದಾರೆ.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ನಾಯಕರು ರಾಜ್ಯಪಾಲ ಆಚಾರ್ಯ ಅವರನ್ನು ಲೋಕ ಭವನದಲ್ಲಿ ಭೇಟಿಯಾಗಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯಪಾಲರು ಹೊಸ ಸರ್ಕಾರ ರಚಿಸಲು ಡಾ.ಹಿಮಂತ ಬಿಸ್ವಾ ಶರ್ಮಾ ಅವರಿಗೆ ಆಹ್ವಾನ ನೀಡಿರುವುದಾಗಿ ಲೋಕ ಭವನ ಹೇಳಿಕೆ ಬಿಡುಗಡೆ ಮಾಡಿದೆ. ಮೈತ್ರಿಕೂಟದ ನಾಯಕರಾಗಿ ಆಯ್ಕೆಯಾಗಿರುವ ಶರ್ಮಾ ಅವರು

■ 6ನೇ ಪುಟಕ್ಕೆ

ಸಚಿವ ಡಿ.ಸುಧಾಕರ್ ಇನ್ನಿಲ್ಲ

ಇಂದು ಚಳ್ಳಕೆರೆಯಲ್ಲಿ ಅಂತ್ಯಕ್ರಿಯೆ; ಮೂರು ದಿನ ಶೋಕಾಚರಣೆ



ಬೆಂಗಳೂರು, ಮೇ10– ರಾಜ್ಯದ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ.ಸುಧಾಕರ್ (66) ಅವರು ಭಾನುವಾರ ಬೆಳಗಿನ ಜಾವ ನಿಧನರಾದರು.

ಹಿರಿಯೂರು ಕ್ಷೇತ್ರದ ಶಾಸಕರು ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿದ್ದ ಇವರು, ಕಳೆದ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಮೊಣಕಾಲು ಶಸ್ತ್ರಚಿಕಿತ್ಸೆ ಸಂಬಂಧ ಸಚಿವ ಸುಧಾಕರ್ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಶಸ್ತ್ರಚಿಕಿತ್ಸೆ ನಂತರ ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡು ಆರೋಗ್ಯ ಸ್ಥಿತಿ ಚಿಂತಾಜನಕವಾಗಿತ್ತು. ಬಳಿಕ ಅವರನ್ನು ಮಣಿಪಾಲ್ ಆಸ್ಪತ್ರೆಯಿಂದ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಿಮ್ಸ್

■ 6ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಗಂಡ ಮಹಡಿ ಮೇಲೆ ಹೋಗಲು ಮೆಟ್ಟಿಲು ಹತ್ತುತ್ತಿದ್ದ.

ಹೆಂಡತಿ : ಎಲ್ಲಿಗೆ ಹೋಗುತ್ತಿದ್ದೀರಿ?

ಗಂಡ : ಪಕ್ಷಿಗೆ ಕಾಳು ಹಾಕೋಕೆ!

ಹೆಂಡತಿ : ನಿಮ್ಮ ಪಕ್ಷಿ ತವರು ಮನೆಗೆ ಹೋಗಿದೆ, ಕೆಳಗೆ ಬನ್ನಿ...

ಮೈಸೂರು ಮಿತ್ರ

ಸೋಮವಾರ, ಮೇ 11, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮೆಚ್ಚುಗೆ ಮತ್ತು ಟೀಕೆ ಎರಡನ್ನೂ ಸಮಾನವಾಗಿ ಸ್ವೀಕರಿಸಿ...
ಏಕೆಂದರೆ ಹೂ ಅರಳಲು ಬಿಸಿಲು ಮತ್ತು ಮಳೆ ಎರಡೂ ಬೇಕೇ ಬೇಕು...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಣ ಇರುವ ಗಂಡನ ಕೈ ಹಿಡಿದರೂ ಋಣ ಇರುವಷ್ಟೆ ಪ್ರಾಪ್ತಿ.

ನಿಮ್ಮ ಪತ್ರಗಳು

ಇದು ಸಾಧ್ಯವೇ...?

ಮಾನ್ಯರೆ,

ತಮಿಳುನಾಡಿನಲ್ಲಿ ಭರ್ಜರಿಯಾಗಿ ಗೆಲುವ ಸಾಧಿಸಿರುವ ತಮಿಳು ಚಿತ್ರ ಜಗತ್ತಿನ ಅಪ್ರತಿಮ ನಾಯಕ ಎನಿಸಿಕೊಂಡಿರುವ ಟಿವಿಕೆ ಪಕ್ಷದ ಜೋಸೆಫ್ ವಿಜಯ್ ಅವರು ಮುಖ್ಯಮಂತ್ರಿಯಾಗಿ ಭಾನುವಾರ ಪ್ರಮಾಣ ವಚನ ಸ್ವೀಕರಿಸಿದ್ದು, ಅವರು ತಮಿಳುನಾಡಿನ ಜನತೆಗೆ ಕೊಟ್ಟಿರುವ ಆಶ್ವಾಸನೆಗಳು ಈಡೇರುವುದೇ ಎಂಬ ಪ್ರಶ್ನೆಗಳು ಜನರನ್ನು ಕಾಡಲಾರಂಭಿಸಿದೆ.

ಅವರು ನೀಡಿರುವ ಆಶ್ವಾಸನೆಗಳಲ್ಲಿ ಮೊದಲನೆಯದು 200 ಯೂನಿಟ್ ಉಚಿತ ವಿದ್ಯುತ್-ವಾರ್ಷಿಕ ಅಂದಾಜು ವೆಚ್ಚ 32,000 ಕೋಟಿಗಳು 2. ಉಚಿತ ಗ್ಯಾಸ್ ಸಿಲಿಂಡರ್‌ಗಳು-ವಾರ್ಷಿಕ ಅಂದಾಜು ವೆಚ್ಚ ರೂ.14,500 ಕೋಟಿಗಳು 3. ಹುಟ್ಟುವ ಪ್ರತಿ ಮಗುವಿಗೂ ಒಂದು ಚಿನ್ನದ ಉಂಗುರ ಅಂದಾಜು ವೆಚ್ಚ ರೂ.2,700 ಕೋಟಿಗಳು (ಹುಟ್ಟುವ ಅಂದಾಜು ಮಕ್ಕಳ ಸಂಖ್ಯೆ 9 ಲಕ್ಷ) 4. ತಾಳಿ ಭಾಗ್ಯ ವಾರ್ಷಿಕ ಅಂದಾಜು ವೆಚ್ಚ ರೂ. 6,000 ಕೋಟಿಗಳು 5. ಉಚಿತ ಸಾರಿಗೆ ವ್ಯವಸ್ಥೆ-ವಾರ್ಷಿಕ ಅಂದಾಜು ವೆಚ್ಚ ರೂ. 13,000 ಕೋಟಿ ಬೇಕು. (ಕರ್ನಾಟಕವನ್ನೂ ಮೀರಿಸಿದ ಆಶ್ವಾಸನೆಗಳ ಸರಮಾಲೆ ಎಂದರೆ ತಪ್ಪಾಗಲಾರದು!!!!)

ಈ ಎಲ್ಲವನ್ನು ಈಡೇರಿಸಲು ತಮಿಳುನಾಡು ಸರ್ಕಾರಕ್ಕೆ ಒಟ್ಟಾರೆಯಾಗಿ, ವಾರ್ಷಿಕ ಅಂದಾಜು ವೆಚ್ಚ 69,000 ಕೋಟಿಗಳು ಬೇಕಾಗುತ್ತದೆ. ಇದು ಒಂದು ಕಡೆಯಾದರೆ, ತಮಿಳುನಾಡಿನ ಒಟ್ಟಾರೆ ವಾರ್ಷಿಕ ಬಜೆಟ್ ಗಾತ್ರ 3.89 ಲಕ್ಷ ಕೋಟಿಗಳು. ಇದರ ಜೊತೆಗೆ, ತಮಿಳುನಾಡಿನ ಒಟ್ಟು ಸಾಲದ ಹೊರೆ ರೂ.10 ಲಕ್ಷ ಕೋಟಿಗಳು. (ಈ ಅಂಕಿ ಅಂಶಗಳು ವಿವಿಧ ಮೂಲಗಳಿಂದ ದೊರೆತ ಮಾಹಿತಿ) ಇಷ್ಟಾದರೂ ಟಿವಿಕೆ ಪಕ್ಷವು ಸಾಕಷ್ಟು ಭರಪೂರ ಆಶ್ವಾಸನೆಗಳನ್ನೇ ನೀಡಿದೆ. ಈ ಆಶ್ವಾಸನೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸದರಿ ಪಕ್ಷದ ಸರ್ಕಾರವು ಎಷ್ಟರ ಮಟ್ಟಿಗೆ ಜಯ ಸಾಧಿಸುವುದೋ ತಿಳಿಯದಾಗಿದೆ. ಒಟ್ಟಾರೆ, ವಾರ್ಷಿಕ ಬಜೆಟ್ ಗಾತ್ರವಾದ 3.89 ಕೋಟಿಗಳು ಹಾಗೂ ಸಾಲದ ಹೊರೆಯಾದ 10 ಲಕ್ಷ ಕೋಟಿಗಳನ್ನು ಗಣನೆಗೆ ತೆಗೆದುಕೊಂಡಾಗ ಬಹುಶಃ ನಮ್ಮ-ನಿಮ್ಮೆಲ್ಲರನ್ನು ಕಾಡುವ ಕಟ್ಟ ಕಡೆಯ ಏಕೈಕ ಪ್ರಶ್ನೆ, ಹೀಗೂ ಉಂಟೆ ಅಥವಾ ಇದು ಸಾಧ್ಯವೇ?

-ಹೆಚ್.ಕೆ.ಶಶಿಕುಮಾರ್, ರಾಮಕೃಷ್ಣನಗರ, ಮೈಸೂರು.

ಕೊನೆಗೂ ಬಂಗಾಳದಲ್ಲಿ ಕಮಲ ಅರಳಿತು

ಮಾನ್ಯರೆ,

ಅಲ್ಲಿ ಯಾವತ್ತಾದರೂ, ಕೇಸರಿ ಬಣ್ಣ ಕಾಣುವುದೇ ಎಂಬ ಆತಂಕ, ಇದ್ದೇ ಇತ್ತು, ಅದನ್ನು ತಡೆಯಲು, ಪ್ರಯತ್ನಗಳೂ ಬಹಳ ಇತ್ತು. ಜಾತಿ, ಧರ್ಮ, ಬೆದರಿಕೆ, ಹಿಂಸೆ, ಎಲ್ಲವೂ ನಡೆದಿತ್ತು. ಆದರೆ ಪ್ರಜಾಪ್ರಭುತ್ವದಲ್ಲಿ, ಮತದಾರನದ್ದೇ ತಾಕತ್ತು,

ಈ ಬಾರಿ, ದುರ್ಗೆಯ ಮೌನ ಆಶೀರ್ವಾದವೂ ಇತ್ತು. ಸಾವಿರ ಮಾತೆಯರ ಹಾರೈಕೆಗಳೂ ಇತ್ತು. ಪೀಡಕರ ಸಮಯವೂ ಮುಗಿದಿತ್ತು, ಆದರೂ ಅನಿಸದೇ ಇರದು, ಅಧಿಕಾರದ ಬೆಲೆ ಏನು?, ನಮ್ಮದೇ ದೇಶದಲ್ಲಿ ಅಧಿಕಾರ ಪಡೆಯ ಬಹುದೇ ಸಾವಿರ ಕಾರ್ಯಕರ್ತರ ಜೀವಗಳ ಬೆಲೆ ತೆತ್ತು? ಹಾಗಂತ ಇಂದಿಗೆ ಎಲ್ಲಾ ಮುಗಿಯಿತೇ? ಇಲ್ಲ ಇಂದಿನಿಂದ ಸಮರ ಶುರು. ಘಳಿಗೆ ಘಳಿಗೆಗೂ ಹೋರಾಟ, ಹಿಂಸೆ ಎಲ್ಲವನ್ನೂ ನೋಡಲಿದ್ದೇವೆ. ಕಾನೂನಿನ ಸಮರ ಅಡಿಪಾಯವಿಲ್ಲದ ವಿವಾದಗಳು, ಪ್ರಚೋದನೆಗಳು, ದಮನ ತಂತ್ರಗಳು ಎಲ್ಲದಕ್ಕೂ ಸಾಕ್ಷಿಯಾಗಲಿದ್ದೇವೆ. ಆದರೆ ಹೆಜ್ಜೆ ಇಡಲು ಜಾಗ ಸಿಕ್ಕಿದೆ, ಅದಕ್ಕಿನ್ನ ಹೆಚ್ಚಿನದು ಇನ್ನೇನು ಬೇಕು. ಪಕ್ಷಪಾತದ ಅನಿವಾರ್ಯತೆ ಇಲ್ಲವೇ ಇಲ್ಲ, ಕೇವಲ ನ್ಯಾಯ ಸಾಕು, ಸೇಡಿನ ವಾಂಛೆ ಬೇಡ, ಆದರೆ ಪೀಡಕರ ಬಗ್ಗೆ ಕರುಣೆಯೂ ಬೇಡ, ಅಸಲಿ ರಾಮರಾಜ್ಯದ ಕಲ್ಪನೆ ಸಾಕಾರ ಆದರೆ ಸಾಕು.

-ರಮೇಶ್ ಈ., ಗಂಗೋತ್ರಿ ಬಡಾವಣೆ, ಬಿಜೆಪಿ ಉಪಾಧ್ಯಕ್ಷರು, ಮೈಸೂರು.

ಹಾಳಾಗಿರುವ ರಸ್ತೆಗೆ ಡಾಂಬಾರು ಹಾಕಿಸಿ

ಮಾನ್ಯರೆ,

ಮೈಸೂರು ನಗರದ ಶ್ರೀರಾಂಪುರ 2ನೇ ಹಂತ, 15ನೇ ಕ್ರಾಸ್ ರಸ್ತೆಯನ್ನು ಸುಮಾರು 3-4 ತಿಂಗಳ ಹಿಂದೆ ಅಗೆದು ಗುಂಡಿ ಮಾಡಿ ಹೊಸದಾದ ಯುಜಿಡಿ ಪೈಪು ಅಳವಡಿಸಲಾಯಿತು. ಇದೇ ಗುಂಡಿಗೆ ಮಣ್ಣು, ಮಸಿ, ಜೆಲ್ಲಿ ತುಂಬಿ ಪ್ಯಾಚ್ ಮಾಡಲಾಯಿತು. ಗುಂಡಿಗಳಿಗೆ ಡಾಂಬರು ಹಾಕಿದ್ದರೂ ಸಹ ಈಗ ಇದು ಕುಸಿದು ಗುಂಡಿಗಳಾಗಿ, ಹಳ್ಳಕೊಳ್ಳವಾಗಿದೆ. ಮಳೆ ಬಂದರೆ ಗುಂಡಿಗಳಿಗೆ ನೀರು ತುಂಬಿ ರಸ್ತೆಯು ಹಾಳಾಗುತ್ತದೆ. ಯುಜಿಡಿ ಪೈಪ್ ಅಳವಡಿಸುವುದಕ್ಕಿಂತ ಮುಂಚೆ, ರಸ್ತೆ ತುಂಬಾ ಚೆನ್ನಾಗಿತ್ತು. ಈ ರಸ್ತೆಯನ್ನು ಅವಾಗವಾಗ ಅಗೆದು ಹಾಳು ಮಾಡಿ ಪರಿಸರವನ್ನೇ ನಾಶಮಾಡಿರುತ್ತಾರೆ. ಈ ರಸ್ತೆಯಲ್ಲಿ ಪ್ರತಿನಿತ್ಯ ಭಾರೀ ವಾಹನಗಳು, ಶಾಲಾ ವಾಹನಗಳು, ಜನಸಾಮಾನ್ಯರ ವಾಹನಗಳು, ಸಾರ್ವಜನಿಕರು ಓಡಾಡುತ್ತಿದ್ದು, ಈಗ ತುಂಬಾ ಕಷ್ಟಕರವಾಗಿದೆ. ಕಳಪೆ ರಸ್ತೆ ಎಂದರೂ ತಪ್ಪಾಗಲಾರದು. ಆದುದರಿಂದ ಸಂಬಂಧಪಟ್ಟ ಶಾಸಕರಾದ ಶ್ರೀವತ್ಸರವರು ಈ ಏರಿಯಾ ಕಡೆ ಬಂದು, ಇಲ್ಲಿನ ರಸ್ತೆಗಳ ಸ್ಥಿತಿಗಳನ್ನು ಗಮನಿಸಿ ಇನ್ನೂ ಮುಂದಾದರೂ ರಸ್ತೆಯನ್ನು ಹಾಳು ಮಾಡದೆ, ದುರಸ್ತಿಯಾಗಿರುವ ರಸ್ತೆಗೆ ಡಾಂಬರು ಹಾಕಿಸಿಕೊಡಬೇಕಾಗಿ ತಮ್ಮಲ್ಲಿ ಮನವಿ.

-ಕೆ.ಪಿ.ಬಸವಯ್ಯ, ಶ್ರೀರಾಂಪುರ 2ನೇ ಹಂತ, ಮೈಸೂರು.

ಸೂರ್ಯಕಾಂತಿ ಬೆಳೆಗಾರರಿಗೆ ಬೆಂಬಲ ಅಗತ್ಯ

ಮಾನ್ಯರೆ,

ಸರ್ಕಾರವು ಸೂರ್ಯಕಾಂತಿಗೆ ಪ್ರತಿ ಕ್ವಿಂಟಾಲ್‌ಗೆ ರೂಪಾಯಿ 7,411 ಬೆಂಬಲ ಬೆಲೆ ಘೋಷಿಸಿರುವುದು ಸ್ವಾಗತಾರ್ಹ ನಿರ್ಧಾರ. ಆದರೆ, ಕೇವಲ ಖರೀದಿ ಕೇಂದ್ರಗಳನ್ನು ತೆರೆಯುವುದರಿಂದಲೇ ರೈತರ ಸಂಕಷ್ಟ ನೀಗದು.

ಪ್ರಸ್ತುತ ಮಾರುಕಟ್ಟೆಯಲ್ಲಿ ಬೆಲೆ 4,500ರ ಆಸುಪಾಸಿನಲ್ಲಿದ್ದು, ಮುಕ್ತ ಮಾರುಕಟ್ಟೆ ಮತ್ತು ಬೆಂಬಲ ಬೆಲೆಯ ನಡುವಿನ ಈ ಭಾರಿ ವ್ಯತ್ಯಾಸವು ರೈತರನ್ನು ಆರ್ಥಿಕವಾಗಿ ಹೈರಾಣಾಗಿಸಿದೆ.ಕೇವಲ ಹತ್ತು ಸಾವಿರ ಕ್ವಿಂಟಾಲ್ ಸಂಗ್ರಹಣೆಯ ಗುರಿ ರಾಜ್ಯದ ಒಟ್ಟು ಇಳುವರಿಗೆ ಹೋಲಿಸಿದರೆ ಅತ್ಯಲ್ಪ. ಸರ್ಕಾರವು ಕನಿಷ್ಠ ಪಕ್ಷ ಇಳುವರಿಯ ಶೇ.50ರಷ್ಟನ್ನಾದರೂ ನೇರವಾಗಿ ಖರೀದಿಸಬೇಕು. ಮಧ್ಯವರ್ತಿಗಳ ಹಾವಳಿ ತಪ್ಪಿಸಲು ನೇರ ನಗದು ವರ್ಗಾವಣೆ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಪೂರ್ಣ ಗೊಳಿಸುವುದು ಅತ್ಯಗತ್ಯ. ಎಣ್ಣೆಕಾಳುಗಳ ಆಮದು ಸುಂಕವನ್ನು ವೈಜ್ಞಾನಿಕವಾಗಿ ಹೆಚ್ಚಿಸಿ ಸ್ಥಳೀಯ ಎಣ್ಣೆ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡಿದರೆ ಮಾತ್ರ ದೀರ್ಘ ಕಾಲಿಕ ಸುಸ್ಥಿರತೆ ಸಾಧ್ಯ. ಬೆಳೆ ವಿಮೆ ಮತ್ತು ತಾಂತ್ರಿಕ ಮಾರ್ಗದರ್ಶನ ರೈತರ ಕೈಸೇರಲಿ.

-ಡಾ. ವಿಜಯಕುಮಾರ್ ಎಚ್.ಕೆ., ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಹಸಿವು, ಬಡತನ ಶಾಪವಲ್ಲ; ಮನುಷ್ಯನಿಗೆ ವರದಾನ!

ಹಸಿವು ಮತ್ತು ಬಡತನವು ಮಾನವ ಜೀವನದ ಅತ್ಯಂತ ಕಠಿಣ ಅನುಭವಗಳಾಗಿವೆ. ಆದರೆ ಇವು ಕೇವಲ ಸಂಕಷ್ಟಗಳಷ್ಟೇ ಅಲ್ಲ, ಜೀವನದ ಮಹತ್ವದ ಪಾಠಗಳನ್ನು ಕಲಿಸುವ ಗುರುಗಳೂ ಆಗಿವೆ. ಹಸಿವು ಮಾನವನಿಗೆ ಆಹಾರದ ಮೌಲ್ಯವನ್ನು ತಿಳಿಸಿಕೊಡುತ್ತದೆ. ಬಡತನ ಶ್ರಮದ ಮಹತ್ವ, ಸಹನೆ ಮತ್ತು ತಾಳ್ಮೆಯ ಅಗತ್ಯವನ್ನು ಅರಿವಿಗೆ ತರುತ್ತದೆ. ಜೀವನದಲ್ಲಿ ಸೌಲಭ್ಯಗಳ ಕೊರತೆಯ ನಡುವೆಯೂ ಹೇಗೆ ಬದುಕಬೇಕು, ಹೇಗೆ ಮುಂದಕ್ಕೆ ಸಾಗಬೇಕು ಎಂಬುದನ್ನು ಇಂತಹ ಅನುಭವಗಳು ಕಲಿಸುತ್ತವೆ. ಇವು ವ್ಯಕ್ತಿಯ ಮನೋಬಲವನ್ನು ಗಟ್ಟಿಗೊಳಿಸಿ, ಸಂಕಷ್ಟಗಳನ್ನು ಎದುರಿಸುವ ಶಕ್ತಿ ನೀಡುತ್ತವೆ. ಆದ್ದರಿಂದ, ಹಸಿವು ಮತ್ತು ಬಡತನವು ಕೇವಲ ನೋವಿನ ಅನುಭವಗಳಲ್ಲ, ವ್ಯಕ್ತಿಯನ್ನು ರೂಪಿಸುವ ಮಹತ್ವದ ಜೀವನ ಪಾಠಗಳಾಗಿವೆ. ಅದು ಹೇಗೆಂದು ಅರಿಯುವುದಾದರೆ.

ಅಲ್ಲಾ ಕಣ್ರಿ, ಮನೆಯಲ್ಲಿ ಸ್ವಲ್ಪ ಸ್ವಚ್ಛತೆ ಹೆಚ್ಚು ಕಡಿಮೆಯಾದರೂ ಸಹಿಸದವರು ಇಲ್ಲಿ ಸ್ವಚ್ಛತೆ ಇಲ್ಲದಿದ್ದರೂ ಅದನ್ನೆಲ್ಲ ಗಮನಿಸದೆ ಒಂದೇ ಸಮನೆ ಹಸಿವನ್ನು ಸಹಿಸಿಕೊಳ್ಳಲಾಗದೆ ಊಟ ಮಾಡಿದ್ದರಲ್ಲ! ನೋಡಿದ್ರ ಹಸಿವು ಎಂತಹ ಸಂದರ್ಭದಲ್ಲಿಯೂ ಯಾರನ್ನು ಹೇಗೆ ಬೇಕಾದರೂ ಬದಲಾಯಿಸಬಲ್ಲದು.... !

ಮಡದಿ ಆಡಿದ ಮಾತುಗಳು ಹಸಿವು ನೀಗಿದ ಬಳಿಕ ಒಂದೇ ಸಮನೆ ಮನಸ್ಸಿನಲ್ಲಿ ಕಾಡತೊಡಗಿದವು. ಈ ಹಸಿವು, ಬಡತನ ಕಲಿಸುವ ಪಾಠಗಳು ಮನಮುಟ್ಟುವಂತೆ, ಸದಾಕಾಲ ನೆನಪಿಟ್ಟುಕೊಳ್ಳುವಂತೆ ಇರುತ್ತವೆ. ಬದುಕಿನಲ್ಲಿ ಹಸಿವು, ಬಡತನ ಕಲಿಸುವಷ್ಟು ಜೀವನದ ಪಾಠವನ್ನು ಬಹುಶಃ ಬೇರೆ ಯಾರು ಕಲಿಸಲು ಸಾಧ್ಯವಿಲ್ಲ. ಹೊಂದಾಣಿಕೆ, ಸಹನೆ, ಪರಸ್ಪರ ಗೌರವ ಹೀಗೆ ಅನೇಕ ಮೌಲ್ಯಗಳನ್ನು ಹಸಿವು, ಬಡತನ ಕಲಿಸಿಕೊಡಬಲ್ಲದು.

ಒಂದು ಗಮನಿಸಿ ಯಾವುದೇ ದೇವಸ್ಥಾನಗಳಲ್ಲಿ, ಸಭೆ, ಸಮಾರಂಭಗಳಲ್ಲಿ ಪ್ರಸಾದ, ಅನ್ನದಾನ ಇದೆ ಎಂದರೆ ಅಲ್ಲಿ ಸೇರಿರುವ /ಸೇರುವ ಜನ ಸಮುದಾಯವನ್ನು ನೋಡಿದಾಗ ಹಸಿವಿಗೆ ಇರುವ ಮಹತ್ವ ಅರಿವಾಗುತ್ತದೆ. ಹಸಿವು, ಬಡತನ ಮನುಷ್ಯನಲ್ಲಿ ಮರೆಯಾಗಿರುವ ಮೌಲ್ಯಗಳನ್ನು ಮತ್ತೆ ಮತ್ತೆ ನೆನಪಿಸಿಕೊಡುತ್ತವೆ. ಶ್ರದ್ಧೆ, ಪ್ರಾಮಾಣಿಕತೆಯ ಮೌಲ್ಯಗಳೊಂದಿಗೆ ಬದುಕಿನಲ್ಲಿ ಎಂತಹ ಸಂದರ್ಭ ಎದುರಾದರೂ ಎದೆಗುಂದದೆ ಮುನ್ನುಗ್ಗುವ ಛಲವನ್ನು ಬೆಳೆಸುತ್ತದೆ. ನೈತಿಕತೆಯ ಅಗತ್ಯವನ್ನು ತಿಳಿಸಿಕೊಡುತ್ತದೆ. ಇದಕ್ಕೆ ತಾಜಾ ಉದಾಹರಣೆಯೆಂದರೆ ಕೆಲವೇ ದಿನಗಳ ಹಿಂದೆ ಮಂಡ್ಯದಲ್ಲಿ ಪೌರಕಾರ್ಮಿಕರು ತಮಗೆ ಕಸದಲ್ಲಿ ಸಿಕ್ಕ ಲಕ್ಷ ಬೆಲೆಬಾಳುವ ಚಿನ್ನವನ್ನು ಅದರ ಮಾಲೀಕರಿಗೆ ಹಿಂತಿರುಗಿಸಿದ್ದು. ಇದು ನಿಸ್ವಾರ್ಥ ಮನೋಭಾವಕ್ಕೆ, ನೈತಿಕತೆಯ ಚಿತ್ರಣಕ್ಕೆ ಹಿಡಿದ ಕೈಗನ್ನಡಿ ಎಂದೇ ಹೇಳಬಹುದು.

ಅನ್ನದ ಮಹತ್ವ ತಿಳಿಸುತ್ತದೆ

ಹಸಿವು, ಬಡತನ ಕಲಿಸುವ ಪಾಠಗಳು ಅತೀಮುಖ್ಯವಾದುವು. ಆಹಾರವನ್ನು ವ್ಯರ್ಥ ಮಾಡುವವರ ಮುಂದೆ ಪ್ರತಿ ಅನ್ನದ ಅಗುಳಿನ ಮಹತ್ವವನ್ನು, ಅದಕ್ಕೆ ಗೌರವ ಕೊಡುವುದನ್ನು ಕಲಿಸುತ್ತದೆ. ಮತ್ತೊಬ್ಬರು ಏನೆಂದುಕೊಳ್ಳುವರೋ ಎಂದು ಭಾವಿಸದೇ ಎಲೆಯಲ್ಲಿ ಒಂದು ಅಗುಳನ್ನು ಬಿಡದಂತೆ ತಿನ್ನುವ ಮೂಲಕ ಅನ್ನಕ್ಕೆ ಕೊಡಬೇಕಾದ ಗೌರವವನ್ನು ಕಲಿಸುತ್ತದೆ. ಕಾರ್ಯಕ್ರಮವೊಂದರಲ್ಲಿ ಉಳಿದ ಯಥೇಚ್ಛ ಆಹಾರವನ್ನು ವ್ಯರ್ಥಮಾಡಬಾರದೆಂದು ಮೈಸೂರಿನಲ್ಲಿರುವ **ಅಕ್ಷಯ ಆಹಾರ ಜೋಳಿಗೆ** ಅವರಿಗೆ ಕರೆ ಮಾಡಿದರೆ ಅವರು ಬಂದು ಆಹಾರ ಸ್ವೀಕರಿಸುವರು. ಕುತೂಹಲದಿಂದ ಆಹಾರ ಖಾಲಿ ಆಗುತ್ತದೆಯೇ ಸರ್ ಎಂದು ಕೇಳಿದಾಗ ಅವರು ನಾವು ಕೆಲವು ಸ್ಥಳಗಳಿಗೆ ನಿರ್ದಿಷ್ಟ ಸಮಯದಲ್ಲಿ ಹೋಗುತ್ತೇವೆ. ಸರ್, ಕ್ಷಣದಲ್ಲೇ ಆಹಾರ ಖಾಲಿಯಾಗುತ್ತದೆ ಎಂದು ಉತ್ತರ ನೀಡಿದರು. ಹಸಿವಿನ ತೀವ್ರತೆಯ ಅರಿವಾದದ್ದುದರ ಜೊತೆಗೆ ಅನ್ನದ ಮಹತ್ವ ಮತ್ತಷ್ಟು, ಮಗದಷ್ಟು ಅರಿವಾಯಿತು.

ಅನ್ನ ದೇವರ ಮುಂದೆ
ಇನ್ನು ದೇವರು ಉಂಟೆ
ಅನ್ನವುಂಟಾದರುಣಲುಂಟು ಜಗಕೆಲ್ಲ ಅನ್ನವೇ ಪ್ರಾಣ ಸರ್ವಜ್ಞ

ಅನ್ನದ ಮಹತ್ವವನ್ನು ಕುರಿತು ಸರ್ವಜ್ಞ ಬರೆದ ತ್ರಿಪದಿ ಇದಾಗಿದ್ದು, ಅನ್ನಕ್ಕಿರುವ ಮೌಲ್ಯವನ್ನು ಇದಕ್ಕಿಂತ ಸುಂದರವಾಗಿ ಯಾರು ತಿಳಿಸಲಾಗದು. ಬಡತನದ ಬೇಗೆಯಲ್ಲಿ ಬೆಂದವರು, ಹಸಿವನ್ನು ಅನುಭವಿಸಿದವರಿಗೆ ಅನ್ನದ ಪ್ರತಿ ಅಗುಳಿನ ಮಹತ್ವ ತಿಳಿದಿರುತ್ತದೆ. ಹಸಿದವನಿಗೆ ಅನ್ನವೇ ಪರಮದೈವ. ಹಾಗಾಗಿ ಬಡತನ, ಹಸಿವು ಅನ್ನಕ್ಕೆ ಪ್ರತಿಯೊಬ್ಬರೂ ಕೊಡಲೇಬೇಕಾದ ಮಹತ್ವವನ್ನು ತಿಳಿಸುವಂತೆ ಮಾಡುತ್ತದೆ. ಶೋಕಿಗಾಗಿ, ಮತ್ತೊಬ್ಬರು ಏನು ತಿಳಿದುಕೊಳ್ಳುವರೋ ಎಂಬ ಭ್ರಾಂತಿಯು ಬೆನ್ನತ್ತುತ್ತದೆ. ಅನ್ನಕ್ಕೆ ಗೌರವ ನೀಡುವ ಗುಣವನ್ನು ಬಡತನ, ಹಸಿವು ತಿಳಿಸುತ್ತದೆ. ಬಹುಶಃ ಇಂದಿನ ಯುವಜನಾಂಗಕ್ಕೆ ಹಸಿವಿನ ಮಹತ್ವ ತಿಳಿದಿರುವುದು ಕಡಿಮೆ. ರಾತ್ರಿ ಉಳಿದ ಅನ್ನವನ್ನು ಬೆಳಗ್ಗೆ ಮಜ್ಜಿಗೆಯೊಂದಿಗೆ ಬೆರೆಸಿ ತಿನ್ನುವ ರುಚಿ ಅಥವಾ ಚಿತ್ರಾನ್ನ ಮಾಡಿಕೊಂಡು ಬಾಯಿ ಚಪ್ಪರಿಸಿದ ದಿನಗಳನ್ನು ಯಾರೇ ಆಗಲಿ ಮರೆಯಲಾದಿತೆ..



> ಹಸಿವು ಮತ್ತು ಬಡತನವು ಕೇವಲ ಕಷ್ಟಗಳಲ್ಲ; ಅವು ಜೀವನದ ಮಹತ್ವದ ಗುರುಗಳು. ಅವು ನಮ್ಮಲ್ಲಿ ಸಹನೆ, ಶ್ರಮದ ಮೌಲ್ಯ ಹಾಗೂ ಮಾನವೀಯತೆಯ ನಿಜವಾದ ಅರ್ಥವನ್ನು ಅರಿಯುವಂತೆ ಮಾಡುತ್ತವೆ. ಈ ಅನುಭವಗಳು ವ್ಯಕ್ತಿಯನ್ನು ಒಳಗಿನಿಂದ ಗಟ್ಟಿಗೊಳಿಸಿ, ಸಣ್ಣ ಸಾಧನೆಗಳಲ್ಲೂ ಸಂತೋಷ ಕಂಡುಕೊಳ್ಳುವ ಮನೋಭಾವವನ್ನು ಬೆಳೆಸುತ್ತವೆ. ಆದ್ದರಿಂದ ಹಸಿವು ಮತ್ತು ಬಡತನವನ್ನು ಕೇವಲ ಸಂಕಷ್ಟವೆಂದು ನೋಡದೇ, ಅವು ಕಲಿಸುವ ಪಾಠಗಳನ್ನು ಅರಿತುಕೊಂಡರೆ ನಮ್ಮ ಜೀವನ ಹೆಚ್ಚು ಅರ್ಥಪೂರ್ಣವಾಗುತ್ತದೆ. ಇತರರ ನೋವನ್ನು ಅರಿತು ಸಹಾಯ ಮಾಡುವ ಮನಸ್ಸು ಮೂಡಿದಾಗ ಮಾತ್ರ ಸಮಾಜದಲ್ಲಿ ಸಮಾನತೆ ಮತ್ತು ಮಾನವೀಯತೆ ಅರಳುತ್ತದೆ.

ಪ್ರಾಮಾಣಿಕತೆ, ಶಿಸ್ತನ್ನು ಕಲಿಸುತ್ತದೆ

ಬದುಕಿನಲ್ಲಿ ಪ್ರಾಮಾಣಿಕತೆ ಬೆಳೆಸಿಕೊಳ್ಳುವುದು, ಶಿಸ್ತಿನಿಂದ ಜೀವಿಸುವುದನ್ನು ಹಸಿವು, ಬಡತನ ತಿಳಿಸುತ್ತದೆ. ಬಡತನದ ಬೆಂಕಿಯಲ್ಲಿ ಬೆಂದರೂ ಅಡ್ಡದಾರಿಯಲ್ಲಿ ಹಣ ಸಂಪಾದಿಸುವ, ಅನ್ಯರ ಕಾಸಿಗೆ ದುರಾಸೆ ಪಡುವ ಗುಣಗಳನ್ನೆಲ್ಲ ಕಡೆಗಣಿಸಿ ಎಷ್ಟೇ ಅಡೆತಡೆಗಳು ಬದುಕಿನಲ್ಲಿ ಬಂದರೂ ಪ್ರಾಮಾಣಿಕವಾಗಿಯೇ ಬಾಳುತ್ತಾರೆ. ಹೇಗಾದರೂ ಬದುಕುವುದಕ್ಕಿಂತ ಹೀಗೆಯೇ ಬದುಕಬೇಕೆಂಬ ಶಿಸ್ತನ್ನು ಕಲಿಸುತ್ತದೆ.

ಬಡವನಾದವನು ಅಥವಾ ಬಡತನದ ಹಿನ್ನಲೆಯಲ್ಲಿ ಬಂದವರು, ಹಸಿವಿನಿಂದ ಕಂಗೆಟ್ಟವರು ಎಂದಿಗೂ ಮತ್ತೊಬ್ಬರ ಹಣಕ್ಕೆ, ಆಸ್ತಿಗೆ ಆಸೆಪಡುವುದಿಲ್ಲ. ನಮ್ಮ ಬದುಕು ಅವರಂತಾಗಬೇಕೆಂದು, ಕಷ್ಟಪಟ್ಟು ಹೇಗಾದರೂ ಸರಿ ನಮ್ಮಂತೆ ನಮ್ಮ ಮಕ್ಕಳಾಗಬಾರದೆಂದು ಸಾಲ - ಸೋಲ ಮಾಡಿ ಅವರಿಗೆ ಒಳ್ಳೆಯ ಶಾಲೆ, ಕಾಲೇಜಿನಲ್ಲಿ ವಿದ್ಯಾಭ್ಯಾಸ ಕೊಡಿಸುತ್ತಾ ಜೀವನದುದ್ದಕ್ಕೂ ಕಹಿಯನ್ನು ಉಂಡರೂ ಸಿಹಿಯನ್ನು ಕೊಡುವ ಕಲ್ಪವೃಕ್ಷದಂತೆ ಬದುಕುತ್ತಾರೆಯೇ ವಿನಃ ಎಂದಿಗೂ ಅಪ್ರಾಮಾಣಿಕರಾಗಿ ಉಳಿಯುವುದಿಲ್ಲ. ಏಕೆಂದರೆ ಅವರಿಗೆ ಬಡತನ, ಹಸಿವು ಜೀವನದ ಪಾಠವನ್ನು ಅಚ್ಚುಕಟ್ಟಾಗಿ ಮನಮುಟ್ಟುವಂತೆ ಬದುಕಿನ ಪುಟ ತೆರೆದು ಕೊಡುವಂತೆ ಮಾಡಿರುತ್ತದೆ.

ಆತ್ಮಾಭಿಮಾನ ಮೂಡಿಸುತ್ತದೆ

ಮತ್ತೊಬ್ಬರ ಮುಂದೆ ತಲೆಬಾಗದ ಗುಣವನ್ನು, ಏನೇ ಬಂದರೂ ಸ್ವಾಭಿಮಾನದಿಂದ ಬದುಕುವ ಆತ್ಮಾಭಿಮಾನವನ್ನು ಬಡತನ, ಹಸಿವು ಕಲಿಸಿಕೊಡುತ್ತದೆ. ಹಣ ಎಂದರೆ ಹೆಣವು ಬಾಯಿ ಬಿಡುತ್ತದೆ ಎಂಬ ಗಾದೆ ಮಾತಿಗಕ್ಕನುಗುಣವಾಗಿ ಕೆಲವರು ಹಣಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧರಾಗಿ ನಿಂತಿರುತ್ತಾರೆ. ಅರ್ಹತೆ ಇಲ್ಲದವರನ್ನು ಹೊಗಳುವುದು, ಬೇರೊಬ್ಬರ ಮೆಚ್ಚಿಸಲು ಯಾವ ಹಂತಕ್ಕೆ ಬೇಕಾದರೂ ಇಳಿಯಲು ತಯಾರಾಗಿರುತ್ತಾರೆ. ಆದರೆ ಬಡತನದ ಹಿನ್ನಲೆಯಲ್ಲಿ ಬಂದಿರುವ ವ್ಯಕ್ತಿ, ಹಸಿವಿನ ಕಷ್ಟದಲ್ಲಿ ನೊಂದು ಬಂದ ವ್ಯಕ್ತಿ ಯಾವುದೇ ಕಾರಣಕ್ಕೂ ತನ್ನ ತನವನ್ನು ಬಿಟ್ಟುಕೊಡುವುದಿಲ್ಲ. ಮತ್ತೊಬ್ಬರಿಗಾಗಿ ತನ್ನ ಆತ್ಮಾಭಿಮಾನವನ್ನು ಬಿಡಲು ಸಿದ್ಧನಿರುವುದಿಲ್ಲ. ಎಷ್ಟೇ ಕಷ್ಟಗಳು ಎದುರಾದರೂ ಸಂಬಂಧಿಕರ ಮುಂದೆ, ಗೆಳೆಯರ ಮುಂದೆ ಕೈಚಾಚದೇ ಒಂದಕ್ಕೆ ಎರಡರಷ್ಟು ಬಡ್ಡಿಯಾದರೂ ಸರಿ ಎಂದು ಸಾಲ ಮಾಡುತ್ತಾರೆಯೇ ಹೊರತು ಆತ್ಮಾಭಿಮಾನ ಮರೆತು ತನ್ನವರ ಬಳಿಯಲ್ಲಿ ಕೈಚಾಚಲಾರರು. ಬಡತನ, ಹಸಿವು ಕಲಿಸಿ ಕೊಡುವ ಅತೀ ದೊಡ್ಡ ಮೌಲ್ಯದ ಪಾಠ ಇದಾಗಿದೆ.

ಹೊಂದಾಣಿಕೆ ಮನೋಭಾವ ಬೆಳೆಸುತ್ತದೆ

ನಾನು ಹೇಳಿದಂತೆ ಉಳಿದವರು ಕೇಳಬೇಕು, ನಾನು ಯಾರೊಂದಿಗೂ ಹೊಂದಾಣಿಕೆ ಮಾಡಿಕೊಳ್ಳಲಾರೆ. ನನ್ನೊಂದಿಗೆ ಹೊಂದಿಕೆ ಮಾಡಿಕೊಂಡು ಇರಬೇಕು ಎನ್ನುವವರ ಮಧ್ಯೆ ಸಂದರ್ಭಕ್ಕೆ ತಕ್ಕಂತೆ ಹೇಗೆ ಬೇಕಾದರೂ ಹೊಂದಾಣಿಕೆ ಮಾಡಿಕೊಂಡು ಬದುಕುವ, ಬದಲಾದ ಪರಿಸ್ಥಿತಿಗೆ ತಕ್ಕಂತೆ ಜೀವನ ನಡೆಸುವ ಬಗೆಯನ್ನು ಬಡತನ, ಹಸಿವು ಕಲಿಸುತ್ತದೆ. ಬದುಕು ಕಲಿಸಿಕೊಟ್ಟ ಪಾಠ ಅವರಿಗೆ ಹೊಂದಾಣಿಕೆ ಮಾಡಿಕೊಂಡು ಮುನ್ನುಗ್ಗುವುದನ್ನು ಕಲಿಸಿರುತ್ತದೆ. ಕೋಪ, ತಾಪಗಳು ಬಂದರೂ ತಾಳ್ಮೆಯಿಂದ ಇರುವುದನ್ನು ಕಲಿಸಿಕೊಡುವ ಕೆಲಸವನ್ನು ಬಡತನ, ಹಸಿವು ಕಲಿಸಿಕೊಟ್ಟಿರುತ್ತದೆ. ತನ್ನಂತೆ ಇತರರು, ಅವರ ಭಾವನೆಗಳಿಗೂ ಬೆಲೆ ಕೊಡಬೇಕೆಂಬ ಅತೀ ದೊಡ್ಡ ಮೌಲ್ಯವನ್ನು ಬಡತನ, ಹಸಿವು ತಿಳಿಸಿಕೊಡುತ್ತದೆ.

ಛಲ-ಆತ್ಮವಿಶ್ವಾಸ ಹುಟ್ಟಿಸುತ್ತದೆ

ಬಡತನ, ಹಸಿವು ಮನುಷ್ಯರಲ್ಲಿ ಏನಾದರೂ ಹೊಸತನ್ನು ಸಾಧಿಸುವ ಛಲವನ್ನು, ಆತ್ಮವಿಶ್ವಾಸವನ್ನು ಹುಟ್ಟಿಸುತ್ತದೆ. ಸಾಧನೆಯ ಹಾದಿಯಲ್ಲಿ ಎದುರಾಗುವ ಯಾವ ತೊಂದರೆಗಳು ಅವರನ್ನು ಬಾಧಿಸುವುದಿಲ್ಲ. ಗೆದ್ದೆ ಗೆಲ್ಲಬೇಕೆಂಬ ಛಲ, ಮರಳಿ, ಮರಳಿ ಪ್ರಯತ್ನ ಮಾಡುವ ಹುಮ್ಮಸ್ಸನ್ನು ಧೃತಿಗೆಡದೆ ಮತ್ತೆ ಮತ್ತೆ ಬದುಕಿನಲ್ಲಿ ಭರವಸೆಯೊಂದಿಗೆ ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಮುನ್ನುಗ್ಗುವ ಅಚಲವಾದ ಧೈರ್ಯವನ್ನು ಬಡತನ, ಹಸಿವು ಕಲಿಸಿಕೊಡುತ್ತದೆ.

ಮಹಾನ್ ವ್ಯಕ್ತಿಗಳಾದವರಲ್ಲಿ ಬಹುತೇಕರು ಬಡತನದ ಹಿನ್ನೆಲೆಯಲ್ಲಿಯೇ ಬಂದವರು. ಆದರೆ ಅವರಿಗೆ ಸಾಧಿಸುವ ಗುರಿ ಮುಖ್ಯವಾಗಿ ಕಾಣಿಸಿತ್ತೆ ವಿನಃ ಬಡತನ,ಹಸಿವಲ್ಲ.

ಒಳ್ಳೆಯ ಗುರುವಾಗಿ ಬದುಕಿನ ಬಗ್ಗೆ ಬೋಧನೆ ಮಾಡುತ್ತದೆ

ಹಿಂದೆ ಗುರು, ಮುಂದೆ ಗುರಿ ಇದ್ದರೆ ಬದುಕಿನಲ್ಲಿ ಸಾಧನೆ ಸಾಧ್ಯವೆಂದು ಹೇಳುತ್ತಾರೆ. ಈ ಹಿನ್ನೆಲೆಯಿಂದ ನೋಡಿ ದಾಗ ಬಡತನ, ಹಸಿವು ಬದುಕಿನಲ್ಲಿ ಒಂದೊಳ್ಳೆಯ ಗುರುವಾಗಿ ಜೊತೆಗಿದ್ದು ನೈತಿಕತೆಯ ಪಾಠ ದೊಂದಿಗೆ ಮಾನವೀಯ ಮೌಲ್ಯಗಳನ್ನು ತಿಳಿಸುತ್ತಾ, ನಿಸ್ವಾರ್ಥದಿಂದ ಬದುಕುವ, ಬದುಕಿಗೆ ಬೇಕಾದ ಮೌಲ್ಯಗಳನ್ನು ರೂಢಿಸಿಕೊಳ್ಳುವ ಒಂದೊಳ್ಳೆಯ ಮಾರ್ಗದರ್ಶಕ ಗುರುವಿನಂತೆ ನಮ್ಮ ಜೊತೆಗಿದ್ದು ಬೋಧನೆ ಮಾಡುತ್ತದೆ.

ಬಡತನ, ಹಸಿವು ಶಾಪವಲ್ಲ ಅದೊಂದು ವರ, ನೈಜತೆಯಿಂದ ಜೀವಿಸುವುದನ್ನು, ಸರಿಯಾದ ಮಾರ್ಗದಲ್ಲಿ ಸಂಚರಿಸುವುದನ್ನು ತಿಳಿಸುತ್ತದೆ. **ಬಡವನಾಗಿ ಹುಟ್ಟಿದರೆ ಅದು ನಿನ್ನ ತಪ್ಪಲ್ಲ, ಬಡವನಾಗಿಯೇ ಸತ್ತರೆ ಅದು ನಿನ್ನ ತಪ್ಪು** ಎಂಬ ಮಹಾನ್ ವ್ಯಕ್ತಿಯ ಮಾತು ಬಡತನದ ಬೆಂಕಿಯಲ್ಲಿ ಮಿಂದೆದ್ದರೂ ಪುಟಿದೇಳುವ ಫಿನಿಕ್ಸ್ ಹಕ್ಕಿಯಂತೆ ಹೊರಬರಬೇಕೆಂಬ ವಿಶ್ವಾಸವನ್ನು ತಿಳಿಸುತ್ತದೆ. ಬಡವರಾಗಿ ಹುಟ್ಟಿ, ಹಸಿವಿನಿಂದ ಕಂಗೆಟ್ಟಿದ್ದರೆ ಅದಕ್ಕೆ ಮರುಕಪಡುವ ಅಗತ್ಯವಿಲ್ಲ. ಮುಕ್ತ ಅವಕಾಶಗಳಿವೆ. ಯಾವ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯವು ಕಲಿಸದಂತಹ ಪಾಠಗಳನ್ನು ಕಲಿಸುತ್ತದೆ. ಅದನ್ನು ಕಲಿತು ಬಾಳುವ ಮುಕ್ತ ಮನಸ್ಸಿದ್ದರೆ ಸಾಕು ಬದುಕು ಸುಂದರವಾಗಿ ಗೋಚರವಾಗಬಲ್ಲದು. ಹಸಿವು ಮತ್ತು ಬಡತನ ನಮ್ಮನ್ನು ಮುರಿಯಲು ಅಲ್ಲ, ನಮ್ಮನ್ನು ರೂಪಿಸಲು ಬರುತ್ತವೆ. ಅವುಗಳನ್ನು ಅರ್ಥಮಾಡಿಕೊಂಡು, ಅವು ಕಲಿಸುವ ಪಾಠಗಳನ್ನು ಅಳವಡಿಸಿಕೊಂಡರೆ, ಬದುಕು ನಿಜವಾಗಿಯೂ ಸುಂದರವಾಗುತ್ತದೆ.

ರಾಮಕೃಷ್ಣ ಆಶ್ರಮ, ಸಿದ್ಧಗಂಗಾ ಮಠ, ಸುತ್ತೂರು ಮಠ, ಆದಿಚುಂಚನಗಿರಿ ಮಠ ಹೀಗೆ ಕೆಲವು ಮಠ, ಆಶ್ರಮಗಳು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ಅಕ್ಷರ ದಾಸೋಹದಲ್ಲಿ ತೊಡಗಿದ್ದು ಆ ಮುಖೇನ ಬಡವರ ಜ್ಞಾನ-ದೇಹದ ಹಸಿವನ್ನು ನೀಗಿಸುವ ಕೆಲಸವನ್ನು ನಿರ್ವಹಿಸುತ್ತಿರುವುದು ಶ್ಲಾಘನೀಯ ಸಂಗತಿಯಾಗಿದೆ.

ಹಸಿವು ಮತ್ತು ಬಡತನವು ಕೇವಲ ಕಷ್ಟಗಳಲ್ಲ; ಅವು ಜೀವನದ ಮಹತ್ವದ ಗುರುಗಳು. ಅವು ನಮ್ಮಲ್ಲಿ ಸಹನೆ, ಶ್ರಮದ ಮೌಲ್ಯ, ಹಾಗೂ ಮಾನವೀಯತೆಯ ನಿಜವಾದ ಅರ್ಥವನ್ನು ಅರಿಯುವಂತೆ ಮಾಡುತ್ತವೆ. ಈ ಅನುಭವಗಳು ವ್ಯಕ್ತಿಯನ್ನು ಒಳಗಿನಿಂದ ಗಟ್ಟಿಗೊಳಿಸಿ, ಸಣ್ಣ ಸಾಧನೆಗಳಲ್ಲಿಯೂ ಸಂತೋಷವನ್ನು ಕಂಡು ಕೊಳ್ಳುವ ಮನೋಭಾವವನ್ನು ಬೆಳೆಸುತ್ತವೆ. ಆದ್ದರಿಂದ ಹಸಿವು ಮತ್ತು ಬಡತನವನ್ನು ಕೇವಲ ಸಂಕಷ್ಟವೆಂದು ನೋಡದೇ, ಅವು ಕಲಿಸುವ ಪಾಠಗಳನ್ನು ಅರಿತುಕೊಂಡರೆ ನಮ್ಮ ಜೀವನ ಹೆಚ್ಚು ಅರ್ಥಪೂರ್ಣವಾಗುತ್ತದೆ. ಇತರರ ನೋವನ್ನು ಅರಿತು ಸಹಾಯ ಮಾಡುವ ಮನಸ್ಸು ಮೂಡಿದಾಗ ಮಾತ್ರ ಸಮಾಜದಲ್ಲಿ ಸಮಾನತೆ ಮತ್ತು ಮಾನವೀಯತೆ ಅರಳುತ್ತದೆ. ಹೀಗಾಗಿ, ಈ ಸಂಕಷ್ಟಗಳು ನಮಗೆ ಬೆಳಕಿನ ದಾರಿಯನ್ನು ತೋರಿಸುವ ಮಾರ್ಗ ದರ್ಶಿಗಳೆಂಬ ಅರಿವಿನಿಂದ, ನಾವು ಜೀವನವನ್ನು ಧೈರ್ಯದಿಂದ ಎದುರಿಸಿ ಮುನ್ನಡೆಯಬೇಕು.

ಮೈಸೂರಲ್ಲಿ ತಾಯಂದಿರ ದಿನ ಆಚರಣೆ

ಮೈಸೂರು, ಮೇ 10(ಎಂಕೆ)- ಮೈಸೂರಿನ ವಿಜಯನಗರದ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಅಸೋಸಿಯೇಷನ್ ಆಫ್ ಅಲೈಯನ್ಸ್ ಕ್ಲಬ್ ಸರಸ್ವತಿಪುರಂ ವತಿಯಿಂದ ತಾಯಂದಿರ ದಿನ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್, ಛತ್ರಪತಿ ಶಿವಾಜಿ ಮಹಾರಾಜ್, ಸ್ವಾಮಿ ವಿವೇಕಾನಂದರು ಸೇರಿದಂತೆ ಸಾಧಕ ಮಹನೀಯರೆಲ್ಲರಿಗೂ ಅವರ ತಾಯಂದಿರೇ ಸ್ಫೂರ್ತಿಯಾಗಿದ್ದಾರೆ. ತಾಯಿಯ ಸ್ಫೂರ್ತಿಯಿಂದಲೇ ನಾಲ್ವಡಿಯವರು ಕನ್ನಂಬಾಡಿ ಅಣೆಕಟ್ಟೆ, ಮಾರಿಕಣಿವೆ ಜಲಾಶಯ ಮತ್ತಿತರ ಹಲವು ಸೇವಾ ಕಟ್ಟಡಗಳನ್ನು ಕಟ್ಟಿಸಿದರು. ಶಿವಾಜಿ ಮಹಾರಾಜ್ ಶತ್ರುಗಳಿಂದ ದೇಶವನ್ನು ಕಾಪಾಡಿದರು. ಸ್ವಾಮಿ ವಿವೇಕಾನಂದರು ವಿಶ್ವದೆಲ್ಲೆಡೆ ಭ್ರಾತೃತ್ವ ಪಸರಿಸಿದ್ದಾರೆ. ಹೀಗಾಗಿ ಪ್ರತಿಯೊಬ್ಬರೂ ತಾಯಂದಿರನ್ನು ಸದಾಕಾಲ ಸ್ಮರಿಸಬೇಕು. ಕೊನೆಗಾಲದವರೆಗೂ ತಾಯಂದಿರನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದರು.



ಜಿಲ್ಲಾ ಕಸಾಪ ಸಾಹಿತ್ಯ ಸಭಾಂಗಣದಲ್ಲಿ ಭಾನುವಾರ ನಡೆದ ತಾಯಂದಿರ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕರನ್ನು ಅಭಿನಂದಿಸಲಾಯಿತು.

ಸ್ತ್ರೀ ಎಂದರೇ ಶಕ್ತಿ. ತಾಯಿಯೇ ದೇವರು. ತಾಯಿ ಒಬ್ಬರಿದ್ದರೆ ಯಾವುದೇ ದೇವರು ಬೇಕಾಗಿಲ್ಲ. ಆದರೂ ಎಷ್ಟೇ ಮಂದಿ ತಾಯಿಯ ತ್ಯಾಗವನ್ನು ಮರೆತು ವೃದ್ಧಾಶ್ರಮಗಳಿಗೆ ಹಾಕಿದ್ದಾರೆ. ಅವರ ಕಣ್ಣೀರಿನ ಕಥೆ ಕೇಳಿದರೆ ವ್ಯಥೆಯಾಗುತ್ತದೆ. ಯಾವ ತಾಯಿಗೂ ಈ ಪರಿಸ್ಥಿತಿ ಬರಬಾರದು. ಈ ರೀತಿ ಆತ್ಮ ವಂಚನೆ ಮಾಡಿಕೊಂಡು ಯಾವ ಮಕ್ಕಳೂ ಬದುಕಾಟ ನಡೆಸಬಾರದು ಎಂದರು.

ಪ್ರಸ್ತುತ ಪರಿಸ್ಥಿತಿಯಲ್ಲಿ ಯಾರಿಗೂ ಯುದ್ಧ ಬೇಡ. ಆದರೂ ಅಮೆರಿಕಾ, ರಷ್ಯಾದಂತಹ ದೊಡ್ಡ ರಾಷ್ಟ್ರಗಳು ಇರಾನ್, ಉಕ್ರೇನ್ ಮೊದಲಾದ ದೇಶಗಳ ಮೇಲೆ ಯುದ್ಧ ಮಾಡುತ್ತಿವೆ. ಬಹುಶಃ ಅಲ್ಲಿನ ಅಧ್ಯಕ್ಷರಿಗೆ ತಾಯಂದಿರು ಸರಿಯಾಗಿ ಬುದ್ಧಿ ಹೇಳಿಲ್ಲ ಎನಿಸುತ್ತದೆ. ಚಿಕ್ಕಂದಿನಲ್ಲಿ ಹೇಳಿದ್ದರೂ ಈಗ ಅಧ್ಯಕ್ಷರಾಗಿರುವವರು ಕೇಳುತ್ತಿಲ್ಲ ಎನಿಸುತ್ತದೆ. ತಕ್ಷಣ ವಿಶ್ವದೆಲ್ಲೆಡೆ ಯುದ್ಧ ನಿಲ್ಲಿಸುವ ಕೆಲಸ ಆಗಬೇಕು ಎಂದು ಅವರು ಇದೇ ವೇಳೆ ಆಗ್ರಹಿಸಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ವಿಜಯ ವಿಠಲ ವಿದ್ಯಾಶಾಲೆಯ ಮನಸ್ವಿನಿ ಪ್ರದೀಪ್, ತೃತೀಯ ಸ್ಥಾನ ಪಡೆದ ಕೆ.ಆರ್. ನಗರ ಬಿ.ಎಸ್.ಮಾದಪ್ಪ ಸಂಸ್ಥೆಯ ವಿನುತಾ, ಮಾತನಾಡುವ ಗೊಂಬೆ ಖ್ಯಾತಿಯ ಸುಮಾ ರಾಜ್‌ಕುಮಾರ್, ಲ್ಯಾಬ್ ಟೆಕ್ನಿಷಿಯನ್ ವಸಂತ ಮೀನಾ, ಲಕ್ಷ್ಮಿ, ಡಾ.ಪಾಯಲ್ ಅವರನ್ನು ಸನ್ಮಾನಿಸಲಾಯಿತು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಅಸೋಸಿಯೇಷನ್ ಆಫ್ ಅಲೆಯನ್ಸ್ ಕ್ಲಬ್ ಸರಸ್ವತಿಪುರಂ ಅಧ್ಯಕ್ಷ ಎಸ್.ವೆಂಕಟರಮಣಪ್ಪ, ಕಸಾಪ ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ, ಕೋಶಾಧ್ಯಕ್ಷ ಜಿ.ಪ್ರಕಾಶ್, ಸಂಘಟಕ ಹೆಚ್.ವಿ.ಸುಬ್ಬರಾವ್ ಮತ್ತಿತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು: ಮೈಸೂರು ಸಿಟಿ ಗಾಂಧಿನಗರ ಆದಿ ಕರ್ನಾಟಕ ಅಭಿವೃದ್ಧಿ ಸಂಘದಿಂದ 2025-26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಾರ್ಡ್ ನಂ.28ರ ಆದಿ ಕರ್ನಾಟಕ ಜನಾಂಗದ ಬಲಗೈ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಮೇ 30ರೊಳಗೆ 2 ಭಾವಚಿತ್ರ, ಆಧಾರ್ ಕಾರ್ಡ್, ಎಸ್‌ಎಸ್‌ಎಲ್‌ಸಿ/ದ್ವಿತೀಯ ಪಿಯುಸಿ ದೃಢೀಕೃತ ಅಂಕ ಪಟ್ಟಿ, ಜಾತಿ ಪ್ರಮಾಣಪತ್ರಗಳೊಡನೆ ಸಂಘದ ಕಚೇರಿಗೆ ಅರ್ಜಿ ಸಲ್ಲಿಸುವುದು. ಮಾಹಿತಿಗೆ ಮೊ. 7019612341, 9738320080 ಸಂಪರ್ಕಿಸಿ.

ಜೆಎಸ್‌ಎಸ್ ಮಕ್ಕಳ ಕುಟೀರ

ನಂಜನಗೂಡು ತಾಲೂಕು ಹುಲ್ಲಹಳ್ಳಿಯಲ್ಲಿರುವ ಜೆಎಸ್‌ಎಸ್ ಮಕ್ಕಳ ಕುಟೀರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 5ರಿಂದ 10ನೇ ತರಗತಿವರೆಗೆ ಓದಿರುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. ಅರ್ಜಿಯನ್ನು ನೇರವಾಗಿ ಕಚೇರಿಯಿಂದ ಪಡೆಯಬಹುದು ಅಥವಾ ಮೊಬೈಲ್‌ನಲ್ಲಿ ಸಂಪರ್ಕಿಸಿದರೆ ವಾಟ್ಸಪ್ ಮೂಲಕ ಕಳುಹಿಸಿಕೊಡಲಾಗುವುದು. ಮಾಹಿತಿಗೆ ದೂ.0821-2548212, ಮೊ. 9980612001 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

'ಆರ್ಟ್ ಆಫ್ ಲಿವಿಂಗ್' ವಿಶ್ವಕ್ಕೆ ಮಾನಸಿಕ ಶಾಂತಿಯ ಸಾಫ್ಟ್‌ವೇರ್ ನೀಡಿದೆ

ನೂತನ ಧ್ಯಾನ ಮಂದಿರ ಉದ್ಘಾಟಿಸಿ ಪ್ರಧಾನಿ ಮೋದಿ ಬಣ್ಣನೆ



ಪ್ರಧಾನಿ ಮೋದಿ ಅವರನ್ನು ಶ್ರೀ ರವಿಶಂಕರ್ ಗುರೂಜಿ ಅಭಿನಂದಿಸಿದರು

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ನೂತನವಾಗಿ ನಿರ್ಮಿಸಿರುವ 'ಧ್ಯಾನ ಮಂದಿರ'ವನ್ನು ಭಾನುವಾರ ಉದ್ಘಾಟಿಸಿದರು.

ಸಂಸ್ಥೆಯ 45ನೇ ವಾರ್ಷಿಕೋತ್ಸವ ಮತ್ತು ಸಂಸ್ಥಾಪಕರಾದ ಶ್ರೀ ರವಿಶಂಕರ್ ಗುರೂಜಿ ಅವರ 70ನೇ ಜನ್ಮದಿನಾಚರಣೆಯ ಅಂಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಮಾನಸಿಕ ಆರೋಗ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ರಾಷ್ಟ್ರವ್ಯಾಪಿ ಸೇವಾ ಯೋಜನೆಗಳಿಗೂ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬೆಂಗಳೂರು ಕೇವಲ ತಂತ್ರಜ್ಞಾನದ ನಗರವಲ್ಲ, ಇದು ಆಧ್ಯಾತ್ಮಿಕ ಚೇತನದ ಕೇಂದ್ರವೂ ಹೌದು. ಬೆಂಗಳೂರು ನಗರವು ವಿಶ್ವಕ್ಕೆ ಸಾಫ್ಟ್‌ವೇರ್ ಅನ್ನು ನೀಡುತ್ತಿದೆ. ಅದೇ ರೀತಿ ಆರ್ಟ್ ಆಫ್ ಲಿವಿಂಗ್ ಮೂಲಕ ವಿಶ್ವಕ್ಕೆ ಮಾನಸಿಕ ಶಾಂತಿಯ ಸಾಫ್ಟ್‌ವೇರ್ ಅನ್ನೂ ನೀಡುತ್ತಿದೆ. ಯೋಗ, ಧ್ಯಾನ ಮತ್ತು ಪ್ರಾಣಾಯಾಮಗಳು ಭಾರತದ ಸಂಸ್ಕಾರದ ಅವಿಭಾಜ್ಯ ಅಂಗಗಳಾಗಿದ್ದು, ಇವುಗಳನ್ನು ಜಾಗತಿಕ ಮಟ್ಟದಲ್ಲಿ ಜನಪ್ರಿಯಗೊಳಿಸುವಲ್ಲಿ ಈ ಸಂಸ್ಥೆಯ ಪಾತ್ರ ಹಿರಿದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆಧ್ಯಾತ್ಮಿಕತೆ ಎಂದರೆ ಕೇವಲ ಧ್ಯಾನವಲ್ಲ, ಅದು ಸಮಾಜ ಸೇವೆಯನ್ನೂ ಒಳಗೊಂಡಿರಬೇಕು ಎಂಬ ಗುರೂಜಿಯವರ ತತ್ವ ಶ್ಲಾಘನೀಯ. ನಮ್ಮಲ್ಲಿ ಸೇವೆ ಎನ್ನುವುದು ಪರಮ ಧರ್ಮ. ಪರೋಪಕಾರವೇ ಪುಣ್ಯ, ಪರಪೀಡನೆಯೇ ಪಾಪ. ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಪ್ರತಿ ಕಾರ್ಯಕರ್ತನಲ್ಲೂ ಸೇವಾ ಭಾವನೆ ಎದ್ದು ಕಾಣುತ್ತಿದೆ. ಗುರೂಜಿ ಅವರು ಕಳೆದ 45 ವರ್ಷಗಳ ಹಿಂದೆ ಬಿತ್ತಿದ ಬೀಜ ಇಂದು ವಿಶಾಲವಾದ ಹೆಮ್ಮರವಾಗಿ ಬೆಳೆದು ನಿಂತಿದೆ. ಈ ವೃಕ್ಷದ ಸಾವಿರಾರು ಶಾಖೆಗಳು ಜಗತ್ತಿನಾದ್ಯಂತ ಲಕ್ಷಾಂತರ ಜನರ ಬದುಕನ್ನು ಸುಂದರಗೊಳಿಸುತ್ತಿವೆ ಎಂದರು.

ಭಾರತವು ಜಗತ್ತಿಗೆ ಶಾಂತಿ ಮತ್ತು ಮಾನಸಿಕ ನೆಮ್ಮದಿಯನ್ನು ನೀಡುವ ಸಾಮರ್ಥ್ಯ ಹೊಂದಿದೆ. ಯೋಗ ಮತ್ತು ಸುದರ್ಶನ ಕ್ರಿಯೆಯಂತಹ ಭಾರತೀಯ ಪ್ರಾಚೀನ ವಿದ್ಯೆಗಳನ್ನು 180ಕ್ಕೂ ಹೆಚ್ಚು ದೇಶಗಳಿಗೆ ತಲುಪಿಸುವ ಮೂಲಕ ಗುರೂಜಿಯವರು ಭಾರತವನ್ನು ಆಧ್ಯಾತ್ಮಿಕವಾಗಿ 'ವಿಶ್ವಗುರು' ಸ್ಥಾನದಲ್ಲಿ ನಿಲ್ಲಿಸಲು ಶ್ರಮಿಸುತ್ತಿದ್ದಾರೆ. ನೂತನ ಧ್ಯಾನ ಮಂದಿರವು ಲಕ್ಷಾಂತರ ಜನರಿಗೆ ಆಂತರಿಕ ಶಾಂತಿ ನೀಡುವ ಕೇಂದ್ರವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಾಕ್‌ನಲ್ಲಿ ರಕ್ತದೋಕುಳಿ: ಉಗ್ರ ಸಂಘಟನೆ ದಾಳಿಗೆ 21 ಸೈನಿಕರು ಬಲಿ

ಇಸ್ಲಾಮಾಬಾದ್: ವಾಯುವ್ಯ ಪಾಕಿಸ್ತಾನದಲ್ಲಿ ಪೊಲೀಸ್ ಚೆಕ್‌ಪಾಯಿಂಟ್ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ 21 ಸೈನಿಕರು ಸಾವನ್ನಪ್ಪಿದ್ದು ಅನೇಕ ಜನ ಗಾಯಗೊಂಡಿದ್ದಾರೆ. ದಾಳಿಕೋರರು ಮೊದಲು ಪೊಲೀಸ್ ಚೆಕ್‌ಪಾಯಿಂಟ್‌ನಲ್ಲಿ ಕಾರ್ ಬಾಂಬ್ ಸ್ಫೋಟಿಸಿದ್ದು ನಂತರ ಭಾರೀ ಗುಂಡು ಹಾರಿಸಿದರು. ಇದರಿಂದಾಗಿ ಪೊಲೀಸರಿಗೆ ಚೇತರಿಸಿಕೊಳ್ಳಲು ಅಥವಾ ಪ್ರತೀಕಾರ ತೀರಿಸಿಕೊಳ್ಳಲು ಸಮಯವಿರಲಿಲ್ಲ. ದಾಳಿಯ ನಂತರ, ದಾಳಿಕೋರರು ಪೊಲೀಸರ ಶಸ್ತ್ರಾಸ್ತ್ರಗಳನ್ನು ದೋಚಿ ಸ್ಥಳದಿಂದ ಪರಾರಿಯಾಗಿದ್ದರು. ಸಶಸ್ತ್ರ ಗುಂಪು ಇತ್ತೇಹಾದ್-ಉಲ್-ಮುಜಾಹಿದ್ದೀನ್ ಪಾಕಿಸ್ತಾನ್ ದಾಳಿಯ ಹೊಣೆಯನ್ನು ಹೊತ್ತುಕೊಂಡಿದೆ. ಖೈಬರ್ ಪಖ್ತುಂಖ್ವಾದ ಜಿಲ್ಲೆಯ ಬನ್ನು ಎಂಬಲ್ಲಿ ಶನಿವಾರ ತಡರಾತ್ರಿ ಈ ದಾಳಿ ನಡೆದಿದೆ. ಈ ದಾಳಿಗಳು ಅಫ್ಘಾನ್ ಗಡಿಯಲ್ಲಿ ಮತ್ತೆ ಹೋರಾಟಕ್ಕೆ ಕಾರಣವಾಗಬಹುದು ಎನ್ನಲಾಗಿದೆ.

ಐಎಫ್‌ಎಸ್ ಪರೀಕ್ಷೆಯಲ್ಲಿ ಬೆಳಗಾವಿ ರೈತನ ಪುತ್ರ ದೇಶಕ್ಕೆ ಪ್ರಥಮ ರ್‍ಯಾಂಕ್

ಬೆಳಗಾವಿ: ಬೆಳಗಾವಿಯ ಅಥಣಿ ತಾಲೂಕಿನ ಸವಡಿ ಗ್ರಾಮದ ಬಸವರಾಜ



ಧರೆಪ್ಪ ಕೆಂಪವಾಡ, ಕೇಂದ್ರ ಸಾರ್ವಜನಿಕ ಸೇವಾ ಆಯೋಗ ನಡೆಸಿದ ಪ್ರತಿಷ್ಠಿತ ಭಾರತೀಯ ಅರಣ್ಯ ಸೇವೆ(ಐಎಫ್‌ಎಸ್) ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಮೊದಲ ರ್‍ಯಾಂಕ್ ಪಡೆದಿದ್ದಾರೆ.

ರೈತನ ಮಗನಾದ ಬಸವರಾಜ ಅವರ ಯಶಸ್ಸು ಪರಿಶ್ರಮ, ದೃಢನಿಶ್ಚಯ ಮತ್ತು ಗ್ರಾಮೀಣ ಪ್ರತಿಭೆಗೆ ಸ್ಫೂರ್ತಿದಾಯಕ ಉದಾಹರಣೆಯಾಗಿದ್ದು, ಸಂಬಂಧಿಕರು, ಸ್ನೇಹಿತರು ಮತ್ತು ಗ್ರಾಮಸ್ಥರು ಇಡೀ ಕುಟುಂಬವನ್ನೇ ಅಭಿನಂದಿಸಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ, ನಂತರ ಪಿಯುಸಿವರೆಗೆ ಅಥಣಿ ಪಟ್ಟಣದಲ್ಲಿ, ಪದವಿ ಶಿರಸಿಯಲ್ಲಿ ವಿದ್ಯಾಭ್ಯಾಸ ಮಾಡಿದ ಬಸವರಾಜ, ಬೆಂಗಳೂರಿನಲ್ಲಿ ಯುಪಿಎಸ್‌ಸಿ ಪರೀಕ್ಷೆಗಳಿಗೆ ತಯಾರಿ ನಡೆಸಿದ್ದರು.

ತಿರುಚಿರಾಪಳ್ಳಿ ವಿಧಾನಸಭೆ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ ಸಿಎಂ ವಿಜಯ್!



ಚೆನ್ನೈ: ಟಿವಿಕೆ ಮುಖ್ಯಸ್ಥ ಮತ್ತು ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಭಾನುವಾರ ತಿರುಚಿರಾಪಳ್ಳಿ ಪೂರ್ವ ವಿಧಾನಸಭಾ ಕ್ಷೇತ್ರಕ್ಕೆ ರಾಜೀನಾಮೆ ನೀಡಿ, ಪೆರಂಬೂರು ಕ್ಷೇತ್ರವನ್ನು ಉಳಿಸಿಕೊಂಡಿದ್ದಾರೆ ಎಂದು ರಾಜ್ಯ ವಿಧಾನಸಭಾ ಸಚಿವಾಲಯ ತಿಳಿಸಿದೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲು ವಿಜಯ್ ತಮ್ಮ ರಾಜೀನಾಮೆಯನ್ನು ಸಲ್ಲಿಸಿ, ಸಚಿವರಾದ ಕೆಎ ಸೆಂಗೋಟ್ಟೈಯನ್ ಮತ್ತು ಪಿ ವೆಂಕಟರಮಣ್ ಮೂಲಕ ವಿಧಾನಸಭೆಯ ಪ್ರಧಾನ ಕಾರ್ಯದರ್ಶಿ ಕೆ.ಶ್ರೀನಿವಾಸನ್ ಅವರಿಗೆ ಪತ್ರವನ್ನು ಕಳುಹಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ

ಸೋಮವಾರ 11 ಮೇ 2026

ಸಂತ್ರಸ್ಥರಿಗೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯರಿಂದ ಧನಸಹಾಯ



ಸಂತ್ರಸ್ಥರ ಮನೆಗೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಭೇಟಿ ನೀಡಿದ್ದರು.

ಶ್ರೀರಂಗಪಟ್ಟಣ, ಮೇ 10–ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡಿದ್ದ ತಾಲೂಕಿನ ಅರಕೆರೆ ಗ್ರಾಮದ ಪುಟ್ಟೇಗೌಡರವರ ಮನೆಗೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಭೇಟಿ ನೀಡಿ, ವೈಯಕ್ತಿಕ ಧನಸಹಾಯಮಾಡಿ, ಸಂತ್ರಸ್ತರಿಗೆ ಧೈರ್ಯ ಹೇಳಿದರು.

ಶುಕ್ರವಾರ ರಾತ್ರಿ ಗ್ಯಾಸ್ ಸ್ಫೋಟಗೊಂಡ ಪರಿಣಾಮ ಪುಟ್ಟೇಗೌಡ ರವರ ಮನೆಯ ಮೇಲ್ಛಾವಣಿ, ಗೋಡೆಗಳು ಸಂಪೂರ್ಣವಾಗಿ ಹಾನಿಗೊಂಡು, ದಿನನಿತ್ಯ ಬಳಕೆ ಪದಾರ್ಥಗಳು, ಬಟ್ಟೆ ಸೇರಿದಂತೆ ಇತರೆ ವಸ್ತುಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದನ್ನ ವೀಕ್ಷಿಸಿ, ಘಟನೆ ಸಂಬಂಧ ಮನೆಯವರಿಂದ ಮಾಹಿತಿ ಪಡೆದು, ಧೈರ್ಯ ಹೇಳಿ ನಿಮ್ಮ ಕುಟುಂಬದ ಜೊತೆ ಇರುವುದಾಗಿ ಹೇಳಿದರು.

ಘಟನೆ ಬಗ್ಗೆ ಮಾಹಿತಿ ಪಡೆದ 25 ರಿಂದ 30 ನಿಮಿಷಗಳ ನಂತರ ಶ್ರೀರಂಗಪಟ್ಟಣದಿಂದ ಅಗ್ನಿಶಾಮಕ ದಳ ವಾಹನ ಬಂದು ಬೆಂಕಿ ನಂದಿಸುವ ಕೆಲಸ ಮಾಡಿದೆ, ಅಷ್ಟರಲ್ಲಾಗಲೇ, ಮನೆ ಸಂಪೂರ್ಣವಾಗಿ ಬೆಂಕಿಗಾಹುತಿಯಾಗಿದೆ. ಹೋಬಳಿ ಕೇಂದ್ರಗಳಲ್ಲಿ ಕನಿಷ್ಠ ಒಂದು ಅಗ್ನಿಶಾಮಕ ವಾಹನ ಇದ್ದರೆ ಇಂತಹ ಘಟನೆಯಿಂದ ಹೆಚ್ಚಿನ ಅವಘಡವನ್ನ ತಪ್ಪಿಸಬಹುದು ಎಂದು ಗ್ರಾಮಸ್ಥರು ತಮ್ಮ ಸಮಸ್ಯೆ ತೋಡಿಕೊಂಡರು.

ಸಮಾರೋಪಗೊಂಡ ತಣಿವು ಬೇಸಿಗೆ ಶಿಬಿರ



ನಂದಗೋಕುಲ ಕಿಡ್ವರ್ಲ್ಡ್ ಶಾಲಾವರಣದಲ್ಲಿ ತಣಿವು ಬೇಸಿಗೆ ಶಿಬಿರ ಸಮಾರೋಪ ಸಮಾರಂಭದಲ್ಲಿ ಕಾರ್ಯಕ್ರಮ ನೀಡಿದ ಮಕ್ಕಳು.

ಪಾಂಡವಪುರ, ಮೇ 10–ಪಟ್ಟಣದ ಕೃಷ್ಣಾನಗರದ 3ನೇ ಹಂತದಲ್ಲಿರುವ ನಂದಗೋಕುಲ ಕಿಡ್ವರ್ಲ್ಡ್ ಶಾಲಾವರಣದಲ್ಲಿ ಜರುಗಿದ ತಣಿವು ಬೇಸಿಗೆ ಶಿಬಿರ ಸಮಾರೋಪಗೊಂಡಿತು.

ಸಂಸ್ಥೆಯ ಅಧ್ಯಕ್ಷ ಆರ್.ಎ.ನಾಗಣ್ಣ ಮಾತನಾಡಿ, ಪ್ರಸ್ತುತ ಆಧುನಿಕ ಜಗತ್ತಿನಲ್ಲಿ ಎಲ್ಲ ಕ್ಷೇತ್ರಗಳೂ ಸ್ಪರ್ಧೆಯನ್ನೆದುರಿಸುತ್ತಿವೆ. ಇಂತಹ ಸನ್ನಿವೇಶದಲ್ಲಿ ಮಕ್ಕಳು ಮೊಬೈಲ್‌ನಲ್ಲಿ ಹೆಚ್ಚು ಮುಳುಗಿಹೋಗಿದ್ದಾರೆ. ಸಮಯವೂ ಹಾಳು, ಆರೋಗ್ಯವೂ ಹಾಳು ಎಂಬಂತಾಗಿದೆ. ವಿದ್ಯಾರ್ಥಿ ಜೀವನ ಬಹಳ ಅಮೂಲ್ಯವಾದುದು. ಪ್ರತಿ ಕ್ಷಣವನ್ನೂ ಉಪಯುಕ್ತವಾಗಿ ಬಳಸಿಕೊಳ್ಳುವ ಮೂಲಕ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಿಆರ್‌ಸಿ ಮಹದೇವು ಮಾತನಾಡಿ, ಇದೊಂದು ಉತ್ತಮ ಕಾರ್ಯ, ಇಷ್ಟು ಮಕ್ಕಳನ್ನು ಒಟ್ಟುಗೂಡಿಸಿ ಶ್ರಮಿಸಿದ್ದಾರೆ. ಪೋಷಕರು ತಮ್ಮ ಮಕ್ಕಳನ್ನು ಇಂತಹ ಶಿಬಿರಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕೆಂದು ತಿಳಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಈವೇಳೆ ಮುಖ್ಯಶಿಕ್ಷಕ ಎಚ್.ಎಂ. ವೆಂಕಟೇಶ್, ಅನುಸೂಯ, ಕಾರ್ಯದರ್ಶಿ ಆರ್.ಎನ್. ರಶ್ಮಿ ಸೇರಿದಂತೆ ಪೋಷಕರು ಉಪಸ್ಥಿತರಿದ್ದರು. ಮಕ್ಕಳು ವಿವಿಧ ಜನಪದ ನೃತ್ಯಗಳಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು.

ಉದಯಗಿರಿ ಮಹಮ್ಮದ್ ಶೋಯಬ್ ಹತ್ಯೆ ಪ್ರಕರಣ : ಐವರ ಬಂಧನ



ಖಾಲಿಕ್



ಶೋಯಬ್



ಮ. ಸೈಫ್



ಮಸೂದ್



ರಿಹಾನ್

ಮಂಡ್ಯ, ಮೇ 10–ಮೈಸೂರಿನ ಉದಯಗಿರಿ ನಿವಾಸಿ ಮಹಮ್ಮದ್ ಶೋಯಬ್ ಎಂಬಾತನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 5 ಮಂದಿ ಆರೋಪಿಗಳನ್ನು ಶ್ರೀರಂಗಪಟ್ಟಣ ಪೊಲೀಸರು ಬಂಧಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ತಿಳಿಸಿದ್ದಾರೆ.

ಕೊಲೆ ಆರೋಪಿಗಳಾದ ಮೈಸೂರಿನ ಉದಯಗಿರಿಯ ಖಾಲಿಕ್ ಅಹಮದ್, ಸಯ್ಯದ್ ಶೋಯಬ್, ಮಹಮ್ಮದ್ ಸೈಫ್, ಮಸೂದ್ ಅಹಮದ್, ರಿಹಾನ್ ಅಹಮದ್ ಖಾನ್ ಅವರುಗಳನ್ನು ಬಂಧಿಸಿದ್ದು, ಉಳಿದ ನಾಲ್ಕು ಮಂದಿ ಆರೋಪಿಗಳಿಗಾಗಿ ಬಲೆ ಬೀಸಿದ್ದಾರೆ. ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೇ 3ರ ರಾತ್ರಿ 8.30ರ ಸಮಯದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಗಂಜಾಂನ ನಿಮಿಷಾಂಬ ದೇಗುಲದ ಬಳಿ ಸಂಭವಿಸಿದ್ದ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಉದಯಗಿರಿ ನಿವಾಸಿ ಮಹಮ್ಮದ್ ಶೋಯಬ್‌ನ ತಾಯಿ ಸುಲ್ತಾನಾ ಬೇಗಂ ನೀಡಿದ ದೂರಿನ ಮೇರೆ ಕೊಲೆ ಆರೋಪಿಗಳನ್ನು ಬಂಧಿಸಲು ಡಿವೈಎಸ್ಪಿ ಕೃಷ್ಣಕುಮಾರ್, ಇನ್‌ಸ್ಪೆಕ್ಟರ್ ಕುಮಾರ್, ವಿನೋದ್ ಸೇರಿದಂತೆ ಸಿಬ್ಬಂದಿಗಳ ನೇತೃತ್ವದಲ್ಲಿ ಒಂದು ತನಿಖಾ ತಂಡವನ್ನು ರಚನೆ ಮಾಡಲಾಗಿತ್ತು ಎಂದರು.

ಮಹಮ್ಮದ್ ಶೋಯಬ್‌ನನ್ನು ಹತ್ಯೆ ಮಾಡಲು ಸಯ್ಯದ್ ಪ್ಲಾನ್ ರೂಪಿಸಿ, ಅದಕ್ಕೂ ಮುನ್ನ ತಿಂಗಳ ಹಿಂದೆ ಮಾರಕಾಸ್ತ್ರಗಳನ್ನು ಖರೀದಿ ಮಾಡಿದ್ದ. ಮೇ 1ರಂದು ಉದಯಗಿರಿಯಲ್ಲೇ ಅಟ್ಯಾಕ್ ಮಾಡಲು ಯೋಜನೆ ರೂಪಿಸಿದಾಗ ಸಯ್ಯದ್ ಮನೆಯಿಂದ ಹೊರ ಬಂದಿರಲಿಲ್ಲ. ಇದರಿಂದ ಮತ್ತೆ ಮೇ 2ರಂದು ಹತ್ಯೆ ಮಾಡಲು ಸಂಚು ರೂಪಿಸುವ ಸಯ್ಯದ್, ಕಾರು ಡೀಲರ್ ಆದ ಮಹಮ್ಮದ್ ಶೋಯಬ್‌ನನ್ನು ಒಂದು ಅಜ್ಞಾತ ಸ್ಥಳಕ್ಕೆ ಕರೆಸಿಕೊಳ್ಳಲು ಹೊಸ ಸಿಮ್ ಖರೀದಿಸಿ, ಕಾರು ಖರೀದಿ ಮಾಡಲು ವ್ಯಾಪಾರಕ್ಕೆ ಕೂರೋಣ ಎಂದು ಆರೋಪಿಗಳು ಕರೆದಿದ್ದಾರೆ. ಉರ್ದುವಿನಲ್ಲಿ ಮಾತನಾಡಿದರೆ ಅನುಮಾನ ಬರುತ್ತದೆಂದು ಕನ್ನಡದಲ್ಲೇ ಫೋನ್ ಸಂಭಾಷಣೆ ನಡೆಸಿ ಆರೋಪಿಯನ್ನು ಗಂಜಾಂ ಬಳಿಯ ನಿಮಿಷಾಂಭ ದೇಗುಲದ ಬಳಿಗೆ ಕರೆಸಿಕೊಂಡು ದೇಗುಲದ 20–30 ಮೀಟರ್ ವ್ಯಾಪ್ತಿಯಲ್ಲಿ ಮೇ 3ರ ರಾತ್ರಿ 8.30ರ ಸಮಯದಲ್ಲಿ ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ತಿಳಿಸಿದರು.

ಮೃತ ಶೋಯಬ್ ಆರು ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಉದಯಗಿರಿ ಠಾಣೆಯಲ್ಲಿ 4, ದೇವರಾಜ ಹಾಗೂ ನರಸಿಂಹರಾಜ ಠಾಣೆಯಲ್ಲಿ ತಲಾ 1 ಪ್ರಕರಣ ದಾಖಲಾಗಿದ್ದು, ಕಳ್ಳತನ ಕೇಸುಗಳು ಸಹ ಈತನ ಮೇಲಿರುತ್ತವೆ. ಕೊಲೆಯಾದವರ ಮೇಲೆ ಯಾವುದಾದರೂ ಕೇಸು ಇದೆಯೇ ಎಂಬ ಬಗ್ಗೆ ತನಿಖೆ ನಡೆಸುತ್ತಿದ್ದೇವೆ ಎಂದರು.

ಕೊಲೆಯಾದವನು ಕಳ್ಳತನ ಮತ್ತು ಹಳೇ ಗಾಡಿ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದು, ಕಳ್ಳತನ ಪ್ರಕರಣಗಳಾಗಿದ್ದರಿಂದ ಕೊಲೆಯಾದ ಮಹಮ್ಮದ್ ಶೋಯಬ್ ಮೇಲೆ ರೌಡಿಶೀಟರ್ ತೆರೆದಿರಲಿಲ್ಲ ಎಂದ ಅವರು, ಇನ್ನು ನಾಲ್ಕು ಮಂದಿ ಆರೋಪಿಗಳಿದ್ದು, ಬಂಧಿಸಬೇಕಿದೆ. ತನಿಖೆಯಲ್ಲಿ ಬೇರೆಯವರ ಪಾತ್ರ ಇದ್ದರೆ ಅವರನ್ನು ಸಹ ಬಂಧಿಸುತ್ತೇವೆ ಎಂದು ಅವರು ಹೇಳಿದರು.

ಹೇಮಾವತಿ ಪ್ರೌಢಶಾಲೆಯಲ್ಲಿ ಗುರು–ಶಿಷ್ಯರ ಸಮ್ಮಿಲನ



ಹೇಮಾವತಿ ಅನುದಾನಿತ ಪ್ರೌಢಶಾಲೆಯ ಹಳೆವಿದ್ಯಾರ್ಥಿಗಳು ಗುರುನಮನ ಕಾರ್ಯಕ್ರಮದೊಂದಿಗೆ ಗುರುಗಳನ್ನು ಗೌರವಿಸಿದರು.

ಕಿಕ್ಕೇರಿ, ಮೇ10–ಹಳೆಯ ನೆನಪಿನ ಬುತ್ತಿಯಾಗಿ 30ವರ್ಷದ ಹಿಂದೆ ಓದಿದ ಶಾಲೆ, ಗೆಳೆಯರ, ಗುರುಗಳ ನೆನಪು ಕಣ್ತುಂಬಿಕೊಳ್ಳುವ ಭಾಗ್ಯವಾಗಿ ಗುರುವಂದನೆ ಕಾರ್ಯಕ್ರಮ ಒದಗಿಸಿದೆ ಎಂದು ಡಿ.ಆರ್. ಮಧುಸೂದನ್ ಮೆಲುಕು ಹಾಕಿದರು.

ಸಮೀಪದ ಮಂದಗೆರೆ ಹೇಮಾವತಿ ಅನುದಾನಿತ ಪ್ರೌಢಶಾಲೆಯಲ್ಲಿ 1988–89ನೇ ಸಾಲಿನ ಹಳೆ ವಿದ್ಯಾರ್ಥಿಗಳ ಬಳಗ ಏರ್ಪಡಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡುತ್ತ, ಗುರುವಿನ ಋಣ ತೀರಿಸಲು ಸಾಧ್ಯವೇ ಇಲ್ಲ. ತಾಯಿ ಜೀವ ನೀಡಿದರೆ, ಜೀವನ, ಭವಿಷ್ಯ ಕೊಡುವ ತಾಯಿ ಹೃದಯದ ದೇವರು ಗುರು.

ಮೈತ್ರಿ ಮೆಟಲೈಜಿಂಗ್ ಇಂಡಿಯಾ ಕಂಪನಿ, ರಿನೋವೇಷನ್ಸ್ ಆಫ್ ಟೆಂಪಲ್ ಉದ್ಯಮ ಸ್ಥಾಪಿಸಿ 600ಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿರುವೆ. ಗುರುಗಳ ಬೆತ್ತದ ರುಚಿ ಕುಗ್ರಾಮದಿಂದ ಬೆಂಗಳೂರಿನಲ್ಲಿ ಉದ್ಯಮಿಯಾಗಿಸಿದೆ. ಗುರುನಮನದ ಕ್ಷಣ ಮರೆಯಲಾರೆ. ಶಾಲೆ ಅಭಿವೃದ್ಧಿಗೆ ತನ್ನ ಸಹಕಾರ ಇದೆ. ಮುರುಡೇಶ್ವರದ ಶಿವ ಪ್ರತಿಮೆ, ಲಂಡನ್‌ನಲ್ಲಿನ ಬಸವೇಶ್ವರ ಪ್ರತಿಮೆ ಮತ್ತಿತರ ಪ್ರತಿಮೆಗಳಿಗೆ ಮೆಟಲ್ ಕೋಟಿಂಗ್ ಮಾಡಿರುವೆ. ಸಂಸ್ಕೃತಿ, ಪರಂಪರೆ, ದೇಗುಲ ಉಳಿವಿಗೆ ಸದಾ ಶ್ರಮಿಸಲು ಗುರುಗಳಿಂದ ಕಲಿತ ಸಂಸ್ಕಾರವೇ ಕಾರಣ ಎಂದು ಧನ್ಯತಾಭಾವ ಮೆರೆದರು.

ಹಳೆ ವಿದ್ಯಾರ್ಥಿ ನಟ ಮಂದಗೆರೆ ಮಧುಸೂದನ್ ಮಾತನಾಡಿ, ಹಳೆಯ ನೆನಪು, ಗುರುಗಳ ಆಶೀರ್ವಾದ ತಮ್ಮನ್ನು ಸುಶಿಕ್ಷಿತರನ್ನಾಗಿ ಮಾಡಿಸಿದೆ. ಇಂತಹ ಪರಂಪರೆ ಕಾರ್ಯಕ್ರಮ ಭವಿಷ್ಯದ ಮಕ್ಕಳಿಗೆ ಆದರ್ಶವಾಗಬೇಕಿದೆ. ಮೊಬೈಲ್, ರೀಲ್ಸ್, ಸಾಮಾಜಿಕ ಜಾಲತಾಣದಿಂದ ಗುರುವನ್ನು ಹಿಂದಿನ ಪೀಳಿಗೆ ಮರೆಯುತ್ತಿದೆ. ನಾವು ಓದಿದ ಕನ್ನಡ ಶಾಲೆ ಉಳಿವಿಗೆ ಸದಾ ಮುಂದಾಗಿರುವುದಾಗಿ ತಿಳಿಸಿ ಶಾಲಾ ದಿನದ ನೆನಪು ನೆನೆದರು.

ಗುರುಗಳಿಗೆ ಶಿಷ್ಯರು ಫಲತಾಂಬೂಲ, ಮೈಸೂರು ಪೇಟ, ಹಾರತುರಾಯಿಗಳೊಂದಿಗೆ ಗೌರವ ಸಮರ್ಪಣೆ ನೀಡಿ ಆನಂದಭಾಷ್ಪ ಸುರಿಸಿದರು. ಈ ವೇಳೆ ಗುರುಗಳಾದ ವೆಂಕಟೇಶ್, ಕುಮಾರ್, ರಮೇಶ್, ಜಿ.ಟಿ. ಜಯರಾಮೇಗೌಡ, ಸೂರ್ಯನಾರಾಯಣಪ್ಪ, ರಂಗಸ್ವಾಮಿ, ಆಡಳಿತ ಮಂಡಳಿಯ ಜಿ.ವಿ. ವೆಂಕಟೇಶ್, ಚಿಕ್ಕಮಂದಗೆರೆ ಜಯರಾಂ, ಮಂಜು, ಮಂಜೇಗೌಡ, ರಾಜು, ಮೋಹನ್ ಬಾಬು, ಹಳೆ ವಿದ್ಯಾರ್ಥಿ ಬಳಗ ಸಣ್ಣಪ್ಪ, ತುಳಸೀರಾಜು, ಮಾದೇಶ್, ಅರುಣ್, ಉಷಾ, ಅನಿತಾ, ಪ್ರಜ್ವಲಾ, ರೂಪಾ, ಛಾಯಾ ಇದ್ದರು.

ಮಂಡ್ಯದಲ್ಲಿ ಅಂತರರಾಷ್ಟ್ರೀಯ ಮಾದರಿಯ ಕ್ರಿಕೆಟ್ ಟೂರ್ನಿ ಆಯೋಜನೆಗೆ ಸಜ್ಜು

ಮಂಡ್ಯ, ಮೇ 10– ಜಿಲ್ಲೆಯ ಕ್ರೀಡಾ ಇತಿಹಾಸದಲ್ಲೇ ಹೊಸ ಅಧ್ಯಾಯ ಬರೆಯಲು ಮುಂದಾಗಿರುವ ಶಾಸಕ ಪಿ.ರವಿಕುಮಾರ್ ಗೌಡ (ಗಣಿಗ) ಆರ್‌ಕೆಜಿ ಕಪ್– ಮಂಡ್ಯ ಪ್ರೀಮಿಯರ್ ಲೀಗ್ ಎಂಬ ಮಹತ್ವಾಕಾಂಕ್ಷೆಯ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲು ನಿರ್ಧರಿಸಿದ್ದಾರೆ.

ಅಂತರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳ ಮಾದರಿಯಲ್ಲಿ ಈ ಟೂರ್ನಿಯನ್ನು ಅತ್ಯಂತ ಅದ್ದೂರಿಯಾಗಿ ನಡೆಸಲು ಸಿದ್ಧತೆ ನಡೆಯುತ್ತಿದ್ದು, ಗ್ರಾಮೀಣ ಪ್ರದೇಶದ ಕ್ರಿಕೆಟ್ ಪ್ರತಿಭೆಗಳಿಗೆ ದೊಡ್ಡ ವೇದಿಕೆ ಕಲ್ಪಿಸುವುದು ಮುಖ್ಯ ಉದ್ದೇಶವಾಗಿದೆ. ನಗರದ ಪ್ರವಾಸಿ ಮಂದಿರದಲ್ಲಿ ಇಂದು ವಿಧಾನಸಭಾ ವ್ಯಾಪ್ತಿಯ ಕ್ರಿಕೆಟ್ ಪ್ರೇಮಿಗಳು, ಆಟಗಾರರು ಹಾಗೂ ಆಯೋಜಕರೊಂದಿಗೆ ಪೂರ್ವಭಾವಿ ಸಭೆ ನಡೆಸಿ ಸಲಹೆ–ಸೂಚನೆಗಳನ್ನು ಸಂಗ್ರಹಿಸಿದರು.

ಕ್ರೀಡೆಯ ಮೂಲಕ ಯುವಜನರಲ್ಲಿ ಶಿಸ್ತು, ನಾಯಕತ್ವ ಹಾಗೂ ಸ್ನೇಹಭಾವ ಬೆಳೆಸುವ ಉದ್ದೇಶದಿಂದ ಈ ಪಂದ್ಯಾವಳಿಯನ್ನು ಆಯೋಜಿಸಲಾಗುತ್ತಿದೆ

ಕ್ಷೇತ್ರ ವ್ಯಾಪ್ತಿಯ 28 ಗ್ರಾಮ ಪಂಚಾಯಿತಿಗಳು, ನಗರ ಪ್ರದೇಶದ 35 ವಾರ್ಡ್‌ಗಳು ಹಾಗೂ 3 ಹೋಬಳಿ ಕೇಂದ್ರಗಳಲ್ಲಿ ಪ್ರಾಥಮಿಕ ಹಂತದಲ್ಲಿ ಪಂದ್ಯಾವಳಿಗಳನ್ನು ನಡೆಸಲಾಗುವುದು. ಅಲ್ಲಿಂದ ಆಯ್ಕೆಯಾಗುವ ಅತ್ಯುತ್ತಮ ತಂಡಗಳು ತಾಲೂಕು ಮಟ್ಟದ ಟೂರ್ನಿಯಲ್ಲಿ ಭಾಗವಹಿಸಲಿವೆ ಎಂದು ಶಾಸಕ ಪಿ. ರವಿಕುಮಾರ್ ಗೌಡ ಗಣಿಗ ತಿಳಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ರಾಜಕೀಯ ಮುಖಂಡರು, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಪತ್ರಕರ್ತರ ತಂಡ ಒಂದು ಕಡೆ, ಕನ್ನಡ ಚಿತ್ರರಂಗದ ನಟರ ತಂಡ ಮತ್ತೊಂದು ಕಡೆ ಸ್ನೇಹಪೂರ್ವಕ ಪಂದ್ಯದಲ್ಲಿ ಭಾಗವಹಿಸುವ ಮೂಲಕ ಟೂರ್ನಿಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಸ್ವಾಮಿನಾಯಕ್ ನಿಧನ



ಕೆ.ಆರ್.ಪೇಟೆ, ಮೇ 10–ತಾಲೂಕಿನ ಬೂಕನಕೆರೆ ಹೋಬಳಿಯ ಪೂವನಹಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡರಾಗಿದ್ದ ಸ್ವಾಮಿನಾಯಕ್(55) ನಿಧನರಾಗಿದ್ದಾರೆ. ಮೃತರು ಪತ್ನಿ ತಾ. ಪಂ.ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ, ಪುತ್ರ, ಮತ್ತು ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಹುಟ್ಟೂರಾದ ಪೂವನಹಳ್ಳಿ ಗ್ರಾಮದಲ್ಲಿ ನಡೆಯಿತು.

ಸಾಂತ್ವಾನ: ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಕೈಮಗ್ಗ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷ ಬಿ.ನಾಗೇಂದ್ರಕುಮಾರ್, ಮಿತ್ರ ಫೌಂಡೇಶನ್ ಅಧ್ಯಕ್ಷ ವಿಜಯ್ ರಾಮೇಗೌಡ, ಜಿ.ಪಂ ಮಾಜಿ ಸದಸ್ಯ ಕೋಡಿಮಾರನಹಳ್ಳಿ ದೇವರಾಜು, ತಾ. ಪಂ.ಮಾಜಿ ಸದಸ್ಯ ಮಾಧವ ಪ್ರಸಾದ್, ಸಮಾಜ ಸೇವಕ ಆರ್.ಟಿ.ಓ.ಮಲ್ಲಿಕಾರ್ಜುನ್ ಮತ್ತಿತರ ಗಣ್ಯರು ಮೃತರ ಅಂತಿಮ ದರ್ಶನ ಪಡೆದು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಮೂರನೇ ಪುಟದಿಂದ

ಎಷ್ಟು ದಿನ ಹುದ್ದೆಯಲ್ಲಿ ಇರ್ತಾರೋ ಗೊತ್ತಿಲ್ಲ!

ಮುನ್ನ ಕೇಂದ್ರದಲ್ಲಿ 10 ವರ್ಷ ಡಿಎಂಕೆ ಬೆಂಬಲದಿಂದ ಅಧಿಕಾರದಲ್ಲಿತ್ತು ಕಾಂಗ್ರೆಸ್‌ನ ಕಷ್ಟಕಾಲದಲ್ಲಿ ತಮಿಳುನಾಡಿನ ಡಿಎಂಕೆ ಅದರ ಜೊತೆಗಿತ್ತು. ಆದರೆ, ಈಗ ಚುನಾವಣೆಯಲ್ಲಿ ಕಡಿಮೆ ಸ್ಥಾನ ಪಡೆದ ಡಿಎಂಕೆ ಅಧಿಕಾರ ಕಳೆದುಕೊಂಡಿದೆ ಎಂಬ ಮಾತ್ರಕ್ಕೆ ಅದರ ಬೆನ್ನಿಗೆ ಕಾಂಗ್ರೆಸ್ ಚೂರಿ ಹಾಕಿ, ಹೊಸ ಪಕ್ಷದ ಬೆನ್ನೇರಿದೆ. ಆ ಪಕ್ಷದ ಬೆನ್ನಿಗೂ ಕಾಂಗ್ರೆಸ್ ಚೂರಿ ಹಾಕುವ ಕಾಲ ದೂರವಿಲ್ಲ ಎಂದರು. ಮಿತ್ರ ಪಕ್ಷಗಳಿಗೆ ಮಾತ್ರ ಕಾಂಗ್ರೆಸ್ ಚೂರಿಹಾಕಿಲ್ಲ. ದೇಶದ ಮಹಿಳೆಯರಿಗೂ ಮಹಾದ್ರೋಹ ಬಗೆದಿದೆ. ಮಹಿಳಾ ಮೀಸಲಾತಿ ಮಸೂದೆ ತರುವುದು, ಅದರ ವಿರುದ್ಧ ತನ್ನ ಮಿತ್ರಪಕ್ಷಗಳಿಂದಲೇ ಮತ ಹಾಕಿಸುವ ಮೂಲಕ ಮಹಿಳೆಯರಿಗೆ ವಂಚನೆ ಮಾಡಿದೆ. ನಾವು ಕಷ್ಟಪಟ್ಟು ಕಾನೂನು ತಂದರೂ ಕಾಂಗ್ರೆಸ್ ಅದನ್ನು ಸೋಲಿಸಿತು. ಇಂತಹ ವಿಶ್ವಾಸಘಾತುಕ ಕಾಂಗ್ರೆಸ್ ಅನ್ನು ಕಿತ್ತೊಗೆಯಲು ಎಲ್ಲರೂ ಒಟ್ಟಾಗಬೇಕು ಎಂದು ಕರೆ ನೀಡಿದರು.

ಕೇರಳದಲ್ಲೂ ಸರ್ಕಾರ ರಚಿಸ್ತೇವೆ: ನಮ್ಮ ಆಡಳಿತ ಹೇಗಿದೆ ಅಂದರೆ, ನಾವು ಒಮ್ಮೆ ಸರ್ಕಾರ ರಚಿಸಿದರೆ ಜನರೇ ಎರಡನೇ ಬಾರಿ, ಮೂರನೇ ಬಾರಿ ಅಧಿಕಾರ ನೀಡುತ್ತಾರೆ. ಅಸ್ಸಾಂ, ಪುದುಚೇರಿಯಲ್ಲಿ ಇದೇ ಆಗಿದೆ. 10 ವರ್ಷಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿ ನಮ್ಮ ಮೂವರು ಶಾಸಕರಷ್ಟೇ ಇದ್ದರು. ಈಗ 203 ಶಾಸಕರೊಂದಿಗೆ ಸರ್ಕಾರ ರಚಿಸಿದ್ದೇವೆ. ಕೇರಳದಲ್ಲಿ ಈಗ ಮೂವರು ಶಾಸಕರಿದ್ದೇವೆ. ಅಲ್ಲಿಯೂ ಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸುವ ದಿನ ದೂರವಿಲ್ಲ. ಲೋಕಸಭಾ ಸದಸ್ಯರ ಸಂಖ್ಯೆಯಲ್ಲಿ, ಕರ್ನಾಟಕದಲ್ಲಿ ನಮ್ಮದೇ ದೊಡ್ಡ ಪಕ್ಷ ಎಂಬುದನ್ನು ಮರೆಯುವಂತಿಲ್ಲ. ಜನರಿಗೆ ದ್ರೋಹ ಮಾಡುವುದೇ ಕಾಂಗ್ರೆಸ್ ಕೆಲಸ. ಅವರೂ ಸುಳ್ಳು, ಅವರ ಗ್ಯಾರಂಟಿಗಳೂ ಸುಳ್ಳು. ಕಾಂಗ್ರೆಸ್‌ನ ಅಧಿಕಾರದ ಪುಸ್ತಕದಲ್ಲಿ ಆಡಳಿತ ಎಂಬ ಅಧ್ಯಾಯವೇ ಇಲ್ಲ. ಜನರಿಗೆ ಸಮಸ್ಯೆಗಳ ಪರಿಹಾರ ಬೇಕು. ರಾಷ್ಟ್ರದ ಹಿತಾಸಕ್ತಿಯ ರಾಜಕೀಯ ಬೇಕು. ಬಿಜೆಪಿ ಸಣ್ಣ ಪಕ್ಷವಾಗಿದ್ದ ಕಾಲದಲ್ಲಿಯೇ ಕರ್ನಾಟಕ ನಮಗೆ ಅಪಾರ ಶಕ್ತಿ ನೀಡಿತ್ತು. ಇಂದು ಬೆಂಗಳೂರಿನ ನೆಲದಿಂದ ಕೇಸರಿ ಬಣ್ಣದ ಸೂರ್ಯ ಉದಯಿಸಿರುವುದನ್ನು ನಾನು ಕಾಣುತ್ತಿದ್ದೇನೆ ಎಂದು ಹೇಳಿದರು.

ವಿಜಯೇಂದ್ರ ಭರವಸೆ: ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಕಾರ್ಯಕರ್ತರು ಪಕ್ಷವನ್ನು ಅಧಿಕಾರಕ್ಕೆ ತಂದಂತೆ, ಕರ್ನಾಟಕದಲ್ಲೂ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದು ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆ ಎಂದು ಮೋದಿ ಅವರಿಗೆ ಭರವಸೆ ನೀಡುತ್ತೇವೆ ಎಂದು ಹಿಂದಿಯಲ್ಲಿ ಹೇಳಿದರು. ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸಂಸದ ಬಸವರಾಜ ಬೊಮ್ಮಾಯಿ ಮತ್ತಿತರರು ಉಪಸ್ಥಿತರಿದ್ದರು.

ಮೋದಿ ಸಂಚರಿಸುವ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿ ಪತ್ತೆ; ಓರ್ವ ವಶಕ್ಕೆ

ಬೆಂಗಳೂರು: ಪ್ರಧಾನಿ ಮೋದಿ ಸಂಚಾರ ಮಾರ್ಗದಲ್ಲಿ ಕಲ್ಲು ಕ್ವಾರಿಗಳಿಗೆ ಬಳಸುವ ಎರಡು ಜಿಲೆಟಿನ್ ಕಡ್ಡಿ ಪತ್ತೆಯಾಗಿವೆ. ಕಗ್ಗಲೀಪುರ ಬಳಿಯ ರವಿಶಂಕರ್ ಗುರೂಜಿ ಆಶ್ರಮದಿಂದ ಸುಮಾರು 3 ಕಿ.ಮೀ ದೂರದಲ್ಲಿರುವ ತಾತಗುಣಿ ಸಮೀಪದ ಬ್ರಿಡ್ಜ್ ಪಕ್ಕದ ಕಾಂಪೌಂಡ್ ಬಳಿ ನಿಯಮಿತ ಭದ್ರತಾ ತಪಾಸಣೆ ವೇಳೆ ಜಿಲೆಟಿನ್ ಕಡ್ಡಿ ಪತ್ತೆಯಾಗಿದ್ದು, ಭದ್ರತಾ ವಲಯದಲ್ಲಿ ಕೆಲಕಾಲ ಆತಂಕ ಮೂಡಿಸಿತ್ತು. ತಕ್ಷಣವೇ ಪೊಲೀಸರು, ಬಾಂಬ್ ನಿಷ್ಕ್ರಿಯ ದಳಗಳು ಮತ್ತು ವಿಧಿವಿಜ್ಞಾನ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಬೆಂಗಳೂರು ನಗರ ಹಾಗೂ ರಾಮನಗರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, ಈ ಸಂಬಂಧ ವ್ಯಕ್ತಿಯೋರ್ವನನ್ನು ವಶಕ್ಕೆ ಪಡೆದಿದ್ದಾರೆ. ಕೇಂದ್ರ ವಿಭಾಗದ ಡಿಐಜಿ ಗಿರೀಶ್ ನೇತೃತ್ವದಲ್ಲಿ ತನಿಖೆ ಮುಂದುವರೆದಿದ್ದು, ಅವರು ಕಗ್ಗಲಿಪುರ ಪೊಲೀಸ್ ಠಾಣೆಗೆ ಭೇಟಿ ನೀಡಿ ಮಾಹಿತಿ ಪಡೆದು, ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದಾರೆ.

ಜೋಸೆಫ್ ವಿಜಯ್ ಪ್ರಮಾಣ ವಚನ

ವಂದೇ ಮಾತರಂನ ಆರೂ ಚರಣ ಗಾಯನ

ಚೆನ್ನೈ: ತಮಿಳುನಾಡಿನ ನೂತನ ಮುಖ್ಯಮಂತ್ರಿ ವಿಜಯ್ ಪ್ರಮಾಣ ವಚನ ಸ್ವೀಕಾರಕ್ಕೂ ಮುನ್ನ ಮತ್ತು ನಂತರ ರಾಷ್ಟ್ರಗೀತೆಗೆ ಮೊದಲು ವಂದೇ ಮಾತರಂನ ಆರೂ ಚರಣಗಳನ್ನು ಹಾಡುವ ಮೂಲಕ ಹೊಸತನಕ್ಕೆ ನಾಂದಿ ಹಾಡಲಾಯಿತು.

ವಂದೇ ಮಾತರಂನ ಆರೂ ಚರಣಗಳನ್ನು ಹಾಡುವ ಕುರಿತಂತೆ ಕೇಂದ್ರ ಗೃಹ ಸಚಿವಾಲಯವು ಇತ್ತೀಚೆಗೆ ಹೊಸ ಮಾರ್ಗ ಸೂಚಿ ಬಿಡುಗಡೆ ಮಾಡಿತ್ತು. ಈ ನಿರ್ದೇಶನವು ದೊಡ್ಡ ರಾಜಕೀಯ ವಿವಾದಕ್ಕೆ ಕಾರಣವಾಗಿತ್ತು. ಕಾಂಗ್ರೆಸ್ ನೇತೃತ್ವದಲ್ಲಿ ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ಈ ಕ್ರಮವನ್ನು ತೀವ್ರವಾಗಿ ಟೀಕಿಸಿದ್ದವು. ಆದರೆ ಕೇಂದ್ರದ ಮಾರ್ಗಸೂಚಿ ಅನ್ವಯವೇ ವಿಜಯ್ ಪ್ರಮಾಣ ವಚನ ವಂದೇ ಮಾತರಂ ಹಾಡಲಾಯಿತು. ಈ ವೇಳೆ ಒಟ್ಟಿಗೆ ವೇದಿಕೆ ಹಂಚಿಕೊಂಡಿದ್ದ ರಾಹುಲ್, ವಿಜಯ್ ಎದ್ದು ನಿಂತು ಗೌರವ ಸಲ್ಲಿಸಿದರು. ವಂದೇ ಮಾತರಂ, ಜನ ಗಣ ಮನ ನಂತರ ನಾಡ ಗೀತೆ 'ತಮಿಳ್ ತಾಯ್ ವಾಳ್ತು' ಹಾಡಲಾಯಿತು. ಇದೇ ವೇಳೆ ಬಿಳಿ ಧೋತಿ, ಅಂಗಿ ಧರಿಸಿ ಪ್ರಮಾಣ ವಚನ ಸ್ವೀಕರಿಸುವ ಸಂಪ್ರದಾಯಕ್ಕೆ ಹೊರತಾಗಿ ವಿಜಯ್ ಅವರು ಹಣೆಗೆ ತಿಲಕವಿಟ್ಟು, ಕಪ್ಪು ಸೂಟ್ ಧರಿಸಿ ವೃತ್ತಿಪರರ ರೀತಿ ಪ್ರಮಾಣ ವಚನ ಸ್ವೀಕರಿಸಿದ್ದು ವಿಶೇಷವಾಗಿತ್ತು. ಶನಿವಾರ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಇತರ ಕೇಂದ್ರ ಸಚಿವರು ಭಾಗವಹಿಸಿದ್ದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲೂ ವಂದೇ ಮಾತರಂನ ಆರೂ ಚರಣಗಳನ್ನು ಹಾಡಿರಲಿಲ್ಲ.

ತಮಿಳುನಾಡಿನಲ್ಲಿ ಅಧಿಕಾರಕ್ಕೇರಿದ ಮೊದಲ ದ್ರಾವಿಡೇತರ ಪಕ್ಷವಾಗಿ ಟಿವಿಕೆ ಹೊರಹೊಮ್ಮಿತು. ಈ ಐತಿಹಾಸಿಕ ಕ್ಷಣಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ನಟಿಯರಾದ ತ್ರಿಶಾ, ಸಂಗೀತಾ, ವಿಜಯ್ ಪೋಷಕರಾದ ಎಸ್.ಎ.ಚಂದ್ರಶೇಖರ್ ಮತ್ತು ಶೋಭಾ ಚಂದ್ರಶೇಖರ್ ಸೇರಿದಂತೆ ವಿವಿಧ ರಾಜಕೀಯ ನಾಯಕರು, ಚಿತ್ರರಂಗದ ಗಣ್ಯರು, ಉದ್ಯಮಿಗಳು ಹಾಗೂ ಸಾವಿರಾರು ಅಭಿಮಾನಿಗಳು ಸಾಕ್ಷಿಯಾಗಿದ್ದರು. ರಾಜಭವನದ ಸುತ್ತಮುತ್ತ ಟಿವಿಕೆ ಪಕ್ಷದ ಕಾರ್ಯಕರ್ತರ ಸಂಭ್ರಮಾಚರಣೆ ಮುಗಿಲು ಮುಟ್ಟಿತ್ತು. ಸಿನಿಮಾ ರಂಗದಲ್ಲಿ ದಳಪತಿಯಾಗಿ ಕೋಟ್ಯಂತರ ಅಭಿಮಾನಿಗಳ ಹೃದಯ ಗೆದ್ದಿರುವ ವಿಜಯ್, ಈಗ ತಮಿಳುನಾಡಿನ ಆಡಳಿತ ಚುಕ್ಕಾಣಿ ಹಿಡಿಯುವ ಮೂಲಕ ಹೊಸ ಶಕೆ ಆರಂಭಿಸಿದ್ದಾರೆ. ತಮ್ಮ ಚೊಚ್ಚಲು ವಿಧಾನಸಭಾ ಚುನಾವಣೆಯಲ್ಲೇ ಟಿವಿಕೆ ಪಕ್ಷ 108 ಸ್ಥಾನಗಳಲ್ಲಿ ಗೆಲ್ಲುವ ಮೂಲಕ ಅಭೂತಪೂರ್ವ ದಾಖಲೆ ನಿರ್ಮಿಸಿದೆ. ಒಟ್ಟು 234 ಸದಸ್ಯ ಬಲದ ವಿಧಾನಸಭೆಯಲ್ಲಿ ಬಹುಮತಕ್ಕೆ 118 ಸ್ಥಾನಗಳ ಅಗತ್ಯವಿದ್ದು, ಸದ್ಯ ವಿಜಯ್ ನೇತೃತ್ವದ ಮೈತ್ರಿಕೂಟಕ್ಕೆ ಒಟ್ಟು 120 ಶಾಸಕರ ಸಿಕ್ಕಿದೆ.

ವಿಜಯ್ ಎರಡು ಸ್ಥಾನಗಳಲ್ಲಿ ಗೆದ್ದಿರುವುದರಿಂದ ಟಿವಿಕೆ ಶಾಸಕರ ಸಂಖ್ಯೆ 107 ಎಂದು ಪರಿಗಣಿಸಲಿದ್ದು, ಸರ್ಕಾರ ರಚನೆಗೆ ಕಾಂಗ್ರೆಸ್‌ನ 5, ಎಡಪಕ್ಷಗಳ 4, ವಿಸಿಕೆ, ಐಯುಎಂಎಲ್ ತಲಾ ಇಬ್ಬರು ಶಾಸಕರು ಬೆಂಬಲ ಘೋಷಿಸಿದ್ದಾರೆ. ಫಲಿತಾಂಶದ ಬಳಿಕ ವಿಜಯ್ ಮೂರು ಬಾರಿ ರಾಜ್ಯಪಾಲರ ಭೇಟಿ ಮಾಡಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರಾದರೂ ಬಹುಮತ ಖಚಿತತೆ ಹಿನ್ನೆಲೆಯಲ್ಲಿ ರಾಜ್ಯಪಾಲರು ಸಮ್ಮತಿಸಿರಲಿಲ್ಲ. ಈ ನಡುವೆ ತಮಿಳುನಾಡು ರಾಜಕೀಯ ವಲಯದಲ್ಲಿ ಸಾಕಷ್ಟು ಬೆಳವಣಿಗೆ ನಡೆದಿತ್ತು. ಬದ್ಧ ವೈರಿಗಳೆನಿಸಿಕೊಂಡಿರುವ ಡಿಎಂಕೆ ಹಾಗೂ ಎಐಡಿಎಂಕೆ ಮೈತ್ರಿಯೊಂದಿಗೆ ಇತರೆ ಪಕ್ಷಗಳ ಬೆಂಬಲದಿಂದ ಸರ್ಕಾರ ರಚಿಸುವ ಕಸರತ್ತು ನಡೆದಿದೆ ಎಂದು ಚರ್ಚೆಯಾಗಿತ್ತು. ಆದರೆ ಶನಿವಾರ ಸಂಜೆ ರಾಜಭವನದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿದ್ದ ವಿಜಯ್, ತಮ್ಮ ಬೆಂಬಲಿಗ ಶಾಸಕರ ಪಟ್ಟಿಯನ್ನು ಸಲ್ಲಿಸಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರಿಂದ ಲೋಕ ಭವನ ಪ್ರಮಾಣ ವಚನ ಸ್ವೀಕರಿಸಲು ಅಂತಿಮವಾಗಿ ಆಹ್ವಾನ ನೀಡಿತು.

ವಿಶ್ವಾಸಮತ ಸವಾಲು: ಚುನಾವಣೆಯಲ್ಲಿ ಐತಿಹಾಸಿಕ ಗೆಲುವಿನೊಂದಿಗೆ ಅತೀ ದೊಡ್ಡ ಪಕ್ಷವಾಗಿ ಟಿವಿಕೆ ಹೊರಹೊಮ್ಮಿದರೂ ಸರಳ ಬಹುಮತಕ್ಕೆ 11 ಶಾಸಕರ ಕೊರತೆಯಿಂದಾಗಿ ಸರ್ಕಾರ ರಚನೆಗೆ ಇನ್ನಿಲ್ಲದ ಕಸರತ್ತು ನಡೆಸಬೇಕಾಯಿತು. ನಿರಂತರ 6 ದಿನಗಳ ಕಸರತ್ತಿನ ಬಳಿಕ ವಿವಿಧ ಪಕ್ಷಗಳ ಬೆಂಬಲದೊಂದಿಗೆ 120 ಶಾಸಕರ ಅಧಿಕೃತ ಬೆಂಬಲದೊಂದಿಗೆ ವಿಜಯ್ ಮುಖ್ಯ ಮಂತ್ರಿಯಾಗಿ ಪ್ರಮಾಣ ಸ್ವೀಕರಿಸುವಲ್ಲಿ ಯಶಸ್ವಿಯಾಗಿದ್ದಾರೆ ಇಷ್ಟಕ್ಕೆ ಅವರು ನಿರಾಳವಾಗಿರಲು ಸಾಧ್ಯವಿಲ್ಲ. ವಿಧಾನಸಭೆಯಲ್ಲಿ ಮೇ 13ರೊಳಗೆ ವಿಶ್ವಾಸಮತ ಸಾಬೀತುಪಡಿಸುವಂತೆ ರಾಜ್ಯಪಾಲ ಅರ್ಲೇಕರ್ ನೂತನ ಸರ್ಕಾರಕ್ಕೆ ಸೂಚಿಸಿದ್ದಾರೆ. ಅಷ್ಟರೊಳಗೆ ಸಭಾಪತಿ ಹಾಗೂ ಉಪಸಭಾಪತಿ ನೇಮಕವಾಗಬೇಕಿದೆ. ಒಮ್ಮತದಿಂದ ಆಯ್ಕೆ ಮಾಡಲು ಸಾಧ್ಯವಾಗದಿದ್ದರೆ ಮೈತ್ರಿಕೂಟ ಹಾಗೂ ವಿರೋಧ ಪಕ್ಷಗಳು ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತವೆ. ಹಾಗೇನಾದರೂ ಆದರೆ ವಿಧಾನಸಭೆಯಲ್ಲಿ ಮತ್ತೊಂದು ರೀತಿಯ ಹಣಾಹಣಿ ಸೃಷ್ಟಿಯಾಗಲಿದೆ. ಸ್ಪೀಕರ್ ಚುನಾವಣೆ ನಂತರ ವಿಜಯ್ ಮುಖ್ಯಮಂತ್ರಿಯಾಗಿ ವಿಧಾನಸಭೆಯಲ್ಲಿ ಚೊಚ್ಚಲ ಭಾಷಣ ಮಾಡಿ, ಸರ್ಕಾರಕ್ಕೆ ಬೆಂಬಲ ಕೋರುವ ಮೂಲಕ ವಿಶ್ವಾಸಮತ ಸಾಬೀತುಪಡಿಸಬೇಕಿದೆ.



ನಿಜವಾದ ಧರ್ಮ ನಿರಪೇಕ್ಷ ಸಾಮಾಜಿಕ ನ್ಯಾಯದ ಹೊಸ ಆರಂಭ

● ನೂತನ ಮುಖ್ಯಮಂತ್ರಿ ವಿಜಯ್ ಚೊಚ್ಚಲ ಭಾಷಣದಲ್ಲಿ ಮಹತ್ವದ ಘೋಷಣೆ ● ಗೃಹಬಳಕೆ ಉಚಿತ ವಿದ್ಯುತ್ ಸೇರಿ ಹಲವು ಜನಪರ ಯೋಜನೆಗಳಿಗೆ ಅನುಮೋದನೆ ● ಹಿಂದಿನ ಸರ್ಕಾರದ 10 ಲಕ್ಷ ಕೋಟಿ ಸಾಲಭಾರದ ಶ್ವೇತಪತ್ರ ಬಿಡುಗಡೆ ● ಭ್ರಷ್ಟಾಚಾರ ರಹಿತ ಪಾರದರ್ಶಕ ಆಡಳಿತ ಭರವಸೆ; ಭರವಸೆ ಈಡೇರಿಕೆಗೆ ಸಮಯ ಕೋರಿಕೆ

ಚೆನ್ನೈ: ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ನಿಮಿಷಗಳಲ್ಲಿ ಜೋಸೆಫ್ ವಿಜಯ್, ಗೃಹ ಬಳಕೆಯ 200 ಯೂನಿಟ್ ಉಚಿತ ವಿದ್ಯುತ್ ಸೇರಿ ಹಲವು ಜನಪರ ಯೋಜನೆಗಳಿಗೆ ಅನುಮೋದನೆ ನೀಡಿದ್ದಾರೆ.

ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರಿಂದ ಪ್ರಮಾಣವಚನ ಸ್ವೀಕರಿಸಿದ ಬಳಿಕ ನನ್ನ ಹೃದಯದಲ್ಲಿ ನೆಲೆಸಿರುವ ಪ್ರೀತಿಯ ಜನರೇ... ಎಂದು ಹೇಳುವ ಮೂಲಕ ರಾಜ್ಯದ ಜನತೆಯನ್ನುದ್ದೇಶಿಸಿ ಭಾವನಾತ್ಮಕವಾಗಿ ಭಾಷಣ ಮಾಡಿದರು. ಈ ವೇಳೆ ಸಭಾಂಗಣದಲ್ಲಿ ನೆರೆದಿದ್ದ ಸಾವಿರಾರು ಅಭಿಮಾನಿಗಳ ಹರ್ಷೋದ್ಗಾರ ಮುಗಿಲುಮುಟ್ಟಿತು.

ಮಾತು ಮುಂದುವರೆಸಿದ ವಿಜಯ್, ಇದು ಕೇವಲ ವಿಜಯ್ ಅವರ ಸರ್ಕಾರವಲ್ಲ, ಇದು ತಮಿಳುನಾಡಿನ ಪ್ರತಿಯೊಬ್ಬ ನಾಗರಿಕನ ಸರ್ಕಾರ. ಇದು ಹೊಸ ಆರಂಭ ನಿಜವಾದ, ಧರ್ಮ ನಿರಪೇಕ್ಷ ಸಾಮಾಜಿಕ ನ್ಯಾಯದ ಹೊಸ ಯುಗ ಈಗ ಆರಂಭವಾಗುತ್ತಿದೆ. ನಾವೆಲ್ಲರೂ ಸೇರಿ ಹೊಸ ತಮಿಳುನಾಡನ್ನು ನಿರ್ಮಿಸೋಣ ಎಂದು ಕರೆ ನೀಡಿದರು.

ಜನರ ಒಂದು ರೂ. ಹಣ ದುರುಪಯೋಗವಾಗಲು ಬಿಡುವುದಿಲ್ಲ ಎನ್ನುವ ಮೂಲಕ ಆಡಳಿತದಲ್ಲಿ ಸಂಪೂರ್ಣ ಪಾರದರ್ಶಕತೆ ತರುವುದಾಗಿ ಮತ್ತು ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ತಮಿಳುನಾಡಿನ ಯುವಜನತೆಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದು ನನ್ನ ಮೊದಲ ಆದ್ಯತೆ ಎಂದು ಭರವಸೆ ನೀಡಿದರು.

ಈ ನಡುವೆ ವಿಜಯ್ ಉಚಿತ ವಿದ್ಯುತ್ ಯೋಜನೆ (200 ಯೂನಿಟ್‌ಗಳವರೆಗೆ), ಮಹಿಳಾ ರಕ್ಷಣಾ ಪಡೆ ರಚನೆ ಹಾಗೂ ಪ್ರತಿ ಜಿಲ್ಲೆಯಲ್ಲಿ ಮಾದಕವಸ್ತು ವಿರೋಧಿ ದಳ ಸ್ಥಾಪನೆಗೆ ಸಂಬಂಧಿಸಿದ ಪ್ರಮುಖ ಕಡತಗಳಿಗೆ ಸಹಿ ಹಾಕುವುದರ ಜೊತೆಗೆ ರಾಜ್ಯದ ಜನತೆಗೆ ಸ್ವಚ್ಛ ಹಾಗೂ ಪಾರದರ್ಶಕ ಆಡಳಿತ ನೀಡುವುದಾಗಿ ಭರವಸೆ ನೀಡಿದ್ದಾರೆ.

ಸಾಲಭಾರ ಶ್ವೇತಪತ್ರ: ನೂತನ ಸಿಎಂ ವಿಜಯ್ ತಮ್ಮ ಚೊಚ್ಚಲ ಭಾಷಣದಲ್ಲೇ ಡಿಎಂಕೆ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಹಿಂದಿನ ಡಿಎಂಕೆ ಸರ್ಕಾರ ತಮಗೆ 10 ಲಕ್ಷ ಕೋಟಿ ರೂ. ಸಾಲಭಾರ ಹೊರಿಸಿ ಹೋಗಿದೆ. ಈ ಕುರಿತಾದ ವಿಷಯವನ್ನು ಜನಸಾಮಾನ್ಯರಿಗೆ ತಿಳಿಸಲು 2021–2026 ಅವಧಿಯ ರಾಜ್ಯದ ಹಣಕಾಸಿನ ಕುರಿತು ಶ್ವೇತಪತ್ರ ಬಿಡುಗಡೆ ಮಾಡಿ, ಅಲ್ಲಿಂದ ಮುಂದೆ ನಾನು ರಾಜ್ಯವನ್ನು ಮುನ್ನಡೆಸಲು ಬಯಸುತ್ತೇನೆ ಎಂದು ಘೋಷಿಸಿದರು.

ಪಾರದರ್ಶಕ ಆಡಳಿತ ನೀಡುವುದೇ ತಮ್ಮ ಗುರಿ. ನಾಲ್ಕು ಗೋಡೆಗಳ ಮಧ್ಯ ರಾಜಕೀಯ ಮಾಡದೆ, ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತೇನೆ ಎಂಬ ಭರವಸೆಯೊಂದಿಗೆ ಡಿಎಂಕೆಯ ಬಾಹ್ಯ ಬೆಂಬಲದೊಂದಿಗೆ ಸರ್ಕಾರ ರಚಿಸಲು ಪ್ರಯತ್ನಿಸುತ್ತಿದ್ದ ಎಐಎಡಿಎಂಕೆಯನ್ನೂ ಟೀಕಿಸಿದರು.

ಸ್ವಲ್ಪ ಸಮಯ ಕೊಡಿ: ತಮ್ಮ ಸರ್ಕಾರದಲ್ಲಿ ಒಂದೇ ಒಂದು ಶಕ್ತಿ ಕೇಂದ್ರ ಇರುತ್ತದೆ. ಟಿವಿಕೆ ನೇತೃತ್ವದ ಸರ್ಕಾರವು ಯಾವುದೇ ಮೈತ್ರಿ ಪಾಲುದಾರರ ಒತ್ತಡಕ್ಕೆ ಒಳಗಾಗುವುದಿಲ್ಲ ಎಂದು ಸ್ಪಷ್ಟಪಡಿಸಿ, ಚುನಾವಣಾ ಭರವಸೆಗಳನ್ನು ಈಡೇರಿಸಲು ಜನರು ಸ್ವಲ್ಪ ಸಮಯ ನೀಡುವಂತೆ ಮನವಿ ಮಾಡಿದರು.

ತಪ್ಪಿಗೆ ಅವಕಾಶವಿಲ್ಲ: ಇಂದಿನಿಂದ ಮಾದಕವಸ್ತು ಜಾಲವನ್ನು ಸಂಪೂರ್ಣ ನಿರ್ಮೂಲನೆ ಮಾಡಲು ಕಠಿಣ ಕ್ರಮ ಕೈಗೊಳ್ಳುತ್ತೇನೆ. ಮಹಿಳೆಯರ ಸುರಕ್ಷತೆಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಜೊತೆಗೆ ಶಿಕ್ಷಣ, ರಸ್ತೆ ಸುರಕ್ಷತೆ ಹಾಗೂ ಕುಡಿಯುವ ನೀರಿನ ಸೌಲಭ್ಯಕ್ಕೂ ಹೆಚ್ಚಿನ ಮಹತ್ವ ನೀಡುತ್ತೇನೆ. ನಾನು ತಪ್ಪು ಮಾಡುವುದಿಲ್ಲ, ನನ್ನ ಸಚಿವ ಸಂಪುಟದ ಸದಸ್ಯರೂ ತಪ್ಪು ಮಾಡಲು ಅವಕಾಶ ನೀಡುವುದಿಲ್ಲ. ಅಧಿಕಾರಕ್ಕೆ ಬಂದಿದ್ದೇವೆ ಎಂಬ ಕಾರಣಕ್ಕೆ ಯಾರಾದರೂ ದುರುಪಯೋಗದ ಚಿಂತನೆ ಹೊಂದಿದ್ದರೆ, ಅದನ್ನು ಈಗಲೇ ಮನಸ್ಸಿನಿಂದ ತೆಗೆದುಹಾಕಿ ಎಂದು ಎಚ್ಚರಿಕೆ ನೀಡಿದರು.

ಡಿ.ಸುಧಾಕರ್ ಇನ್ನಿಲ್ಲ

ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಕೆಲ ದಿನಗಳಿಂದ ತೀವ್ರ ನಿಗಾ ಘಟಕದಲ್ಲೇ ಇದ್ದ ಅವರು, ಬೆಳಗಿನ ಜಾವ 3.15ರ ಸುಮಾರಿಗೆ ಕೊನೆಯುಸಿರೆಳೆದರು.

3 ದಿನ ಶೋಕಾಚರಣೆ: ಡಿ.ಸುಧಾಕರ್ ನಿಧನಕ್ಕೆ ರಾಜ್ಯ ಸರ್ಕಾರ ತೀವ್ರ ಸಂತಾಪ ಸೂಚಿಸಿದ್ದು, ಚಿತ್ರದುರ್ಗಕ್ಕೆ ಅನ್ವಯವಾಗುವಂತೆ ಸೋಮವಾರ (ಮೇ 11) ಸರ್ಕಾರಿ ರಜೆ ಘೋಷಣೆ ಮಾಡಿದೆ. ಮೇ 12 ರವರೆಗೆ ಮೂರು ದಿನಗಳ ಕಾಲ ರಾಜ್ಯಾದ್ಯಂತ ಶೋಕಾಚರಣೆ ಘೋಷಿಸಿದೆ.

ಸೋಮವಾರ ಅಂತ್ಯಕ್ರಿಯೆ: ಈ ನಡುವೆ ಸದಾಶಿವ ನಗರದ ನಿವಾಸದಲ್ಲಿ ಸಚಿವ ಡಿ.ಸುಧಾಕರ್ ಅವರ ಅಂತಿಮ ದರ್ಶನ ಪಡೆದ ಬಳಿಕ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಸಚಿವ ಸುಧಾಕರ್ ಅವರ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ಬಹುದೊಡ್ಡ ನಷ್ಟವುಂಟಾಗಿದೆ. ಅವರ ಮತಕ್ಷೇತ್ರ ಹಿರಿಯೂರಿನಲ್ಲಿ ಪಾರ್ಥಿವ ಶರೀರವನ್ನು ದರ್ಶನಕ್ಕಾಗಿ ಇರಿಸಲಾಗಿದೆ. ಚಳ್ಳಕೆರೆಯಲ್ಲಿ ಸೋಮವಾರ ಸಂಜೆ 4 ಗಂಟೆಗೆ ಸಕಲ ಸರ್ಕಾರಿ ಗೌರವದೊಂದಿಗೆ ಅವರ ಅಂತ್ಯಕ್ರಿಯೆ ನಡೆಯಲಿದ್ದು, ನಾನು ಸಹ ಭಾಗಿಯಾಗುತ್ತೇನೆ ಎಂದು ಹೇಳಿದರು.

2008ರಿಂದ ಹಿರಿಯೂರು ಶಾಸಕರಾಗಿದ್ದ ಡಿ.ಸುಧಾಕರ್, ಎರಡನೇ ಬಾರಿಗೆ ಮಂತ್ರಿಯಾಗಿದ್ದರು. ಸಮಾಜ ಕಲ್ಯಾಣ ಸಚಿವರಾಗಿಯೂ ಕೆಲಸ ಮಾಡಿದ್ದು, ಸಹಕಾರ ಕ್ಷೇತ್ರಕ್ಕೂ ಸಾಕಷ್ಟು ಕೊಡುಗೆ ನೀಡಿದ್ದಾರೆ. ಡಿಸಿಸಿ ಬ್ಯಾಂಕ್ ಅಧ್ಯಕ್ಷ, ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು. ಸುಧಾಕರ್ ಅವರ ಚಿಕ್ಕಪ್ಪ ಜಯಣ್ಣ ಕೂಡಾ ಶಾಸಕರಾಗಿದ್ದವರು. ಚಳ್ಳಕೆರೆ ಎಸ್‌ಟಿ ಮೀಸಲು ಕ್ಷೇತ್ರಾಗಿದ್ದರಿಂದ ಹಿರಿಯೂರಿನಿಂದ ಸುಧಾಕರ್ ಸ್ಪರ್ಧಿಸಿ ಗೆದ್ದಿದ್ದರು. ರೈತರು ಹಾಗೂ ಬಡವರ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದರಿಂದ ಕ್ಷೇತ್ರದ ಜನ ಇವರನ್ನು ಬಡವರ ಬಂಧು ಎನ್ನುತ್ತಿದ್ದರು. ಸುಧಾಕರ್ ಅವರು ಪತ್ನಿ, ಪುತ್ರಿ ಹಾಗೂ ಪುತ್ರ ಸೇರಿದಂತೆ ಅಪಾರ ಬಂಧುಬಳಗ, ಅಭಿಮಾನಿಗಳನ್ನು ಅಗಲಿದ್ದಾರೆ.

ಗಣ್ಯರ ಸಂತಾಪ: ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಡಿ.ಸುಧಾಕರ್ ಪಾರ್ಥೀವ ಶರೀರದ ಅಂತಿಮ ದರ್ಶನ ವೇಳೆ ಗದ್ಗದಿತರಾಗಿ, ನನ್ನ ಆತ್ಮೀಯ ಸ್ನೇಹಿತ ಡಿ.ಸುಧಾಕರ್ ಕೊನೆಯುಸಿರೆಳೆದಿದ್ದು ಅತೀವ ದುಃಖ ತಂದಿದೆ ಎಂದರು. ಸಚಿವ ಮಹದೇವಪ್ಪ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸಚಿವರಾದ ಪ್ರಿಯಾಂಕ್ ಖರ್ಗೆ, ಸಚಿವ ಎಂಬಿ.ಪಾಟೀಲ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಹಿಮಂತ ಬಿಸ್ವಾ ನಾಳೆ ಪ್ರಮಾಣವಚನ

ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ಶರ್ಮಾ ಮತ್ತು ಅವರ ಸಂಪುಟ ಸೇರುವ ಶಾಸಕರಿಗೆ ರಾಜ್ಯಪಾಲರು ಪ್ರತಿಜ್ಞಾವಿಧಿ ಬೋಧಿಸಲಿದ್ದಾರೆ ಎಂದೂ ಉಲ್ಲೇಖಿಸಲಾಗಿದೆ. ಪ್ರಮಾಣವಚನ ಸಮಾರಂಭವು ಮೇ 12ರಂದು ನಡೆಯಲಿದ್ದು, ಹಿಮಂತ ಬಿಸ್ವಾ ಶರ್ಮಾ ಸತತ ಎರಡನೇ ಬಾರಿಗೆ ಅಸ್ಸಾಂ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ಅಧ್ಯಕ್ಷ ನಿತಿನ್ ನಬಿನ್ ಮತ್ತಿತರ ನಾಯಕರು ಪಾಲ್ಗೊಳ್ಳುವ ಸಾಧ್ಯತೆ ಇದೆ. ಮುಖ್ಯಮಂತ್ರಿ ಸರ್ಬಾನಂದ ಸೋನವಾಲ್ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟ 2016ರಲ್ಲಿ ಮೊದಲ ಬಾರಿಗೆ ರಾಜ್ಯದಲ್ಲಿ ಅಧಿಕಾರಕ್ಕೇರಿತ್ತು. ಅದಾದ ನಂತರ ಸತತ ಮೂರನೇ ಬಾರಿಗೆ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾಗುತ್ತಿದೆ. 2021ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿ ಗಾದಿಗೇರಿದ್ದ ಹಿಮಂತ ಬಿಸ್ವಾ ಶರ್ಮಾ, ರಾಜ್ಯದಲ್ಲಿ ಸತತ ಎರಡು ಅವಧಿಗೆ ಮುಖ್ಯಮಂತ್ರಿಯಾದ ಕಾಂಗ್ರೆಸ್ಸೇತರ ನಾಯಕರೆನಿಸಿಕೊಳ್ಳಲಿದ್ದಾರೆ.

ಒಟ್ಟು 126 ಸದಸ್ಯ ಬಲದ ಅಸ್ಸಾಂ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ 102 ಸ್ಥಾನಗಳನ್ನು ಗೆಲುವು ಪಡೆದಿದ್ದು, ಇದರಲ್ಲಿ ಹೆಚ್ಚಿನ(82) ಸ್ಥಾನಗಳಲ್ಲಿ ಬಿಜೆಪಿ ಜಯಭೇರಿ ಭಾರಿಸಿದೆ. ಮಿತ್ರ ಪಕ್ಷಗಳಾದ ಎಜಿಪಿ ಮತ್ತು ಬಿಪಿಎಫ್ ತಲಾ 10 ಕ್ಷೇತ್ರಗಳಲ್ಲಿ ಜಯ ಸಾಧಿಸಿವೆ ಕಾಂಗ್ರೆಸ್ 19 ಕ್ಷೇತ್ರಗಳಲ್ಲಿ ಗೆಲುವು ಪಡೆದಿದೆ.

ಎರಡು ಇನೋವಾ ಕಾರು, ಟೆಂಪೋ ಟ್ರ್ಯಾಕ್ ನಡುವೆ ಸರಣಿ ಅಪಘಾತ



ಸುಂಟಿಕೊಪ್ಪ, ಮೇ 10–ಇಲ್ಲಿನ ಗದ್ದೆಹಳ್ಳದ ಬಳಿ ಎರಡು ಇನೋವಾ ಕಾರು ಹಾಗೂ ಟೆಂಪೋ ಟ್ರ್ಯಾಕ್ ನಡುವೆ ಸರಣಿ ಅಪಘಾತ ಸಂಭವಿಸಿದ್ದು, ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸುಂಟಿಕೊಪ್ಪ ರಾಷ್ಟ್ರೀಯ ಹೆದ್ದಾರಿಯ ಗದ್ದೆಹಳ್ಳದ ತಿರುವಿನಲ್ಲಿ ಬೆಂಗಳೂರಿನಿಂದ ಮಡಿಕೇರಿ ಕಡೆಗೆ ತೆರಳುತ್ತಿದ್ದ ಟೆಂಪೋ ಟ್ರ್ಯಾಕ್ (ಕೆಎ.51, ಎಜೆ–8661) ಮಡಿಕೇರಿ ಕಡೆಯಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಇನೋವಾ ವಾಹನ(ಕೆಎ.03, ಎಂಆರ್–9900) ಹಾಗೂ ಮೈಸೂರಿನಿಂದ ಮಡಿಕೇರಿ ಕಡೆಗೆ ಆಗಮಿಸುತ್ತಿದ್ದ ಇನೋವಾ (ಕೆಎ.01, ಎಕೆ–7349) ವಾಹನಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿದೆ. ಚಾಲಕನ ನಿಯಂತ್ರಣ ತಪ್ಪಿದ ಟೆಂಪೋ ಟ್ರ್ಯಾಕ್ ಹೆದ್ದಾರಿ ಬದಿಗೆ ಮಗುಚಿಕೊಂಡಿದೆ. ಎರಡು ಇನೋವಾ ಕಾರುಗಳು ಜಖಂ ಆಗಿದ್ದು, ಈ ವಾಹನಗಳಲ್ಲಿದ್ದ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಘಟನೆಯಿಂದ ಕೆಲ ಗಂಟೆಗಳ ಕಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ದಟ್ಟಣೆ ಉಂಟಾಗಿ ಸಂಚಾರಕ್ಕೆ ತೊಡಕುಂಟಾಗಿತು. ಅಪಘಾತದ ಕುರಿತು ದೂರು ದಾಖಲಾದ ಹಿನ್ನೆಲೆಯಲ್ಲಿ ಸುಂಟಿಕೊಪ್ಪ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ತೆರಳಿ ಮಹಜರು ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸ್ನಾನಕ್ಕೆ ತೆರಳಿದ್ದ ಯುವಕ ನೀರಿನಲ್ಲಿ ಮುಳುಗಿ ಸಾವು



ಮಡಿಕೇರಿ: ಕಾವೇರಿ ನದಿಯಲ್ಲಿ ಸ್ನಾನಕ್ಕೆ ತೆರಳಿದ್ದ ಯುವಕನೊಬ್ಬ ನೀರಿನಲ್ಲಿ ಮುಳುಗಿ ಅಸುನೀಗಿರುವ ಘಟನೆ ಮೂರ್ನಾಡು ಸಮೀಪದ ಬಲಮುರಿ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಬಲಮುರಿ ಗ್ರಾಮದ ವಾಟೆಕಾಡು ಪೈಸಾರಿ ನಿವಾಸಿ ಕೂಲಿ ಕಾರ್ಮಿಕರಾದ ರಂಜು ಮತ್ತು ಪುಷ್ಪ ದಂಪತಿಯ ಪುತ್ರ ಪುನೀತ್ (21) ಮೃತಪಟ್ಟ ದುರ್ದೈವಿ.

ಭಾನುವಾರ ಮಧ್ಯಾಹ್ನ ನಾಲ್ವರು ಹುಡುಗರ ತಂಡ ಬಲಮುರಿ ಕಾವೇರಿ ನದಿಯ ಸೇತುವೆಯ ಸಮೀಪ ಸ್ನಾನ ಮಾಡಲು ತೆರಳಿದ್ದರು. ಈ ವೇಳೆ ಪುನೀತ್ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಇತರ ಯುವಕರು ಗ್ರಾಮಸ್ಥರಿಗೆ ಮಾಹಿತಿ ನೀಡಿದ್ದು, ಬಳಿಕ ಬಲಮುರಿ ನಿವಾಸಿ ಮುಳುಗು ತಜ್ಞ ಎಂ. ಆರ್ ಬಿಪಿನ್ ಮೃತದೇಹ ವನ್ನು ಪತ್ತೆ ಹಚ್ಚಿ ನೀರಿನಿಂದ ಮೇಲೆತ್ತಿದ್ದಾರೆ. ನಾಪೋಕ್ಲು ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಮೃತ ದೇಹದ ಮಹಜರು ನಡೆಸಿದರು. ಈ ಕುರಿತು ಪೊಲೀಸರು ಪ್ರಕರಣ ದಾಖಲಿಸಿ ಕಾನೂನಿನ ಕ್ರಮ ಕೈಗೊಂಡಿದ್ದಾರೆ.

ಐಸಿಎಸ್‌ಇ ಪರೀಕ್ಷೆಯಲ್ಲಿ ಅಧೃತ್ ಶರ್ಮ ಜಿಲ್ಲೆಗೆ ಪ್ರಥಮ ಸ್ಥಾನ



ಮಡಿಕೇರಿ, ಮೇ 10– ಐಸಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಗೋಣಿಕೊಪ್ಪದ ಕೂರ್ಗ್ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿ ಪಿ.ಹೆಚ್.ಅಧೃತ್ ಶರ್ಮ ಶೇ.98.20 ಫಲಿತಾಂಶ ಗಳಿಸುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಇವರು ವಿರಾಜಪೇಟೆ ತಾಲೂಕಿನ ಪಾಲಂಗಾಲ ಗ್ರಾಮದ ಪಿ.ಎನ್.ಹರಿಶಂಕರ್ ಪ್ರಸಾದ್ ಹಾಗೂ ಡಾ.ವಿಜಯಲತಾ ಸಿ. ದಂಪತಿಯ ಪುತ್ರ.

ಹಾರಂಗಿ ಜಲಾಶಯದಿಂದ ನದಿ ಪಾತ್ರಕ್ಕೆ ಪ್ರತಿ ನಿತ್ಯ 500 ಕ್ಯೂಸೆಕ್ ನೀರು ಬಿಡುಗಡೆ



ಮಡಿಕೇರಿ, ಮೇ 10–ಕುಡಿಯುವ ನೀರು ಪೂರೈಕೆ ಉದ್ದೇಶದಿಂದ ಹಾರಂಗಿ ಜಲಾಶಯದಿಂದ ನದಿ ಪಾತ್ರಕ್ಕೆ ಪ್ರತಿ ನಿತ್ಯ 500 ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ. ಹಾರಂಗಿ ಜಲಾಶಯ ಕುಡಿಯುವ ನೀರಿನ ಸಮಿತಿ ಸಭೆಯಲ್ಲಿ ಮೈಸೂರು ಪ್ರಾದೇಶಿಕ ಆಯುಕ್ತರು ನೀಡಿದ್ದ ಆದೇಶದಂತೆ ನೀರು ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆ. ಮೇ.13ರವರೆಗೆ ದಿನವೊಂದಕ್ಕೆ ಜಲಾಶಯದಿಂದ ನದಿಗೆ 500 ಕ್ಯೂಸೆಕ್ ನೀರನ್ನು ಹರಿಸಲಾಗುತ್ತದೆ ಎಂದು ಹಾರಂಗಿ ಪುನರ್ವಸತಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಐ.ಕೆ. ಪುಟ್ಟಸ್ವಾಮಿ ತಿಳಿಸಿದ್ದಾರೆ. ಇದರಿಂದ ಕುಶಾಲನಗರ, ಪಿರಿಯಾಪಟ್ಟಣ, ಅರಕಲಗೂಡು, ಹುಣಸೂರು, ಕೆ.ಆರ್.ನಗರ ಹಾಗೂ ಸಾಲಿಗ್ರಾಮ ತಾಲೂಕುಗಳಿಗೆ ಅನುಕೂಲವಾಗಲಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ

ಹಾರಂಗಿ ಮಾಹಿತಿ: ಹಾರಂಗಿ ಜಲಾಶಯ 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಪ್ರಸ್ತುತ ಬೇಸಿಗೆಯಲ್ಲಿ ಜಲಾಶಯದಲ್ಲಿ 2826.45 ಅಡಿಗಳಷ್ಟು ನೀರಿನ ಸಗ್ರಹವಿದೆ. ಇನ್ನು ಹಾರಂಗಿ ಜಲಾಶಯದ ನದಿ ನೀರಿನ ಮೂಲ ಪ್ರದೇಶಗಳಾದ ಮಡಿಕೇರಿ ನಗರ, ಗಾಳಿ ಬೀಡು, ಕಾಲೂರು, ಮಕ್ಕಂದೂರು, ಸುಂಟಿ ಕೊಪ್ಪ, ಮಾದಾ ಪುರ, ಸೂರ್ಲಬ್ಬಿ, ಗರ್ವಾಲೆ, ಕುಂಬಾರಗಡಿಗೆ, ಸೋಮವಾರಪೇಟೆ ಪಟ್ಟಣ ಸೇರಿದಂತೆ ಮತ್ತಿತ್ತರ ಕಡೆಗಳಲ್ಲಿ ಉತ್ತಮ ಮಳೆಯಾದಲ್ಲಿ ಹಟ್ಟಿಹೊಳೆ, ಮಾದಾಪುರ ಹೊಳೆ, ಕಕ್ಕೆಹೊಳೆ, ದುದ್ದಗಲ್ ನದಿಗಳಲ್ಲಿ ನೀರಿನ ಮಟ್ಟ ಏರಿಕೆ ಕಾಣಲು ಸಾಧ್ಯವಾಗಲಿದೆ. ಈ ನೀರು ನೇರವಾಗಿ ಹಾರಂಗಿ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ಶೇಖರಣೆಯಾಗಲಿದೆ. ಈಗಾಗಲೇ ಹಾರಂಗಿ ಜಲಾಶಯಕ್ಕೆ 155 ಕ್ಯುಸೆಕ್ ನೀರಿನ ಒಳ ಹರಿವು ದಾಖಲಾಗಿದೆ.

ಮೇ14ರಿಂದ ಜಿಲ್ಲಾ ಮಟ್ಟದ ಎ ಡಿವಿಶನ್ ಫುಟ್ಬಾಲ್ ಲೀಗ್ ಪಂದ್ಯಾವಳಿ

ಮಡಿಕೇರಿ, ಮೇ 10– ಜಿಲ್ಲಾ ಮಟ್ಟದ ಎ ಡಿವಿಶನ್ ಫುಟ್ಬಾಲ್ ಲೀಗ್ ಪಂದ್ಯಾಟಗಳು ಮೇ14ರಿಂದ 17ರವರೆಗೆ ಅಮ್ಮತ್ತಿ ಪ್ರೌಢಶಾಲಾ ಮೈದಾನದಲ್ಲಿ ನಡೆಯಲಿದೆ ಎಂದು ಕೊಡಗು ಜಿಲ್ಲಾ ಫುಟ್ಬಾಲ್ ಸಂಸ್ಥೆ ಕಾರ್ಯದರ್ಶಿ ಪಂದಿಕಂಡ ನಾಗೇಶ್ ತಿಳಿಸಿದ್ದಾರೆ.

ಈ ಬಾರಿಯ ಲೀಗ್ ಪಂದ್ಯಾಟದಲ್ಲಿ 10 ನೋಂದಾಯಿತ ತಂಡಗಳು ಭಾಗವಹಿಸಲಿದ್ದು, 2 ಗುಂಪುಗಳಲ್ಲಿ ತಲಾ 5 ತಂಡಗಳು ಆಡಲಿವೆ. ಪ್ರತಿ ತಂಡವು 4 ಲೀಗ್ ಪಂದ್ಯಾಟ ಆಡಲಿದ್ದು, 2 ಗುಂಪುಗಳಲ್ಲಿ ಅಗ್ರ ಸ್ಥಾನಗಳಿಸುವ ತಲಾ 2 ತಂಡಗಳು ಸೆಮಿಫೈನಲ್ ಪ್ರವೇಶ ಮಾಡಲಿವೆ. ಪಂದ್ಯಾಟವನ್ನು ಜಿಲ್ಲಾ ಫುಟ್ಬಾಲ್ ಸಂಸ್ಥೆ ಮಹಾ ಪೋಷಕ ನೆಲ್ಲಮಕ್ಕಡ ಮೋಹನ್ ಅಯ್ಯಪ್ಪ ಉದ್ಘಾಟಿಸಲಿದ್ದಾರೆ. ಫೈನಲ್ ಪಂದ್ಯಾಟ ಮೇ 17ರಂದು ನಡೆಯಲಿದ್ದು ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಮೇ20, ಮಹರ್ಷಿ ವಾಲ್ಮೀಕಿ ಪತ್ತಿನ ಸಹಕಾರ ಸಂಘದ ಕಚೇರಿ ಉದ್ಘಾಟನೆ



ಸಂಘದ ಕಚೇರಿ ಉದ್ಘಾಟನಾ ಸಮಾರಂಭದ ಆಹ್ವಾನ ಪತ್ರಿಕೆಯನ್ನು ಆಡಳಿತ ಮಂಡಲಿ ಸದಸ್ಯರು ಬಿಡುಗಡೆ ಮಾಡಿದರು.

ಕುಶಾಲನಗರ: ಪಟ್ಟಣದಲ್ಲಿ ನೂತನವಾಗಿ ಆರಂಭಿಸುತ್ತಿರುವ ಜಿಲ್ಲಾ ಶ್ರೀ ಮಹರ್ಷಿ ವಾಲ್ಮೀಕಿ ಪತ್ತಿನ ಸಹಕಾರ ಸಂಘದ ಕಚೇರಿಯ ಉದ್ಘಾಟನಾ ಸಮಾರಂಭ ಮೇ 20 ರಂದು ಬುಧವಾರ ಏರ್ಪಡಿಸಲಾಗಿದೆ ಎಂದು ಸಹಕಾರ ಸಂಘದ ಅಧ್ಯಕ್ಷ ಕೆ.ಎನ್ ಅಶೋಕ್ ಹೇಳಿದರು.

ಕಲಾಮಂದಿರದಲ್ಲಿ ನಡೆಯುವ ಕಾರ್ಯಕ್ರಮವನ್ನು ಸಚಿವ ಸತೀಶ್ ಜಾರಕಿಹೊಳಿ ನೆರವೇರಿಸುವರು. ಸಂಘದ ಕಚೇರಿಯನ್ನು ಶಾಸಕ ಡಾ ಮಂತರ್ ಗೌಡ ಉದ್ಘಾಟಿಸಲಿದ್ದಾರೆ. ಎಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಮಾಜಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ಸದಸ್ಯರಿಗೆ ಪಾಲು ಬಂಡವಾಳ ದೃಢೀಕರಣ ಪತ್ರ ವಿತರಣೆ ಮಾಡಲಿದ್ದಾರೆ. ಸಹಕಾರ ಸಂಘದ ಅಧ್ಯಕ್ಷ ಅಶೋಕ್ ಅಧ್ಯಕ್ಷತೆ ವಹಿಸು ವರು. ಡಾ ಪ್ರಸನ್ನಾನಂದ ಸ್ವಾಮೀಜಿ ಅವರ ದಿವ್ಯ ಸಾನಿಧ್ಯ ವಹಿಸುವರು. ಶಾಸಕ ಎ.ಎಸ್. ಪೊನ್ನಣ್ಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಘದಲ್ಲಿ ಪ್ರಸಕ್ತ 300 ಸದಸ್ಯರು ನೋಂದಾಯಿಸಿದ್ದು, ಸಂಘದ ಮೂಲಕ ಠೇವಣಿ ಹಾಗೂ ಜಾಮೀನು ಸಾಲ, ವೈಯಕ್ತಿಕ ಸಾಲ, ಆಭರಣ ಸಾಲ ನೀಡಲಾಗುವುದು ಎಂದು ಮಾಹಿತಿ ಒದಗಿಸಿದರು. ಸಮಾಜದ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಗುವುದು ಎಂದು ಅಶೋಕ್ ತಿಳಿಸಿದರು.

ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ನಿರ್ದೇಶಕರುಗಳು ಸಂಘದ ಆಹ್ವಾನ ಪತ್ರ ಬಿಡುಗಡೆ ಮಾಡಿದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ಪಿ.ಟಿ.ಸುರೇಶ್ ಹಾಗೂ ಸಂಘದ ನಿರ್ದೇಶಕರು ಭಾಗವಹಿಸಿದ್ದರು.

ವಿಜೃಂಭಣೆಯ ದಕ್ಷಿಣ ಮಾರಿಯಮ್ಮ ವಾರ್ಷಿಕ ಕರಗ



ವಿರಾಜಪೇಟೆ: ಪಟ್ಟಣದ ತೆಲುಗರ ಬೀದಿಯಲ್ಲಿರುವ ಶ್ರೀ ದಕ್ಷಿಣ ಮಾರಿಯಮ್ಮ ದೇವಿಯ ಕರಗ ಮಹೋತ್ಸವ್ವನ್ನು ಕಳೆದ ಐದು ದಿನಗಳು ಭಕ್ತಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು.

ಶ್ರೀ ಮಾರಿಯಮ್ಮ ಮತ್ತು ಅಂಗಾಳ ಪರಮೇಶ್ವರಿ ದೇವಸ್ಥಾನ ಸಾಧುಶೆಟ್ಟಿ 24 ಮನೆ ತೆಲುಗು ಶೆಟ್ಟಿ ಸಂಘದ ವತಿಯಿಂದ ಹಲವು ಶತಮಾನಗಳಿಂದಲೂ ನಡೆಸಿಕೊಂಡು ಬರುತ್ತಿರುವ ಶ್ರೀ ದಕ್ಷಿಣ ಮಾರಿಯಮ್ಮ ದೇವಿಯ ಕರಗ ಮಹೋತ್ಸವದಲ್ಲಿ ಕರಗ ಆರಾಧನೆಯೊಂದಿಗೆ ಪ್ರಾರಂಭಗೊಂಡು ನಂದಾ ದೀಪಾರತಿ, ದೇವಿಯ ವಿಶೇಷ ಪೂಜೆ ಹಾಗೂ ಮಹಾಪೂಜೆ ಬಳಿಕ ಪ್ರಸಾದ ವಿನಿಯೋಗ, ಕರಗ ವಿಸರ್ಜನಾರಾಧನೆ ನಡೆಯಿತು.

ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ದೇವಸ್ಥಾನ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಸದಸ್ಯರುಗಳು ಹಾಜರಿದ್ದರು, ಪಟ್ಟಣ ಹಾಗೂ ಗ್ರಾಮೀಣ ಭಾಗದಿಂದಲೂ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮೇ 13ರಿಂದ ಪಾಡಿ ಶ್ರೀ ಇಗುತ್ತಪ್ಪ ದೇವಸ್ಥಾನದ ಬ್ರಹ್ಮಕಲಶೋತ್ಸವ

ನಾಪೋಕ್ಲು: ಸಮೀಪದ ಕಕ್ಕಬೆಯ ಪಾಡಿ ಶ್ರೀ ಇಗುತ್ತಪ್ಪ ದೇವಸ್ಥಾನದ ಅಷ್ಟ ಬಂಧ ಬ್ರಹ್ಮಕಲಶೋತ್ಸವ ಮೇ 13 ರಿಂದ 18ರವರೆಗೆ ವಿಜೃಂಭಣೆಯಿಂದ ನಡೆಯಲಿದೆ. ನೀಲೇಶ್ವರ ಉಚ್ಚಿಲತಾಯ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಮೇ 13 ರಂದು ಸಾಮೂಹಿಕ ಪ್ರಾರ್ಥನೆ, ಪುಣ್ಯಾಹ ಅಂಕುರಾರ್ಪಣೆ, ವಾಸ್ತು ರಾಕ್ಷೋಘ್ನ ಹೋಮ ನೆರವೇರಲಿದೆ. ಮೇ 14ರಂದು ಗಣಪತಿ ಹೋಮ ಅಂಕುರ ಪೂಜೆ, ಬಿಂಬಶುದ್ಧಿ ಕಳಶ ಪೂಜೆ ಕಲಶಾಭಿಷೇಕ ಪ್ರಾಯಶ್ಚಿತ ಹೋಮಗಳು ನೆರವೇರಲಿವೆ. ರಾತ್ರಿ ಅಂಕುರ ಪೂಜೆ ಹಾಗೂ ದುರ್ಗಾ ನಮಸ್ಕಾರ ಪೂಜೆಗಳು ನೆರವೇರಲಿವೆ. ಮೇ 15ರಂದು ಬೆಳಿಗ್ಗೆ 7 ಗಂಟೆಗೆ ಗಣಪತಿ ಹೋಮ ಅಂಕುರ ಪೂಜೆ, ಶಾಂತಿ ಹೋಮಗಳು ಹೋಮ ಕಲಶಾಭಿಷೇಕ ನಡೆಯಲಿದ್ದು ಮಧ್ಯಾಹ್ನ ಪೂಜೆ ಹಾಗೂ ರಾತ್ರಿ ಅಂಕುರ ಪೂಜೆ, ದುರ್ಗಾ ನಮಸ್ಕಾರ ಪೂಜೆಗಳು ನಡೆಯಲಿವೆ.

ಮೇ 16ರಂದು ಬೆಳಿಗ್ಗೆ 7 ರಿಂದ ಗಣಪತಿ ಹೋಮ ಅಂಕುರ ಪೂಜೆ ತತ್ವ ಹೋಮ ತತ್ವ ಕಲಶ ಪೂಜೆ ತತ್ವ ಕಲಶಾಭಿಷೇಕ ನಡೆಯಲಿದೆ. ಮೇ 17ರಂದು ಬೆಳಿಗ್ಗೆ 7 ಗಂಟೆಯಿಂದ ಗಣಪತಿ ಹೋಮ, ಅಂಕುರ ಪೂಜೆ, ಕಲಶ ಪೂಜೆ ಕುಂಭೇಶ ಕರ್ಕರಿ ಕಲಶ ಪೂಜೆ ಅಧಿವಾಸ ಹೋಮಗಳು ನಡೆಯಲಿವೆ. ಮೇ 18ರಂದು ಬೆಳಿಗ್ಗೆ 8 ಗಂಟೆಯಿಂದ ರೋಹಿಣಿ ನಕ್ಷತ್ರ ಮಿಥುನ ಲಗ್ನದಲ್ಲಿ ಅಷ್ಟ ಬಂಧ ಲೇಪನ ಪರಿಕಲಶಾಭಿಷೇಕ ಬ್ರಹ್ಮಕಲಶಾಭಿಷೇಕ ನಡೆಯಲಿದೆ. ಮಧ್ಯಾಹ್ನ ಪೂಜೆ ಪ್ರಸಾದ ವಿತರಣೆ ಮಂತ್ರಾಕ್ಷತೆ ಜರುಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿಜೃಂಭಣೆಯ ಶ್ರೀಚೌಡೇಶ್ವರಿ ಅಮ್ಮನವರ ದೊಡ್ಡ ಕತ್ತಿ ಹಬ್ಬ



ಶ್ರೀರಾಮಲಿಂಗ ಚೌಡೇಶ್ವರಿ ಅಮ್ಮನವರ 47ನೇ ವರ್ಷದ ದೊಡ್ಡ ಕತ್ತಿ ಹಬ್ಬ ವಿಜೃಂಭಣೆಯಿಂದ ನಡೆಯಿತು.

ಚಾಮರಾಜನಗರ: ನಗರದ ಸಮೀಪದಲ್ಲಿರುವ ರಾಮಸಮುದ್ರ ಬಡಾವಣೆಯಲ್ಲಿ ಶ್ರೀರಾಮಲಿಂಗ ಚೌಡೇಶ್ವರಿ ಅಮ್ಮನವರ 47ನೇ ವರ್ಷದ ದೊಡ್ಡ ಕತ್ತಿ ಹಬ್ಬ ವಿಜೃಂಭಣೆಯಿಂದ ನಡೆಯಿತು.

ಹಬ್ಬದ ಪ್ರಯುಕ್ತ ದೇವಾಂಗ ಕುಲ ಬಾಂಧವರು ಅಲಗು ಸೇವೆ ಮೆರವಣಿಗೆಯನ್ನು ರಾಮಸಮುದ್ರ ಬಡಾವಣೆಯ ಪ್ರಮುಖ ಬೀದಿಯಲ್ಲಿ ಅದ್ಧೂರಿಯಾಗಿ ನಡೆಸಿದರು. ಕಾರ್ಯಕ್ರಮದ ಅಂಗವಾಗಿ ಭಾನುವಾರ ಬೆಳಗ್ಗೆಯಿಂದಲೇ ಶ್ರೀರಾಮಲಿಂಗೇಶ್ವರ ಹಾಗೂ ಶ್ರೀಚೌಡೇಶ್ವರಿ ಅಮ್ಮನವರಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನಡೆಯಿತು.

ಬೆಳಗ್ಗೆ 8:24ಕ್ಕೆ ಸಲ್ಲುವ ವೃಷಭ ಲಗ್ನದಲ್ಲಿ ಅಲಗು ಸೇವೆ ಪ್ರಾರಂಭಗೊಂಡಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ದೇವಾಂಗ ಸಮಾ ಜದ ಕುಲಬಾಂಧವರು ತಾಯಿ ಚೌಡೇಶ್ವರಿ ದೇವಿಯನ್ನು ಸ್ಮರಿಸಿ ಕತ್ತಿಯನ್ನು ತಮ್ಮ ಎದೆ ಭಾಗಕ್ಕೆ ಸ್ಪರ್ಶಿಸುವ ಮೂಲಕ ತಮ್ಮ ಭಕ್ತಿ ಪರಾಕಾಷ್ಟೆಯನ್ನು ಸಮರ್ಪಿಸಿದರು.

ಕತ್ತಿ ಹಬ್ಬದ ಅಂಗವಾಗಿ ದೇವಸ್ಥಾನದ ಬೀದಿಯನ್ನು ತಳಿರು–ತೋರಣಗಳು ಹಾಗೂ ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರದಿಂದ ಸಿಂಗರಿಸಲಾಗಿತ್ತು. ವಿವಿಧ ಕಡೆಯಿಂದ ಆಗಮಿಸಿದ್ದ ಸಾವಿರಾರು ಸಂಖ್ಯೆಯ ಭಕ್ತರು ಸರತಿ ಸಾಲಿನಲ್ಲಿ ನಿಂತು ಶ್ರೀಚೌಡೇಶ್ವರಿ ತಾಯಿಯ ದರ್ಶನ ಪಡೆದು ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ವಿವಿಯಲ್ಲಿ ಈ ವರ್ಷದಿಂದ ಪಿಎಚ್‌ಡಿಗೆ ಅವಕಾಶ



ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ, ಪದವಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಮೇ 10– ವಿಶ್ವವಿದ್ಯಾಲಯದಲ್ಲಿ ಈ ವರ್ಷದಿಂದ ಪಿಎಚ್‌ಡಿ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ವಿದ್ಯಾರ್ಥಿ ವೇತನವೂ ದೊರೆಯುತ್ತದೆ ಈ ಸದವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕುಲಸಚಿವ ಪ್ರೊ.ಕೆ.ಎಂ. ಮಹಾದೇವನ್ ಹೇಳಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಭಾಷಣ ಮಾಡಿದ ಅವರು, ಸ್ನಾತಕೋತ್ತರ ಪದವಿ ಪಡೆದ ನಂತರ ಪಿಎಚ್‌ಡಿ ಪದವಿ ಪಡೆಯಲು ಅವಕಾಶ ವಿದೆ. ಐದು ವರ್ಷಗಳ ಕಾಲ ಇದಕ್ಕಾಗಿ ದೊಡ್ಡ ಮೊತ್ತದ ವಿದ್ಯಾರ್ಥಿ ವೇತನವೂ ದೊರಕುತ್ತದೆ. ಈ ಶೈಕ್ಷಣಿಕ ವರ್ಷದಿಂದ ಆರಂಭಿಸಲಾಗಿದ್ದು ವಿದ್ಯಾರ್ಥಿಗಳು ನೋಂದಾಯಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಜೆಎಸ್‌ಎಸ್ ಬಿಎಡ್ ಕಾಲೇಜು ಪ್ರಾಂಶುಪಾಲ ಡಾ.ಕೆ.ಸಿ. ಬಸವಣ್ಣ ಮಾತನಾಡಿ, ವಿದ್ಯಾರ್ಥಿಗಳ ಜೀವನದಲ್ಲಿ ಪದವಿ ವ್ಯಾಸಂಗ ಪ್ರಮುಖ ಘಟ್ಟ, ಹೆಣ್ಣು ಮಕ್ಕಳು ಉತ್ತಮ ವ್ಯಾಸಂಗ ಮಾಡಿ, ಉದ್ಯೋಗ ಪಡೆದರೆ ಅದು ಸಮಾಜದ ಮುನ್ನಡೆಗೆ ಕಾರಣವಾಗುತ್ತದೆ. ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗದೆ, ಉತ್ತಮ ಜೀವನ ರೂಪಿಸಿಕೊಳ್ಳುವುದಕ್ಕೆ ಸಹಾಯಕವಾಗುವ ಜ್ಞಾನ, ಕೌಶಲ್ಯವನ್ನು ಬೆಳೆಸಿಕೊಳ್ಳಿ ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಅಂತಾರಾಷ್ಟ್ರೀಯ ಖೋ ಖೋ ಕ್ರೀಡಾಪಟು ಚೈತ್ರಾ ಮಾತ ನಾಡಿ ವಿದ್ಯಾರ್ಥಿಗಳು ತಮ್ಮ ಕ್ರೀಡಾ ಪ್ರತಿಭೆಗಳನ್ನು ಮುಂದುವರೆಸಿಕೊಂಡು ಹೋಗ ಬೇಕು. ಕ್ರೀಡಾಪಟುಗಳಿಗೆ ವಿಪುಲವಾದ ಉದ್ಯೋಗಾವಕಾಶಗಳಿವೆ. ನಿಮಗೆ ಆಸಕ್ತಿಯಿರುವ ಕ್ರೀಡೆಯಲ್ಲಿ ಸಾಧನೆ ಮಾಡಿದರೆ ಪ್ರಸಿದ್ಧಿ ಮತ್ತು ಉದ್ಯೋಗವೂ ದೊರಕುತ್ತದೆ ಎಂದರು.

ಪದವಿಯ ವಿವಿಧ ವಿಭಾಗಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿಯರನ್ನು ದತ್ತಿ ಪುರಸ್ಕಾರ, ನಗದು ಬಹುಮಾನ ನೀಡಿ ಗೌರವಿಸಲಾಯಿತು. ವಿವಿಧ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಟಿ.ಎಂ. ಮರಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ದೇವರಾಜಮೂರ್ತಿ, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಜಮುನಾ, ಗಣಿತ ವಿಭಾಗದ ಮುಖ್ಯಸ್ಥೆ ಅರುಣಾಶ್ರೀ, ದೈಹಿಕ ಶಿಕ್ಷಣ ನಿರ್ದೇಶಕ ಉಮೇಶ್ ಹಾಗೂ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಅನುಶ್ರೀ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಉಮ್ಮತ್ತೂರು ಇಂದುಶೇಖರ್‌ಗೆ ಇಂಟರ್ ನ್ಯಾಷನಲ್ ಜಸ್ಟಿಸ್ ಅವಾರ್ಡ್ ಪ್ರದಾನ



ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್‌ಗೆ ಬಳ್ಳಾರಿಯಲ್ಲಿ ಇಂಟರ್ ನ್ಯಾಷನಲ್ ಜಸ್ಟಿಸ್ ಅವಾರ್ಡ್ ನೀಡಿ ಗೌರವಿಸಲಾಯಿತು.

ಚಾಮರಾಜನಗರ, ಮೇ 10–ರಾಯಚೂರಿನ ಬೆಳಕು ಸಂಸ್ಥೆ ಕೊಡಲ್ಪಡುವ ಇಂಟರ್ ನ್ಯಾಷನಲ್ ಜಸ್ಟಿಸ್ ಅವಾರ್ಡ್ ಅನ್ನು ಇಂದು ಬಳ್ಳಾರಿಯಲ್ಲಿ ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಅವರಿಗೆ ನೀಡಿ ಗೌರವಿಸಲಾಯಿತು

ಬಳ್ಳಾರಿಯ ಜೋಳದ ರಾಶಿ ಸಿದ್ದನಗೌಡ ರಂಗ ಮಂದಿರದಲ್ಲಿ ನಡೆದ ಗಡಿನಾಡು ಸಮ್ಮೇಳನದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಡಾ. ಅಮರೇಶ್ ನುಗುಡೋಣಿ ಉಮ್ಮತ್ತೂರು ಇಂದುಶೇಖರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಜಿಲ್ಲಾ ವಕೀಲರ ಸಂಘದಲ್ಲಿ ನಾಲ್ಕು ಬಾರಿ ಅಧ್ಯಕ್ಷರಾಗಿ ನೂರಾರು ಕಾನೂನು ಅರಿವು ಕಾರ್ಯಕ್ರಮಗಳನ್ನು ನೀಡಿರುವುದನ್ನು ಗುರುತಿಸಿ ಈ ಅವಾರ್ಡ್ ನೀಡಲಾಗಿದೆ. ಸಮ್ಮೇಳನದ ಅಧ್ಯಕ್ಷ ಯಲ್ಲನಗೌಡ ಶಂಕರ ಬಂಡಿ, ಡಾ. ಮಲ್ಲಿಕಾರ್ಜುನ ಹೀರೇ ಮಠ್, ಸಾಹಿತಿ ಡಾ. ಮುನಿರಾಜು, ಡಾ. ಎಸ್.ಎಸ್. ಪಾಟೀಲ್ ಬೆಳಕು ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ, ಬಳ್ಳಾರಿ ಪತ್ರಕರ್ತರ ಅಧ್ಯಕ್ಷ ಎನ್.ವೀರ ಭದ್ರಗೌಡ, ಡಾ. ವಿಷ್ಣು ಎಂ.ಶಿಂದೆ, ಜನಪದ ಗಾಯಕ ಜ. ಸುರೇಶ್ ನಾಗ್ ಹಾಜರಿದ್ದರು.

ರೋಟರಿ ಸೇವಾಕಾರ್ಯಗಳನ್ನು ಸಾರ್ಥಕ ಪಡಿಸಿಕೊಳ್ಳಿ



ನಗರದ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ ವತಿಯಿಂದ ಉಚಿತ ಕೃತಕ ಕೈ–ಕಾಲು ಜೋಡಣಾ ಶಿಬಿರ ನಡೆಯಿತು.

ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕೃತಕ ಕೈ–ಕಾಲು ಜೋಡಣಾ ಶಿಬಿರ ಭಾನುವಾರ ಯಶಸ್ವಿಯಾಗಿ ನಡೆಯಿತು.

ನಗರದ ರೋಟರಿ ಭವನದಲ್ಲಿ ನಡೆದ ಉಚಿತ ಕೈ–ಕಾಲು ಜೋಡಣಾ ಶಿಬಿರದಲ್ಲಿ 118 ಮಂದಿ ವಿಶೇಷ ಚೇತನರಿಂದ ಕೃತಕ ಕೈ–ಕಾಲು ಅಳತೆ ತೆಗೆದುಕೊಳ್ಳಲಾಯಿತು.

ರೋಟರಿ ಸಂಸ್ಥೆಯ ಜಿಲ್ಲಾ ಗೌರ್ನರ್ ಡಾ.ನಾಗಾರ್ಜುನ ಮಾತನಾಡಿ, ರೋಟರಿ ಸಂಸ್ಥೆಯ ಅಧ್ಯಕ್ಷ ಕಾಗಲವಾಡಿ ಚಂದ್ರು ಆಶಯದಂತೆ ಉಚಿತ ಕೃತಕ ಕೈ–ಕಾಲು ಜೋಡಣಾ ಶಿಬಿರ ನಡೆಯುತ್ತಿದೆ. ಕೈ–ಕಾಲು ಕಳೆದುಕೊಂಡ ಅನೇಕರು ಮನೆಯಲಿರುತ್ತಾರೆ ಅಂಥವರಿಗೆ ಸಹಾಯ ಮಾಡಿದರೆ ಜೀವನ ರೂಪಿಸಿಕೊಳ್ಳಲು ಇಂತಹ ಶಿಬಿರ ಸಹಕಾರಿಯಾಗುತ್ತದೆ. ನಿಮಗೆ ಕೊಡುತ್ತಿರುವ ಕೃತಕ ಕೈ–ಕಾಲುಗಳನ್ನು ನೀವು ಸರಿಯಾಗಿ ಸದ್ಬಳಕೆ ಮಾಡಿಕೊಂಡರೆ ರೋಟರಿ ಸಂಸ್ಥೆಯ ಸೇವಾ ಕಾರ್ಯ ಸಾರ್ಥಕವಾಗುತ್ತದೆ ಎಂದರು.

ರೋಟರಿ ಸಂಸ್ಥಾಪಕ ಸದಸ್ಯ ಜಿ.ಆರ್. ಅಶ್ವಥ್ ನಾರಾಯಣ್ ಶಿಬಿರಕ್ಕೆ ಚಾಲನೆ ನೀಡಿ, ರೋಟರಿ ಸಂಸ್ಥೆಯು ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾಗಿದ್ದು, ಬಡವರಿಗೆ ಸಹಕಾರಿಯಾಗಿರುವ ಸಮಾಜಮುಖಿ ಸೇವಾ ಕಾರ್ಯಗಳನ್ನು ಮಾಡುತ್ತಿದೆ. ವೈದ್ಯರ ಮಾರ್ಗದರ್ಶನ ಪಾಲನೆ ಮಾಡಿದರೆ ಈ ಶಿಬಿರದಲ್ಲಿ ನೀಡುವ ಕೃತಕ ಕೈ–ಕಾಲು ಉಪಯೋಗಕ್ಕೆ ಬರುತ್ತದೆ ಎಂದರು. ಸಹಾಯಕ ಗೌರ್ನರ್ ದೊಡ್ಡರಾಯಪೇಟೆ ಗಿರೀಶ್, ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿದರು.

ಶಿಬಿರದಲ್ಲಿ ರೋಟರಿ ಸಂಸ್ಥಾಪಕ ಸದಸ್ಯ ಸಿ.ವಿ.ಶ್ರೀನಿವಾಸಶೆಟ್ಟಿ, ಡಾ.ಸುಂದರೇಶ್, ಕಾಳನಹುಂಡಿ ಗುರುಸ್ವಾಮಿ, ಶಿಕ್ಷಕ ಮಹದೇವಸ್ವಾಮಿ, ಚಂದ್ರಪ್ರಭ ಜೈನ್, ಸುರೇಶ್, ಮೋಹನ್, ಅಂಕಶೆಟ್ಟಿ, ಅಬ್ದುಲ್ ಅಜೀಜ್ ದೀನಾ, ನೇಮಿರಾಜ್, ರತ್ನಮ್ಮ, ಪ್ರಭಾಕರ್, ಪ್ರಕಾಶ್, ರೂಪೇಶ್, ಸ್ವಾಗತ ರಮೇಶ್, ಸುಭಾಷ್, ಶ್ರೀನಿವಾಸ ಇತರರಿದ್ದರು.



ತಮಿಳುನಾಡು ಮುಖ್ಯಮಂತ್ರಿ ಪ್ರಮಾಣ ವಚನದ ಹಿನ್ನಲೆಯಲ್ಲಿ ತಾಲೂಕಿನ ಕೋಡಿಮೋಳೆ ಗ್ರಾಮದಲ್ಲಿ ಸಂಭ್ರಮಾಚರಣೆ ಆಚರಿಸಿದರು. ಈ ವೇಳೆ ಮನು, ಮಹೇಶ್, ಪ್ರಸಾದ್, ಮನೋಜ್, ಕಿರಣ್, ಮಣಿ, ಪುನೀತ್, ಚಿರು ಇತರರಿದ್ದರು

ಶಾಸಕ ಪುಟ್ಟರಂಗಶೆಟ್ಟಿಗೆ ಆಕ್ಸಿಜನ್ ಸಂತ್ರಸ್ಥೆಯಿಂದ ಅಭಿನಂದನೆ



ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರನ್ನು ಸಂತ್ರಸ್ಥೆ ಜ್ಯೋತಿ ಅಭಿನಂದಿಸಿದರು.

ಚಾಮರಾಜನಗರ, ಮೇ 10–ಆಕ್ಸಿಜನ್ ದುರಂತದಿಂದ ಮೃತಪಟ್ಟವರ ಕುಟುಂಬಕ್ಕೆ ಆರಂಭದಿಂದಲೂ ಶಾಸಕ ಪುಟ್ಟರಂಗ ಶೆಟ್ಟಿಯವರ ಸಹಕಾರದಿಂದ ಉದ್ಯೋಗ ಲಭಿಸಿತು ಎಂದು ಸಂತ್ರಸ್ಥೆ ಜ್ಯೋತಿ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ದುರಂತ ನಡೆದ ದಿನ ನನ್ನ ಗಂಡನ ಮೃತದೇಹ ಎಲ್ಲಿದೆ ಎಂಬ ಸರಿಯಾದ ಮಾಹಿತಿಯನ್ನು ಯಾರೂ ನೀಡಿರಲಿಲ್ಲ. ಆರಂಭದಲ್ಲಿ ದುರಂತದಿಂದ ಕೇವಲ 3 ಮಂದಿ ಮಾತ್ರ ಮೃತಪಟ್ಟಿದ್ದಾರೆ ಎಂದು ಹೇಳಲಾಗುತ್ತಿತು. ಈ ವೇಳೆ ಶಾಸಕ ಪುಟ್ಟರಂಗ ಶೆಟ್ಟಿ ಅವರು ಕೂಲಂಕುಶವಾಗಿ ಪರಿ ಶೀಲಿಸಿ ಅಧಿಕಾರಿಗಳಿಂದ ಸೂಕ್ತ ಮಾಹಿತಿ ಪಡೆದು ಕಾಂಗ್ರೆಸ್‌ನ ನಾಯಕರಿಗೆ ಹಾಗೂ ಸರ್ಕಾರಕ್ಕೆ ದುರಂತದಲ್ಲಿ ಮೃತಪಟ್ಟವರು 36 ಮಂದಿ ಎಂದು ತಿಳಿಸಿದ್ದರು. ಈ ಮೂಲಕ ಕೈಬಿಟ್ಟಿ ಹೋಗಿದ್ದ ಸಂತ್ರಸ್ತರ ಹೆಸರನ್ನು ಸೇರ್ಪಡೆಗೊಳಿಸಿದರು ಎಂದರು.

ದುರಂತವಾದ ಬಳಿಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಅವರು ನಮ್ಮ ಮನೆಗಳಿಗೆ ಬಂದು ಪಕ್ಷದ ಪರವಾಗಿ ಲಕ್ಷ ರೂ. ಪರಿಹಾರ ನೀಡಿ ದರು. ಅವರೊಂದಿಗೆ ಪುಟ್ಟರಂಗಶೆಟ್ಟಿ ಅವರು ವೈಯಕ್ತಿಕವಾಗಿ ಪರಿಹಾರ ನೀಡಿ ದರು. ನಮಗೆ ಖಾಯಂ ಉದ್ಯೋಗ ಸಿಗಲು ಅವರೂ ಸಹ ಕಾರಣೀಭೂತರಾಗಿದ್ದಾರೆ ಎಂದು ತಿಳಿಸಿದರು. ಈ ವೇಳೆ ಸಂತ್ರಸ್ಥೆ ಕುಟುಂಬಸ್ಥರು ಇತರರು ಇದ್ದರು.

ಮೈಸೂರು ಮಿತ್ರ

ಕಪಿಲಾ ನದಿಯಲ್ಲಿ ವಿಜೃಂಭಣೆಯ ಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ



ಕಪಿಲಾ ನದಿಯಲ್ಲಿ ಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಸರಗೂರು, ಮೇ 10– ತೊಗಟವೀರ ಕ್ಷತ್ರಿಯ ನೇಕಾರ ಸಮಾಜದ ವತಿಯಿಂದ ಚೌಡೇಶ್ವರಿ ಅಮ್ಮನವರ ವರ್ಧಂತಿ ಹಾಗೂ 85ನೇ ಜ್ಯೋತಿ ಪೂಜಾ ಮಹೋತ್ಸವದ ಅಂಗವಾಗಿ ಕಪಿಲಾ ನದಿಯಲ್ಲಿ ಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಕಳೆದ ಐದು ದಿನಗಳವರೆಗೆ ಹಬ್ಬವನ್ನು ಆಚರಣೆ ಮಾಡಲಾಯಿತು. ಇಂದು ಬೆಳಿಗ್ಗೆ ದೇವಾಲಯದಲ್ಲಿ ಅಭಿಷೇಕ ಪೂಜೆ, ಕುಂಕುಮಾರ್ಚನೆ ಹಾಗೂ ಮಧ್ಯಾಹ್ನ ಮಹಾ ಮಂಗಳಾರತಿ ನಂತರ ತೀರ್ಥ ಪ್ರಸಾದ ನೀಡಲಾಯಿತು. ಸಂಜೆ 4 ಗಂಟೆ ಸಮಯದಲ್ಲಿ ಬಣ್ಣದೋಕುಳಿ ಕಾರ್ಯಕ್ರಮ ನೆರವೇರಿತು. ಸಂಜೆ 5.30ರ ಸಮಯದಲ್ಲಿ ಕಪಿಲಾ ನದಿಯಲ್ಲಿ ಶ್ರೀಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ ಭಕ್ತರಿಂದ ಹರ್ಷೋದ್ಗಾರದ ನಡುವೆ ನಡೆಯಿತು.

ಐದು ದಿನಗಳಿಂದ ನಡೆಸಲಾದ ಚೌಡೇಶ್ವರಿ ಅಮ್ಮನವರ ವರ್ಧಂತಿ ಹಾಗೂ 86ನೇ ಜ್ಯೋತಿ ಪೂಜಾ ಮಹೋತ್ಸವವನ್ನು ತೊಗಟವೀರ ಕ್ಷತ್ರಿಯ ನೇಕಾರ ಸಮಾಜ ಸಡಗರ ಸಂಭ್ರಮದಿಂದ ಆಚರಣೆ ಮಾಡಿದರು.

ಜೂ.6, ನಂಜನಗೂಡಲ್ಲಿ ಹನುಮ ಜಯಂತಿ

ಬೃಹತ್ ಶೋಭಾ ಯಾತ್ರೆ, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಚುಂಚನಹಳ್ಳಿ ಶ್ರೀ ಚೆನ್ನಬಸವಸ್ವಾಮೀಜಿ ಮನವಿ



ನವಿಲೂರು ಹಾಗೂ ಚುಂಚನಹಳ್ಳಿ ಮಠಾಧ್ಯಕ್ಷ ಶ್ರೀ ಚೆನ್ನ ಬಸವಸ್ವಾಮೀಜಿ ನಂಜನಗೂಡಿನಲ್ಲಿ ಜೂನ್ 6ರಂದು ಆಯೋಜಿಸಲಾಗಿರುವ ಹನುಮ ಜಯಂತಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿದರು.

ನಂಜನಗೂಡು, ಮೇ 10– ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯ ಭಾಗವಾಗಿರುವ ಹನುಮ ಜಯಂತಿಯನ್ನು ಲೋಕ ಕಲ್ಯಾಣಾರ್ಥ ಜೂ.6 ರಂದು ನಂಜನಗೂಡಿನಲ್ಲಿ ಬೃಹತ್ ಶೋಭಾ ಯಾತ್ರೆಯೊಂದಿಗೆ ಆಯೋಜಿಸಲಾಗಿದ್ದು ಸಮಸ್ತ ಜನರೂ ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಂತೆ ನವಿಲೂರು ಮತ್ತು ಚುಂಚನಹಳ್ಳಿ ಮಠಾಧ್ಯಕ್ಷ ಶ್ರೀ ಚೆನ್ನಬಸವಸ್ವಾಮೀಜಿ ಮನವಿ ಮಾಡಿದ್ದಾರೆ.

ಅವರು ನಗರದ ರಾಷ್ಟ್ರಪತಿ ರಸ್ತೆ 6ನೇ ತಿರುವಿನಲ್ಲಿ ಶ್ರೀ ವೀರಾಂಜನೇಯ ಧರ್ಮ ಜಾಗೃತಿ ಬಳಗದಿಂದ ಆಯೋಜಿಸಿದ್ದ ಹನುಮ ಜಯಂತಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದರು.

ಪ್ರತೀವರ್ಷ ನಂಜನಗೂಡಿನಲ್ಲಿ ವಿಜೃಂಭಣೆಯಿಂದ ಆಯೋಜಿಸಲಾಗುವ ಹನುಮಜಯಂತಿ ಕಾರ್ಯಕ್ರಮದ ಯಶಸ್ಸಿಗೆ ಸಾವಿರಾರು ಜನರು ಶ್ರಮಿಸುತ್ತಾರೆ. ಹೀಗಾಗಿ ನಂಜನಗೂಡಿನ ಹನುಮ ಜಯಂತಿಯ ಶೋಭಾಯಾತ್ರೆಯ ಅದ್ದೂರಿ ಮೆರವಣಿಗೆ ಕಣ್ಮನ ಸೆಳೆಯುತ್ತದೆ. ಹೀಗಾಗಿ ಈ ವರ್ಷ ಸಹಾ ಅತ್ಯಂತ ವಿಜೃಂಭಣೆಯಿಂದ ಆಚರಿಸುವ ಮೂಲಕ ಶ್ರೀ ರಾಮಚಂದ್ರನ ಬಂಟ ಹನುಮನ ಸ್ಮರಣೆಯನ್ನು ಎಲ್ಲರೂ ಮಾಡೋಣ ಎಂದು ಹೇಳಿದರು.

ಸುಂದರ್ ಗಿರಿ ಆಸ್ಪತ್ರೆಯ ತಜ್ಞ ವೈದ್ಯ ಡಾ.ಶ್ರೀಕಾಂತ್ ಹನುಮ ಜಯಂತಿಯ ಫ್ಲೆಕ್ಸ್ ಅನಾವರಣಗೊಳಿಸಿ ಮಾತನಾಡಿ, ನಂಜನಗೂಡಿನಲ್ಲಿ ಆಚರಿಸಲಾಗುವ ಹನುಮ ಜಯಂತಿ ಕಾರ್ಯಕ್ರಮದ ಸಲುವಾಗಿ ಶ್ರೀ ವೀರಾಂಜನೇಯ ಧರ್ಮ ಜಾಗೃತಿ ಬಳಗದವರು ಸುಮಾರು ಒಂದು ತಿಂಗಳಿಗೂ ಮೊದಲಿನಿಂದಲೂ ಪೂರ್ವ ಸಿದ್ಧತೆಯನ್ನು ಕೈಗೊಂಡಿದ್ದು ಎಲ್ಲರ ಸಹಕಾರದೊಂದಿಗೆ ಈ ವರ್ಷ ಸಹಾ ಹನುಮ ಜಯಂತಿ ಯಶಸ್ವಿಯಾಗಲಿದೆ ಎಂದು ತಿಳಿಸಿದರು.

ಇದಕ್ಕೂ ಮೊದಲು ವೇದಿಕೆಯಲ್ಲಿ ಪ್ರತಿಷ್ಠಾಪಿಸಲಾಗಿದ್ದ ಹನುಮಂತನ ಮೂರ್ತಿಗೆ ಪೂಜೆ ಸಲ್ಲಿಸಿ ಹನುಮಾನ್ ಚಾಲೀಸ್ ಪಠಣದೊಂದಿಗೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಮಾಜಿ ಸದಸ್ಯ ಎನ್.ಟಿ.ಗಿರೀಶ್, ಯುವಾ ಬ್ರಿಗೇಡ್ ಸಂಚಾಲಕ ಎಸ್.ಚಂದ್ರಶೇಖರ್, ಗಿರೀಶ್,ಸುನೀಲ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಸರ್ಕಾರಿ ಶಾಲೆಗಳನ್ನು ತಿರುಗಿ ನೋಡುವಂತೆ ಮಾಡಿದವರು ವಿಶ್ವನಾಥ್

ಕೆ.ಆರ್.ನಗರದಲ್ಲಿ ಎಂಎಲ್‌ಸಿ ವಿಶ್ವನಾಥ್ ಹುಟ್ಟುಹಬ್ಬ ಆಚರಣೆ



ಅಡಗೂರು ವಿಶ್ವನಾಥ್ ಅವರಿಗೆ ಅಭಿಮಾನಿಗಳು, ಹಿತೈಷಿಗಳು ಹಾರಹಾಕಿ ಅಭಿನಂದಿಸಿದರು.

ಕೆ.ಆರ್.ನಗರ, ಮೇ 10– ರಾಜ್ಯದಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೊಸ ರೂಪ ಕೊಟ್ಟು, ಎಸ್.ಎಂ.ಕೃಷ್ಣ ಅವರ ಸರ್ಕಾರದಲ್ಲಿ ಶಿಕ್ಷಣ ಮತ್ತು ಸಹಕಾರ ಮಂತ್ರಿಯಾಗಿ ದೇಶವೇ ತಿರುಗಿ ನೋಡುವಂತೆ ಶಾಲೆಗಳಲ್ಲಿ ಬಿಸಿಯೂಟ ಹಾಗೂ ಯಶಸ್ವಿನಿ ಯೋಜನೆ ಆರಂಭಿಸಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಹಾಗೂ ಬಡವರಿಗೆ ದಾರಿದೀಪವಾದವರು ಅಡಗೂರು ಎಚ್. ವಿಶ್ವನಾಥ್ ಎಂದು ಖ್ಯಾತ ಮೂಳೆ ತಜ್ಞ ಡಾ.ಮೆಹಬೂಬ್ ಖಾನ್ ಬಣ್ಣಿಸಿದರು.

ತಮ್ಮ ನಿವಾಸದಲ್ಲಿ ಅಡಗೂರು ವಿಶ್ವನಾಥ್ ಅವರ ಅಭಿಮಾನಿಗಳು, ಹಿತೈಷಿಗಳು ಹಮ್ಮಿಕೊಂಡಿದ್ದ ವಿಧಾನ ಪರಿಷತ್ ಸದಸ್ಯ ಅಡಗೂರು ವಿಶ್ವನಾಥ್ 79ನೇ ವರ್ಷದ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಅಭಿನಂದಿಸಿ ಮಾತನಾಡಿದರು.

ಎ.ಎಚ್.ವಿಶ್ವನಾಥ್, ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರದಲ್ಲಿ ಶೈಕ್ಷಣಿಕವಾಗಿ ಕೋಟ್ಯಂತರ ಅನುದಾನ. ತಂದು ಶಾಲೆಗಳ ಜೀರ್ಣೋದ್ಧಾರ ಮಾಡಿದ್ದಾರೆ. ಅಲ್ಲದೆ ರಾಜ್ಯದಲ್ಲಿ ಸರ್ಕಾರಿ ಶಾಲೆಗಳು ಎಂದರೆ ಮೂಗು ಮುರಿಯುವಂತೆ ಇದ್ದವು. ಅವುಗಳನ್ನು ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಿ ಸರ್ಕಾರಿ ಶಾಲೆಗಳ ಕಡೆ ಜನರು ತಿರುಗಿ ನೋಡುವಂತೆ ಮಾಡಿದರು ಎಂದರು.

> ಇಂದಿನ ರಾಜಕಾರಣ ರಿಪೇರಿ ಆಗಬೇಕು. ಇಲ್ಲವಾದರೆ ಎಲ್ಲರೂ ಸೇರಿ ಜನತಂತ್ರ ವ್ಯವಸ್ಥೆಯನ್ನು ಹಾಳು ಮಾಡುತ್ತಾರೆ. ಇಂದು ರಾಜಕಾರಣಿಯ ವೈಚಾರಿಕತೆಗಿಂತ ಆತ ಗೆಲ್ಲುತ್ತಾನಾ, ಗೆಲ್ಲಲು ಶಕ್ತನಿದ್ದಾನಾ ಎಂಬುದೇ ಮುಖ್ಯವಾಗಿದೆ. ನನ್ನ ಸುದೀರ್ಘ 50 ವರ್ಷಗಳ ರಾಜಕೀಯ ಜೀವನದಲ್ಲಿ ಈಗಿನ ರಾಜಕಾರಣದ ವ್ಯವಸ್ಥೆ ಕಂಡಿಲ್ಲ.
> –ಅಡಗೂರು ಎಚ್.ವಿಶ್ವನಾಥ್

ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ. ಕೃಷ್ಣ ಅವರ ಸಂಪುಟದಲ್ಲಿ ಶಿಕ್ಷಣ ಮಂತ್ರಿಯಾಗಿ ವಿಭಿನ್ನವಾದ ಯೋಜನೆಗಳನ್ನು ಜಾರಿಗೆ ತಂದರೆ, ಸಹಕಾರ ಸಚಿವರಾಗಿ ಮುಚ್ಚಿ ಹೋಗಿದ್ದ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಿ, ಹೊಸರೂಪ ನೀಡಿ ರೈತರಿಗೆ ಸಕಾಲದಲ್ಲಿ ಸಾಲ ದೊರೆಯುವಂತೆ ಮಾಡಿದ್ದು ವಿಶ್ವನಾಥ್ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯ ವಿಶ್ವನಾಥ್ ಅಭಿನಂದನೆ ಸ್ವೀಕರಿಸಿ ಮಾತನಾಡಿ, ಇಂದಿನ ಶಿಕ್ಷಣ ವ್ಯವಸ್ಥೆ ಸಂಪೂರ್ಣ ಹಾಳಾಗಿ ಹೋಗುತ್ತಿದೆ. ಕನ್ನಡ ಭಾಷೆಯನ್ನು ಜನನಾಯಕರು ಕೊಲೆ ಮಾಡುತ್ತಿದ್ದಾರೆ. ನಾನು 50 ವರ್ಷಗಳಿಂದ ರಾಜಕಾರಣ ನೋಡುತ್ತಾ ಇದ್ದೇನೆ. ನಾನು ಶಿಕ್ಷಣ ಸಚಿವನಾಗಿ ಕೆಲಸ ಮಾಡಿದ್ದೇನೆ. ಆದರೆ, ಆಗೆಲ್ಲಾ ಇಂತಹ ಅವ್ಯವಸ್ಥೆ ನೋಡಿರಲೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಡಗೂರು ವಿಶ್ವನಾಥ್ ಅಭಿಮಾನಿಗಳು ಹಾಗೂ ಹಿತೈಷಿಗಳು ಭಾರಿಗಾತ್ರದ ಹಾರ ಹಾಕಿ ಅಭಿನಂದಿಸಿ ಶುಭಾಶಯ ಕೋರಿದರು.

ಜಿ.ಪಂ.ಮಾಜಿ ಸದಸ್ಯ ಅಮಿತ್ ದೇವರಹಟ್ಟಿ, ಎಂ.ಟಿ.ಕುಮಾರ್, ತಾಲೂಕು ಜಾದಳ ವಕ್ತಾರ ಕೆ.ಎಲ್.ರಮೇಶ್, ನಿವೃತ್ತ ಡಿಡಿಪಿಐ ಜವರೇಗೌಡ, ಪುರಸಭೆ ಮಾಜಿ ಅಧ್ಯಕ್ಷ ತಮ್ಮನಾಯಕ್, ಭಾಗ್ಯಲಕ್ಷ್ಮೀ ಸುಬ್ರಹ್ಮಣ್ಯ, ಗೀತಾಮಹೇಶ್, ಡಿ.ಕಾಂತರಾಜ್, ಕೆ.ಜಿ.ಸುಬ್ರಹ್ಮಣ್ಯ, ಮಾಜಿ ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಬಾರ್ ಶಿವಕುಮಾರ್, ನಟರಾಜು, ಅಸ್ಲಂಪಾಷ, ಕಸಾಪ ಅಧ್ಯಕ್ಷ ಡಿಂಡಿಮ್ ಶಂಕರ್, ಉಪನ್ಯಾಸಕ ಪ್ರಶಾಂತ್, ಅರ್ಜುನಹಳ್ಳಿ ಶಿವಣ್ಣ, ಆಂಜನೇಯ ಬ್ಲಾಕ್ ಮಹದೇವ್, ಜೆಡಿಎಸ್ ಮುಖಂಡರಾದ ಹೆಚ್.ಪಿ. ಶಿವಣ್ಣ, ಕೃಷ್ಣಶೆಟ್ಟಿ, ಪೆರಿಸ್ವಾಮಿ, ಸುಬ್ಬಕೃಷ್ಣ, ಜ್ಞಾನಾನಂದ್, ಬಿ.ಎಂ.ನಾಗರಾಜ್, ಅಂಗಡಿ ಶಿವಣ್ಣ, ಮಂಜುನಾಥ್ ಮೊದಲಾದವರು ಇದ್ದರು.

ನಾಳೆ ನಂಜನಗೂಡಿನಲ್ಲಿ ಬಸವೇಶ್ವರ ಜಯಂತಿ



ಸುದ್ದಿಗೋಷ್ಠಿಯಲ್ಲಿ ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಕೆಂಪಣ್ಣ ಮಾತನಾಡಿದರು.

ನಂಜನಗೂಡು, ಮೇ 10– ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ತಾಲೂಕು ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳ ವತಿಯಿಂದ ಮೇ 12 ರಂದು ನಂಜನಗೂಡಿನಲ್ಲಿ ಅದ್ದೂರಿಯಾಗಿ ವಿಶ್ವಗುರು ಬಸವೇಶ್ವರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಗುವುದು ಎಂದು ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಎಸ್.ಎಂ. ಕೆಂಪಣ್ಣ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 12ರ ಬೆಳಿಗ್ಗೆ 8:30ಕ್ಕೆ ನಗರದ ಶ್ರೀಕಂಠೇಶ್ವರ ದೇವಸ್ಥಾನದ ಆವರಣದಿಂದ ಬೆಳ್ಳಿ ರಥದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ ಪುತ್ಥಳಿಯನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಗುವುದು. ಮಧ್ಯಾಹ್ನ 12 ಗಂಟೆಗೆ ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಧಾರ್ಮಿಕ ಸಭೆಯನ್ನು ಆಯೋಜಿಸಲಾಗಿದೆ, ಸಮಾರಂಭದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸುವರು, ಗುರು ಕಂಬಳೇಶ್ವರ ಮಲ್ಲನಮೂಲೆ ಮಠದ ಇಮ್ಮಡಿ ಸಿದ್ದಲಿಂಗ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಕುಂದೂರು ಮಠದ ಶರತ್ ಚಂದ್ರ ಸ್ವಾಮೀಜಿಗಳು ಮುಖ್ಯ ಭಾಷಣ ಮಾಡುವರು.

ಸಮಾರಂಭದಲ್ಲಿ ವಿವಿಧ ಮಠದ ಮಠಾಧೀಶರು ಭಾಗವಹಿಸಲಿದ್ದಾರೆ, ಈ ಸಮಾರಂಭಕ್ಕೆ ತಾಲೂಕಿನ ವಿವಿಧ ಗ್ರಾಮದ ಗ್ರಾಮಸ್ಥರು ಸಾರ್ವಜನಿಕರು ವೀರಶೈವ ಸಂಘದ ಎಲ್ಲ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕಾರ್ಯದರ್ಶಿ ಶಿವಪ್ಪ ದೇವರು ಮಾತನಾಡಿ ಬೆಳಗ್ಗೆ 7 ಗಂಟೆಗೆ ನಗರದ ಹಳೆ ಜೆಎಸ್‌ಎಸ್ ಕಾಲೇಜಿನಲ್ಲಿ ಬೆಳಗಿನ ಉಪಹಾರ ಸೇರ್ಪಡಿಸಲಾಗಿದೆ, ಅಲ್ಲದೆ ಸುಮಾರು 6 ಸಾವಿರ ಜನರಿಗೆ ಮಧ್ಯಾಹ್ನದ ಪ್ರಸಾದ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ವೀರಶೈವ ಮಹಾಸಭಾ ಖಜಾಂಚಿ ಎಂ.ಪಿ.ನಟರಾಜು, ಸುಧಾ ಚಿಕ್ಕಮಾದಪ್ಪ, ಹೆಚ್.ಬಿ.ರೇವಣ್ಣ, ಎನ್. ಮಹೇಶ್, ರಾಜೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

ನೈಸರ್ಗಿಕ ಸಂಪತ್ತು ರಕ್ಷಿಸಿ, ಪ್ರಾಣಿಗಳ ಬಗ್ಗೆ ಅನುಕಂಪ ತೋರಿಸಿ



ಹುಣಸೂರು: ಭಾರತದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯದಲ್ಲಿ ಮೊದಲಿಗೆ ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿಗೊಳಿಸುವುದು ಮತ್ತು ಪ್ರಾಣಿಗಳಿಗೆ ಅನುಕಂಪ ತೋರಿಸುವುದಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಔಟ್ ರೀಚ್ ಸಂಸ್ಥೆಯ ತರಬೇತಿ ಸಂಯೋಜಕ ಜಿ.ಎಸ್. ಜಗದೀಶ ಸಲಹೆ ನೀಡಿದರು.

ತಾಲ್ಲೂಕಿನ ಹನಗೋಡು ಹೋಬಳಿಯ ಶೆಟ್ಟಹಳ್ಳಿಹಾಡಿ ಗಿರಿಜನ ಆಶ್ರಮ ಶಾಲೆಯಲ್ಲಿ ಬೆಂಗಳೂರಿನ ಆಚಾರ್ಯ ಪದವಿ ಅಧ್ಯಯನ ಸಂಸ್ಥೆ ಏರ್ಪಡಿಸಿದ ವಾರ್ಷಿಕ ಸಮಾಜ ಕಾರ್ಯ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ತ್ಯಾಜ್ಯ ನಿರ್ವಹಣೆ ಕುರಿತಾಗಿ ಮಾತನಾಡಿದ ಅವರು ನಾವುಗಳು ಪ್ರತಿನಿತ್ಯ ತ್ಯಾಜ್ಯದ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ, ಅದರಲ್ಲೂ ಪ್ಲಾಸ್ಟಿಕ್ ಎಂಬುದು ಹೆಮ್ಮರವಾಗಿ ಬೆಳೆದು ಜೀವ ಸಂಕುಲಕ್ಕೆ ಮಾರಕವಾಗುತ್ತಿದೆ. ಪ್ಲಾಸ್ಟಿಕ್ ಮುಕ್ತ ಮಾಡಬೇಕಾದರೆ ಯುವಜನತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ ಎಂದರು.

5 ಬಗೆಯ ತ್ಯಾಜ್ಯಗಳಿವೆ ; ಘನ, ದ್ರವ, ಅಪಾಯಕಾರಿ, ಮೆಡಿಕಲ್ ಕಿಟ್ ಹಾಗೂ ಇ–ವೇಸ್ಟ್ ಎಂದು ಐದು ಬಗೆಯ ತ್ಯಾಜ್ಯಗಳಿವೆ. ಇವುಗಳನ್ನು ಸಾಧ್ಯವಾದ ಮಟ್ಟಿಗೆ ಶುದ್ದಿಕರಿಸಿ ಮರು ಬಳಕೆ ಮಾಡಲಾಗುತ್ತಿದೆ. ಏಕ ಬಳಕೆಯ ಪ್ಲಾಸ್ಟಿಕ್ ನಿರ್ಮೂಲನೆ ಮಾಡಲು ರಸ್ತೆ, ಸಿಮೆಂಟ್ ಹಾಗೂ ಪ್ಲಾಸ್ಟಿಕ್‌ನಿಂದ ಹಲವು ಭಾಗೆಯ ಬ್ಯಾಗ್ ಮತ್ತು ಜರ್ಕಿನ್ ಹಾಗೂ ಶಾಲಾ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಡೆಸ್ಕ್ ನಿರ್ಮಾಣ ಮಾಡಲಾಗುತ್ತಿದೆ.

ಪ್ರಕೃತಿದತ್ತವಾಗಿ ಬರುವ ತ್ಯಾಜ್ಯ: ಈ ತ್ಯಾಜ್ಯವೂ ಹಸಿ ಕಸವಾಗಿರುತ್ತದೆ (ಆಹಾರಪದಾರ್ಥಗಳು, ತರಕಾರಿ ಇತ್ಯಾದಿ) ಯಾವ ಜೀವ ರಾಶಿಗೂ ತೊಂದರೆ ಅಗದಂತೆ ಮಣ್ಣಲ್ಲಿ ಮಣ್ಣಾಗಿ ಕರಗಿ ಗೊಬ್ಬರವಾಗುತ್ತದೆ. ಯಾವುದೇ ಕಾರಣಕ್ಕೂ ಯಾರಿಗೂ ತೊಂದರೆ ಅಗುವುದಿಲ್ಲ.

ಮಾನವ ನಿರ್ಮಿತ ತ್ಯಾಜ್ಯ: ಸಕಾಲ ಜೀವ ರಾಶಿಗಳಲ್ಲಿ ಮನುಷ್ಯ ಅತ್ಯಂತ ಬುದ್ದಿವಂತ ಜೀವಿ ಎಂದು ಕರೆಸಿಕೊಂಡರು, ನಾವುಗಳು ಸೃಷ್ಟಿಸುವ ತ್ಯಾಜ್ಯ ಇಂದು ಪ್ರಪಂಚದ್ಯಂತವಾಗಿ ದೊಡ್ಡ ಸಮಸ್ಯೆಯಾಗಿ ಪ್ರಕೃತಿ ಮತ್ತು ಸಕಲಜೀವರಾಶಿಗಳ ಮೇಲೆ ಮರಣಾಂತಿಕವಾಗಿ ತೊಂದರೆ ಉಂಟಾಗುತ್ತಿದೆ.

ನಿರ್ವಹಣೆ; ಮೊದಲಿನಂತೆ ನಾವುಗಳು ಸಾಧ್ಯವಾದಷ್ಟು ಪ್ಲಾಸ್ಟಿಕ್ ಹಾಗೂ ಪ್ಲಾಸ್ಟಿಕ್ ನಿಂದ ಸಿದ್ದಪಡಿಸಿದ ವಸ್ತುಗಳಿಂದ ದೂರ ವಿರಬೇಕು. ಹೆಚ್ಚಾಗಿ ಮರು ಬಳಕೆಯಾಗುವ ವಸ್ತುಗಳನ್ನು ಬಳಸಿಕೊಳ್ಳುವುದರ ಜೊತೆಗೆ ಇವುಗಳ ಕುರಿತು ಸಾರ್ವಜನಿಕರಲ್ಲಿಯೂ ಕೂಡ ತ್ಯಾಜ್ಯ ನಿರ್ವ ಹಣೆಯ ಬಗ್ಗೆ ಅರಿವೂ ಮೂಡಿಸುವ ಕೆಲಸಮಾಡ ಬೇಕಾಗಿದೆ ಎಂದರು.

ಅಕ್ಷಿತಾ, ದ್ವಿತೀಯ, ಬಿ.ಎಸ್. ಡಬ್ಲೂಯು.ವಿದ್ಯಾರ್ಥಿ; ಸಮಾಜಕಾರ್ಯ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವುದರಿಂದ ನಮ್ಮ ಪರಿಸರದ ಮೇಲೆ ತ್ಯಾಜ್ಯದಿಂದ ಆಗುತ್ತಿರುವ ದುಷ್ಪರಿಣಾಗಳನ್ನು ಅರ್ಥಮಾಡಿಕೊಂಡು ಸ್ವಚ್ಛತೆ ಹೆಚ್ಚಿನ ಆದ್ಯತೆ ನೀಡುತ್ತೇನೆ.

ತಾಬಾ, ಮೇಘಲಾಯ, ಪ್ರಥಮ ಎಂ.ಎಸ್. ಡಬ್ಲೂಯು, ವಿದ್ಯಾರ್ಥಿ; ಏಕ ಬಳಕೆಯ ಪ್ಲಾಸ್ಟಿಕ್ ತ್ಯಾಜ್ಯವನ್ನು ಬಳಕೆ ಮಾಡುವುದಿಲ್ಲ ಹಾಗೂ ನಮ್ಮ ರಾಜ್ಯದಲ್ಲಿ ಬಳಕೆ ಮಾಡುವವರಿಗೆ ಅರಿವೂ ಮೂಡಿಸುವ ಕೆಲಸ ಮಾಡುತ್ತೇನೆ.

ಹ್ಯಾಪಿ, ಕೇರಳ ದ್ವಿತೀಯ ಬಿಎಸ್‌ಡಬ್ಲೂಯು ವಿದ್ಯಾರ್ಥಿ; ತ್ಯಾಜ್ಯಗಳ ಬಗೆಗಳನ್ನು ತಿಳಿದುಕೊಂಡು ಅವುಗಳಿಂದಾಗುವ ಅಪಾಯಗಳನ್ನು ತಡೆಗಟ್ಟಲು ಜಾಗೃತಿ ಮೂಡಿಸಿ ತ್ಯಾಜ್ಯ ಮುಕ್ತ ವಲಯ ಮಾಡಲು ಶ್ರಮಿಸುತ್ತೇನೆ.

41 ವಿದ್ಯಾರ್ಥಿಗಳು ಭಾಗವಹಿಸಿದರು.

ಸಂಪಾದನೆಯ ಸ್ವಲ್ಪಭಾಗ ಧರ್ಮ, ಸಮಾಜದ ಕಾರ್ಯಕ್ಕೆ ಬಳಸಿ

ಗಾವಡಗೆರೆ ಗುರುಲಿಂಗ ಜಂಗಮ ಮಠದ ಶ್ರೀ ನಟರಾಜ ಸ್ವಾಮೀಜಿ



ಬೋಳನಹಳ್ಳಿಯ ಮಾತೆ ಮಾಳಿಗೇಶ್ವರಿ ಅಮ್ಮನವರ ದೇವಾಲಯದ ವಾರ್ಷಿಕೋತ್ಸವ ಸಮಾರಂಭದಲ್ಲಿ ಗಾವಡಗೆರೆಯ ಶ್ರೀ ನಟರಾಜ ಸ್ವಾಮೀಜಿ, ದೇವಾಲಯದ ಟ್ರಸ್ಟಿ ಬಿ.ಎಸ್.ನಾಗರಾಜ್, ವಿ.ಎನ್.ದಾಸ್, ಶಿವಮಾದು,ರಾಮಯ್ಯ ಮತ್ತಿತರರಿದ್ದರು.

ಹುಣಸೂರು: ಮನುಷ್ಯನಾದವನು ಸಂಪಾದಿಸಿದ ಹಣದಲ್ಲಿ ಕಿಂಚಿತ್ತಾದರೂ ಧರ್ಮದ ಕಾರ್ಯಕ್ಕೆ ಬಳಸಿದರೆ ಧರ್ಮ ನಮ್ಮನ್ನು ಕಾಪಾಡುತ್ತದೆ. ಅದುವೇ ಸಮಾಜ ಸೇವಾ ಕಾರ್ಯ, ಇಂತಹ ಕಾರ್ಯವನ್ನು ಹೈಕೋರ್ಟ್ ವಕೀಲ ಬಿ.ಎಸ್.ನಾಗರಾಜ್ ನಡೆಸುತ್ತಿದ್ದಾರೆಂದು ಗಾವಡಗೆರೆ ಗುರುಲಿಂಗ ಜಂಗಮಮಠದ ಶ್ರೀ ನಟರಾಜ ಸ್ವಾಮೀಜಿ ಬಣ್ಣಿಸಿದರು.

ತಾಲೂಕಿನ ಬಿಳಿಕೆರೆ ಹೋಬಳಿಯ ಬೋಳನಹಳ್ಳಿಯ ಶ್ರೀ ಮಾತೇ ಮಾಳಿಗೇಶ್ವರಿ ದೇವಾಲಯದ 12ನೇ ವಾರ್ಷಿಕೋತ್ಸವ ಹಾಗೂ ಸಪ್ತಪದಿ ಮಂದಿರದ ಪ್ರಥಮ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಅವರು ಹಳ್ಳಿಯಲ್ಲಿ ಹುಟ್ಟಿ ಜ್ಞಾನ ಸಂಪಾದಿಸಿ ವಕೀಲ ವೃತ್ತಿಯಲ್ಲಿ ಬದುಕು ಕಟ್ಟಿಕೊಂಡಿರುವ ನಾಗರಾಜ್ ಅವರು ತಮ್ಮ ಹುಟ್ಟೂರಿನ ಋಣ ತೀರಿಸುವ ಸಲುವಾಗಿ ಗ್ರಾಮದಲ್ಲಿ ಟ್ರಸ್ಟ್ ರಚಿಸಿಕೊಂಡು ಮಾತೆ ಮಾಳಿಗೇಶ್ವರಿ ದೇವಾಲಯ ನಿರ್ಮಿಸಿ ಗ್ರಾಮಸ್ಥರಿಗೆ ದೇವರ ಸ್ಮರಣೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಲ್ಲದೆ, ಪಕ್ಕದಲ್ಲೇ ಸಪ್ತಪದಿ ಮಂದಿರ ನಿರ್ಮಿಸಿ ಗ್ರಾಮಸ್ಥರಿಗೆ ನೆರವಾಗಿರುವುದು ಶ್ಲಾಘನೀಯ ಎಂದರು.

ಟ್ರಸ್ಟ್‌ನ ಅಧ್ಯಕ್ಷ ವಕೀಲ ಬಿ.ಎಸ್.ನಾಗರಾಜ್ ಮಾತನಾಡಿ ಮಲೈಮಹದೇಶ್ವರ ಖಾದಿ ಗ್ರಾಮೋದ್ಯೋಗ ಕೈಗಾರಿಕಾ ಸಂಘ ಆರಂಭಿಸಿ ಸೊಸೈಟಿ ಆರಂಭಿಸಲಾಗಿದೆ. ರೈತ ಬಂಧು ವಿವಿದ್ದೋದ್ದೇಶ ಸಹಕಾರ ಸಂಘ ರಚಿಸಿ ಕೃಷಿಕರಿಗೆ ನೆರವಾಗಿದ್ದೇನೆ. ಅಲ್ಲದೆ ವಕೀಲ ವೃತ್ತಿಯಲ್ಲಿಗಳಿಸಿದ ಹಣವನ್ನು ಹುಟ್ಟೂರಿನ ಋಣ ತೀರಿಸುವ ಸಲುವಾಗಿ ಆರಾಧ್ಯ ದೇವತೆ ಮಾಳಿಗೇಶ್ವರಿ ಅಮ್ಮನವರ ದೇವಾಲಯ ನಿರ್ಮಿಸಲಾಗಿದೆ, ಎಂದರು. ನಿವೃತ್ತ ಶಿಕ್ಷಕ ರಾಮಯ್ಯ ಮಾತನಾಡಿದರು.

ವಾರ್ಷಿಕೋತ್ಸವ: ಶ್ರೀಮಾತೆ ಮಾಳಿಗೇಶ್ವರಿ ದೇವಾಲಯದ 12ನೇ ವಾರ್ಷಿಕೋತ್ಸವದ ಅಂಗವಾಗಿ ಅರ್ಚಕರವಿಕುಮಾರ್ ನೇತೃತ್ವದಲ್ಲಿ ವಿವಿಧ ಅಭಿಷೇಕ, ಹೋಮ–ಹವನ ನಡೆಸಿ, ದೇವರಿಗೆ ಬಗೆಬಗೆಯ ಹೂವುಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು. ಪ್ರಸಾದ ವಿನಿಯೋಗ ಮಾಡಲಾಯಿತು. ವಾರ್ಷಿಕೋತ್ಸವದ ಅಂಗವಾಗಿ ಅಲಂಕೃತ ಪಲ್ಲಕ್ಕಿಯಲ್ಲಿರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮೆರವಣಿಗೆ ಮನೆ ಬಳಿಗೆ ಬಂದ ವೇಳೆ ಗ್ರಾಮಸ್ಥರು ಪೂಜೆ ಸಲ್ಲಿಸಿ ಭಕ್ತಿ–ಭಾವ ಮೆರೆದರು.

ಮೈಸೂರು ಪಾಲಿಕೆ ಸದಸ್ಯ ಶಿವಮಾದು, ಹುಣಸೂರು ಹನುಮಂತೋತ್ಸವ ಸಮಿತಿ ಅಧ್ಯಕ್ಷ ವಿ.ಎನ್.ದಾಸ್, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ವಕೀಲ ಯೋಗಾನಂದ ಕುಮಾರ್ ಸೇರಿದಂತೆ ಮುಖಂಡರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಕೋಟೆ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಮಹಿಳಾ ವಿಭಾಗಕ್ಕೆ ಸಮಗ್ರ ಪ್ರಶಸ್ತಿ



ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಮಹಿಳಾ ವಿಭಾಗಕ್ಕೆ ಸಮಗ್ರ ಪ್ರಶಸ್ತಿ.

ಹೆಚ್.ಡಿ.ಕೋಟೆ, ಮೇ 10– ನಂಜನಗೂಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯ ಕಬಿನಿ ವಲಯ ಮಟ್ಟದ ಮಹಿಳೆಯರ ಕ್ರೀಡಾಕೂಟ ವಿಭಾಗದಲ್ಲಿ ಹೆಚ್.ಡಿ. ಕೋಟೆ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ವಿಭಾಗ ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ ಎಂದು ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್ ಗೌಡ ತಿಳಿಸಿದ್ದಾರೆ.

ಮಹಿಳಾ ವಿಭಾಗದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ವೈಯಕ್ತಿಕ ಪ್ರಶಸ್ತಿಗಳನ್ನು ನೀಡಿ ಜೊತೆಗೆ ಮಹಿಳಾ ವಿಭಾಗದಲ್ಲಿ ಸಮಗ್ರ ಪ್ರಶಸ್ತಿಯನ್ನು ನೀಡುವುದರ ಜೊತೆಗೆ ವಿಜೇತ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು. ಮಹಿಳಾ ವಿಭಾಗದಲ್ಲಿ ಪ್ರಶಸ್ತಿಯನ್ನು ಪಡೆದು ಕೊಂಡಿದ್ದಾರೆ. ಕುಡ್ಡಿಯಲ್ಲಿ ಪ್ರಥಮ ಸ್ಥಾನ, ವಾಲಿಬಾಲ್‌ನಲ್ಲಿ ಪ್ರಥಮ ಸ್ಥಾನ, ಬಾಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ, ತ್ರೋಬಾಲ್‌ನಲ್ಲಿ ತೃತೀಯ ಸ್ಥಾನ, ಚೆಸ್‌ನಲ್ಲಿ ದ್ವಿತೀಯ, ಸ್ಥಾನ ಪಡೆದು ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡರು. ಹಾಗೂ ಪುರುಷರ ವಿಭಾಗದಲ್ಲಿ ಕಬ್ಬಡಿಯಲ್ಲಿ ತೃತೀಯ ಸ್ಥಾನ, ವಾಲಿಬಾಲ್‌ನಲ್ಲಿ ತೃತೀಯ ಸ್ಥಾನವನ್ನು ಪಡೆದು ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ.

ಮಹಿಳಾ ಹಾಗೂ ಪುರುಷರ ವಿಭಾಗದಲ್ಲಿ ವಿವಿಧ ಕ್ರೀಡಾಪಟುಗಳಲ್ಲಿ ಸಾಧನೆ ಮಾಡಿದ ಎಲ್ಲಾ ಕ್ರೀಡಾಪಟುಗಳನ್ನು ಮೈಸೂರು ಶಾಖಾ ಮಠದ ಮುಖ್ಯಸ್ಥ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯವರು, ಆಡಳಿತ ಅಧಿಕಾರಿಗಳಾದ ಪ್ರೊ. ಕೆ.ಪಿ ಬಸವೇಗೌಡರು, ಅಭಿನಂದಿಸಿದ್ದಾರೆ.

ಇದೆ ಸಂದರ್ಭದಲ್ಲಿ ಪ್ರಾಂಶುಪಾಲರಾದ ಡಾ.ಜೆ ಎನ್ ವೆಂಕಟೇಶ್, ದೈಹಿಕ ಶಿಕ್ಷಣ ನಿರ್ದೇಶಕ ಬಿ.ಕಲ್ಲೇಶಗೌಡ, ಕ್ರೀಡಾ ಕಾರ್ಯದರ್ಶಿ ಬಿ.ಸಿ. ಮಹೇಂದ್ರ, ಕ್ರೀಡಾಪಟುಗಳು ಇದ್ದರು.

ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬೇಸಿಗೆ ಶಿಬಿರ ಸಹಕಾರಿ



ಪಟ್ಟಣದ ಗುರುಭವನದಲ್ಲಿ ನಡೆದ ಶಾರದಾ ಡ್ಯಾನ್ಸ್ ಗ್ರೂಪ್‌ನ 11ನೇ ವರ್ಷದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಕುಪ್ಪ ಸರ್ಕಾರಿ ಶಾಲೆಯ ಶಿಕ್ಷಕಿ ಜ್ಯೋತಿ ಪರಮೇಶ್ ಪಟೇಲ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಮೇ 10– ಬೇಸಿಗೆ ಶಿಬಿರ ಕೇವಲ ಮನರಂಜನೆ ಮಾತ್ರವಲ್ಲ. ಮೌಲ್ಯಯುತ ಚಟುವಟಿಕೆಗಳನ್ನು ಹೊಂದಿದ್ದು, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದು ಕುಪ್ಪ ಸರ್ಕಾರಿ ಶಾಲೆಯ ಶಿಕ್ಷಕಿ ಜ್ಯೋತಿ ಪರಮೇಶ್ ಪಟೇಲ್ ತಿಳಿಸಿದ್ದಾರೆ.

ಪಟ್ಟಣದ ಗುರುಭವನದಲ್ಲಿ ನಡೆದ ಶಾರದಾ ಡ್ಯಾನ್ಸ್ ಗ್ರೂಪ್‌ನ 11ನೇ ವರ್ಷದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಬೇಸಿಗೆ ಶಿಬಿರದಿಂದ ಮಕ್ಕಳಲ್ಲಿ ಆತ್ಮ ವಿಶ್ವಾಸ ಹೆಚ್ಚುತ್ತದೆ, ಸ್ವತಂತ್ರತೆ ಕಲಿಸುತ್ತದೆ ಎಂದರು.

ಇದರೊಂದಿಗೆ ಸಾಮಾಜಿಕ ಕೌಶಲ್ಯಗಳ ಬೆಳವಣಿಗೆಯಾಗುವುದಲ್ಲದೆ, ದೈಹಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಸಾಹಸಮಯ ಕೌಶಲ್ಯಗಳು, ಶಿಸ್ತು ಮತ್ತು ಜವಾಬ್ದಾರಿ ಕಲಿಸುತ್ತದೆ ಎಂದ ಅವರು ಬೇಸಿಗೆ ಶಿಬಿರಗಳು ಸೃಜನಶೀಲನೆ, ಮನರಂಜನೆ ಒದಗಿಸಲಿವೆ, ಮೋಜು, ಮಸ್ತಿ ಮಾತ್ರವಲ್ಲದೆ ಸಾಮಾಜಿಕವಾಗಿ ಬೆರೆಯುವ ಪ್ರವೃತ್ತಿ ಬೆಳೆಸುತ್ತದೆ ಎಂದರು.

ವರ್ಷಪೂರ್ತಿ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಒತ್ತಡದಲ್ಲಿರುವ ಮಕ್ಕಳಿಗೆ ಇಂತಹ ಶಿಬಿರಗಳಿಂದ ಅನುಕೂಲವಾಗಲಿದೆ. ಅಂಕಗಳ ಹಿಂದೆ ಬಿದ್ದು ಅಂಕೆ ಇಲ್ಲದಂತಾಗಿರುವುದರಿಂದ ಮಕ್ಕಳು ಆತಂಕದಲ್ಲಿ ಸಿಲುಕುತ್ತಾರೆ. ಇಂತಹ ಶಿಬಿರಗಳು ಶಿಕ್ಷಣದೊಂದಿಗೆ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗಲಿದೆ. Impossible ನಿಂದ Im ಅನ್ನು ಬೇರ್ಪಡಿಸಿದರೆ ಸಾಕು. ಎಲ್ಲವೂ ಸಾಧ್ಯವಾಗುತ್ತದೆ. ನನಗಿಂತ ದೇಶ ಮೊದಲು ಎಂಬುದು ಮುಖ್ಯವಾಗಿರುತ್ತದೆ ಎಂದರು.

ವಾಟಾಳ್ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮಕ್ಕಳು ಪೋಷಕರ ಸಹಕಾರ ಸಿಕ್ಕಿದರೆ ಎಂತಹ ಸಾಧನೆ ಮಾಡಲೂ ಸಿದ್ದರಿರುತ್ತಾರೆ ಅದಕ್ಕೆ ಈ ಸಮಾರೋಪ ಕಾರ್ಯಕ್ರಮದಲ್ಲಿ ವಿವಿಧ ವೇಷ ಭೂಷಣಗಳನ್ನು ಧರಿಸಿ ಪ್ರತಿಭಾ ಅನಾವರಣಕ್ಕೆ ಕಾತರತೆ ಯಿಂದ ಕಾಯುತ್ತಿರುವುದೇ ಸಾಕ್ಷಿ ಎಂದರು.

ಮಕ್ಕಳಿಗೆ ವೇದಿಕೆಯನ್ನು ಕಲ್ಪಿಸಿ ಕೊಟ್ಟು ಅವರ ಏಳಿಗೆ ಬಯಸುವುದೇ ಪ್ರತಿಯೊಬ್ಬ ತಂದೆ ತಾಯಿಯ ಗುರಿ. ಆ ಗುರಿ ಸಾಧನೆಗೆ ಶಾರದಾ ಅಕಾಡೆಮಿಯಂಥ ಸಂಸ್ಥೆಗಳು ಶ್ರಮಿಸುತ್ತಿರುವುದೇ ಸಾಕ್ಷಿ ಎಂದರು

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಶಿವಶಂಕರ ಮೂರ್ತಿ, ಕಾಸಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ಶಾರದಾ ನೃತ್ಯ ಶಾಲೆ ಅಧ್ಯಕ್ಷ ಪುಷ್ಪಲತಾ, ಕಾರ್ಯದರ್ಶಿ ಬಸವರಾಜು, ಬಿಜೆಪಿಯ ಹಿರಿಯ ಮುಖಂಡ ತೋಟದಪ್ಪ ಬಸವರಾಜು, ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಶ್ರೀನಿವಾಸ್, ನಿವೃತ್ತ ಪ್ರಾಂಶುಪಾಲ ಸೋಮಣ್ಣ, ಚಿಟಿಗಯ್ಯನ ಕೊಪ್ಪಲು ಶನೇಶ್ವರ ದೇವಸ್ಥಾನದ ಗುಡ್ಡಪ್ಪ ಬಸವರಾಜು, ಕೆಇಬಿ ಸಿದ್ಧಲಿಂಗ ಸ್ವಾಮಿ, ಡೈರಿ ಕಾರ್ಯದರ್ಶಿ ಮಲ್ಲಿಕಾರ್ಜುನ ಇತರರು ಹಾಜರಿದ್ದರು.

ಉಸ್ತುವಾರಿ ಸಚಿವ ಮಹದೇವಪ್ಪ ವಿರುದ್ಧ ಸುಳ್ಳು ಆರೋಪ



ಪತ್ರಿಕಾ ಗೋಷ್ಠಿಯಲ್ಲಿ ಶಿವಪ್ರಸಾದ್ ಮಾತನಾಡಿದರು.


ನಂಜನಗೂಡು: ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅವರ ಮೇಲೆ ಪಿತ್ರಾರ್ಜಿತ ಆಸ್ತಿಯನ್ನು ಕಬಳಿಕೆ ಮಾಡಲು ಹುನ್ನಾರ ನಡೆಸುತ್ತಿದ್ದಾರೆ ಎಂಬ ಬಗ್ಗೆ ಆರೋಪಿಸಿರುವ ಪುಟ್ಟಸ್ವಾಮಿ ಅವರ ಆರೋಪ ನಿರಾಧಾರವಾಗಿದೆ. ಸೂಕ್ತ ದಾಖಲಾತಿ ಇಲ್ಲದಿದ್ದರೂ ಸಹ ಅವರ ಹೆಸರನ್ನು ದುರ್ಬಳಕೆ ಮಾಡಿಕೊಂಡು ಅವರ ಹೆಸರಿಗೆ ಮಸಿ ಬಳಿಯುವ ಕೆಲಸವಾಗುತ್ತಿದೆ ಎಂದು ಶಿವಪ್ರಸಾದ್ ಹೇಳಿದರು.

ವಕೀಲರಾದ ಸುನೀಲ್ ಕುಮಾರ್ ಮಾತನಾಡಿ ಈ ಜಮೀನಿನ ವಿವಾದದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ ಮತ್ತು ಇಂಧನ್ ಬಾಬು ರವರ ಹೆಸರನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ, ಒಂದು ವೇಳೆ ಅವರ ಹೆಸರಿಗೆ ಮಸಿ ಬಳಿಯುವ ಕೆಲಸ ಮಾಡಿದರೆ ಅಂತವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು ಎಂದು ಎಚ್ಚರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸುರೇಶ್, ವಕೀಲರಾದ ಸೋಹನ್ ಕುಮಾರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 11 ಮೇ 2026

ದಿನ ಕಳೆದಂತೆ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಕುಸಿತ

90 ಅಡಿಗೆ ಇಳಿಕೆ ಕಂಡ ಕೆಆರ್‌ಎಸ್, ಆದರೂ ಸದ್ಯಕ್ಕೆ ಕುಡಿಯುವ ನೀರಿಗೆ ಅಭಾವವಿಲ್ಲ



- ▶ಕೊಡಗು ಜಿಲ್ಲೆಯಲ್ಲಿ 5 ತಿಂಗಳಲ್ಲಿ ಕೇವಲ 13 ಮಿಲಿ ಮೀಟರ್ ಮಳೆ
- ▶ಕಾವೇರಿ ನದಿ ನೀರಿನ ಹರಿಯುವಿಕೆ ಬಹುತೇಕ ಇಳಿಕೆ
- ▶ಕೆಆರ್‌ಎಸ್‌ನಲ್ಲಿ ಸದ್ಯ 8 ಟಿಎಂಸಿ ನೀರು ಸಂಗ್ರಹ
- ▶ಮೆಟ್ಟೂರು ಜಲಾಶಯದ ನೀರಿನ ಮಟ್ಟ ಕೂಡ ಕುಸಿತ

ಕಬಿನಿಯಲ್ಲೂ ನೀರಿನ ಮಟ್ಟ ಭಾರೀ ಪ್ರಮಾಣದಲ್ಲಿ ಇಳಿಕೆ

ಕೇರಳದ ವೈನಾಡು ಪ್ರದೇಶದಲ್ಲಿ ಕೂಡ ಮಳೆ ಇಲ್ಲದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆಯ ಕಬಿನಿ ಜಲಾಶಯದ ನೀರಿನ ಮಟ್ಟ ಕೂಡ ದಿನ ಕಳೆದಂತೆ ಕುಸಿಯುತ್ತಿದೆ. ಕಬಿನಿ ಜಲಾಶಯದ ಗರಿಷ್ಠ ನೀರಿನ ಮಟ್ಟ 2.284 ಅಡಿಗಳಾಗಿದ್ದು, ಇಂದಿನ ಮಟ್ಟ 2,255 ಅಡಿಗಳಾಗಿದೆ. ಜಲಾಶಯಕ್ಕೆ ಕೇವಲ 150 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ ಕುಡಿಯುವ ನೀರಿಗಾಗಿ 900 ಕ್ಯುಸೆಕ್ ನೀರು ಬಿಡಲಾಗುತ್ತಿದೆ.

ಕಬಿನಿ ಜಲಾಶಯದ ಗರಿಷ್ಠ ನೀರಿನ ಸಂಗ್ರಹಣೆಯ ಮಟ್ಟ 19.52 ಟಿಎಂಸಿಗಳಾಗಿದ್ದು, ಇಂದು 5.85 ಟಿಎಂಸಿ ನೀರು ಸಂಗ್ರಹವಿದೆ. ಕಳೆದ ವರ್ಷ ಇದೇ ದಿನದಂದು 2,263 ಅಡಿ ಇತ್ತು. ಆದರೆ ಇಂದು 2,255 ಅಡಿಗೆ ಕುಸಿದಿದೆ. ಅಂದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 8 ಅಡಿ ನೀರು ಕಡಿಮೆಯಾಗಿದೆ.

ಈ ಬಾರಿ ಎಲ್ ನಿನೋ ಪರಿಣಾಮ, ಕಾಲ ಕಾಲಕ್ಕೆ ಮಳೆ ಆಗುವುದಿಲ್ಲ

"ಈ ಬಾರಿ ಭಾರತದಲ್ಲಿ ಎಲ್ ನಿನೋ ಪರಿಣಾಮ ಬೀರುವ ಸಾಧ್ಯತೆ ಇದೆ. ಜೂನ್‌ನಿಂದ ಆರಂಭವಾಗುವ ಎಲ್ ನಿನೋ 2027ರ ಜನವರಿಯಲ್ಲಿ ಅಂತ್ಯಗೊಳ್ಳಲಿದೆ. ಎಲ್ ನಿನೋ ಪರಿಸ್ಥಿತಿ ಸಾಮಾನ್ಯವಾಗಿ ಮಳೆಯ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಎಲ್ ನಿನೋ ಪರಿಣಾಮದಿಂದ ನಿರೀಕ್ಷೆಯಂತೆ ಕಾಲ ಕಾಲಕ್ಕೆ ಮಳೆಯಾಗುವುದಿಲ್ಲ. ಒಂದು ವಾರ ಮಳೆಯಾಗಿ ಮತ್ತೆ ಮರೆಯಾಗುವ ಸಾಧ್ಯತೆ ಇರುತ್ತದೆ. ಇದರಿಂದ ಮಳೆಯ ಸಮಾನ ಹಂಚಿಕೆ ಕಂಡು ಬರುವುದಿಲ್ಲ. ನಿರೀಕ್ಷಿತ ಮಟ್ಟದಲ್ಲಿ ಮಳೆಯಾಗದ ಹಿನ್ನೆಲೆಯಲ್ಲಿ ಬೆಳೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಅಲ್ಲದೆ ಉಷ್ಣಾಂಶ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಾಗಿ, ಮಣ್ಣಿನ ತೇವಾಂಶ ಕಡಿಮೆಯಾಗಬಹುದು ಎಂದು ಭಾರತೀಯ ಹವಾಮಾನ ಇಲಾಖೆ ಸದ್ಯ ವರದಿ ನೀಡಿದೆ.

- ಡಾ. ಜಿ.ವಿ.ಸುಮಂತ್ ಕುಮಾರ್,
ತಾಂತ್ರಿಕ ಅಧಿಕಾರಿ, ಹವಾಮಾನ ಇಲಾಖೆ, ನಾಗನಹಳ್ಳಿ

ಮೇ ಅಂತ್ಯದೊಳಗೆ ಕರ್ನಾಟಕಕ್ಕೆ ಮುಂಗಾರು ಪ್ರವೇಶ

ಮುಂಗಾರು ಮಳೆ ಅಥವಾ ನೈಋತ್ಯ ಮಾನ್ಸೂನ್ ಈ ಬಾರಿ ಅವಧಿಗೂ ಮುನ್ನವೇ ಆರಂಭವಾಗುವ ನಿರೀಕ್ಷೆ ಇದೆ. ಮೇ 14ರಿಂದ 16ರ ನಡುವೆ ಭಾರತಕ್ಕೆ ಪ್ರವೇಶಿಸಬಹುದು. ತರುವಾಯ ಮೇ ಅಂತ್ಯದೊಳಗೆ ಕೇರಳದ ಕರಾವಳಿಗೆ ಪ್ರವೇಶ ಪಡೆಯಲಿದೆ. ಕೇರಳದ ಮೂಲಕ ಮುಂಗಾರು ಕರ್ನಾಟಕ ಪ್ರವೇಶಿಸಲಿದ್ದು, ಜೂನ್ ಮೊದಲ ವಾರದಲ್ಲಿ ಕರ್ನಾಟಕದಲ್ಲಿ ಮಾನ್ಸೂನ್ ಚುರುಕುಗೊಳ್ಳಲಿದೆ ವರುಣ ಕೃಪೆ ತೋರಿದರೆ ಎಲ್ಲಾ ಜಲಾಶಯಗಳು ತುಂಬಿ ತುಳುಕುತ್ತವೆ. ಇದರಿಂದ ಕೃಷಿ ಚಟುವಟಿಕೆಗಳು ಕೂಡ ಚುರುಕು ಗೊಂಡು ಸಮೃದ್ಧ ಬೆಳೆಯಾಗಿ ರೈತರು ಸೇರಿದಂತೆ ಜನ ಸಾಮಾನ್ಯರು ಸಂತಸಗೊಳ್ಳಲಿದ್ದಾರೆ.

ಮೈಸೂರು, ಮೇ.10(ಬಿಎಲ್‌ಯು)– ಜೀವನದಿ ಕಾವೇರಿಯ ಉಗಮ ಸ್ಥಾನ ಕೊಡಗು ಜಿಲ್ಲೆಯಲ್ಲಿ ಮಳೆಯಾಗದ ಹಿನ್ನೆಲೆಯಲ್ಲಿ ಕೆಆರ್‌ಎಸ್ (ಕೃಷ್ಣರಾಜ ಸಾಗರ) ಜಲಾಶಯದಲ್ಲಿ ನೀರಿನ ಮಟ್ಟ ದಿನ ಕಳೆದಂತೆ ಕಡಿಮೆಯಾಗುತ್ತಿದ್ದು, ಇಂದು ಅಣೆಕಟ್ಟೆಯ ನೀರಿನ ಪ್ರಮಾಣ 90 ಅಡಿಗೆ ಕುಸಿದಿದೆ.

ಮೈಸೂರು, ಮಂಡ್ಯ, ಬೆಂಗಳೂರು ಸೇರಿದಂತೆ ಸಾವಿರಾರು ಹಳ್ಳಿಗಳಿಗೆ ಕುಡಿಯುವ ನೀರಿನ ಮೂಲವೆಂದರೆ ಅದು ಕಾವೇರಿ ನದಿ. ಆದರೆ ಕೊಡಗು ಜಿಲ್ಲೆಯಲ್ಲಿ ಮಳೆಯಾಗದ ಹಿನ್ನೆಲೆಯಲ್ಲಿ ಕಾವೇರಿ ನದಿ ನೀರಿನ ಹರಿಯುವಿಕೆ ಬಹುತೇಕ ಕಡಿಮೆಯಾಗಿದೆ.

ಕೆಆರ್ ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 90.98 ಅಡಿಗಳಾಗಿದೆ. ಜಲಾಶಯದ ಗರಿಷ್ಠ ನೀರಿನ ಸಂಗ್ರಹಣೆಯ ಮಟ್ಟ 49 ಟಿಎಂಸಿ, ಆದರೆ ಇಂದು ದಾಖಲಾಗಿರುವ ನೀರಿನ ಸಂಗ್ರಹದ ಮಟ್ಟ ಕೇವಲ 8 ಟಿಎಂಸಿಗಳಾಗಿದೆ.

ಜಲಾಶಯಕ್ಕೆ ಕೇವಲ 122 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ ಮೈಸೂರು, ಮಂಡ್ಯ ಹಾಗೂ ಬೆಂಗಳೂರಿನ ಕುಡಿಯುವ ನೀರಿಗೆ 1,472 ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಇದು ಕಾಲುವೆ ಹಾಗೂ ನದಿ ಮೂಲದ ಪೈಪ್‌ಗಳ ಮೂಲಕ ಮೈಸೂರು, ಮಂಡ್ಯ ಹಾಗೂ ಬೆಂಗಳೂರಿನ ಕುಡಿಯುವ ನೀರಿಗೆ ಸರಬರಾಜಾಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಭಾರೀ ಮಳೆಯಾದರೆ ತಲಕಾವೇರಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಕಾವೇರಿ ನದಿಗೆ ನೀರು ಹರಿಯಲು ಆರಂಭವಾಗುತ್ತದೆ. ಆದರೆ ಕೊಡಗು ಜಿಲ್ಲೆಯಲ್ಲಿ ಇನ್ನು ಮಳೆ ಆರಂಭವಾಗಿಲ್ಲ. ಜನವರಿಯಿಂದ ಮೇ ವರೆಗೆ ಅಂದರೆ ಐದು ತಿಂಗಳ ಅವಧಿಯಲ್ಲಿ ಕೊಡಗು ಜಿಲ್ಲೆಯಲ್ಲಿ ಕೇವಲ 13.56 ಮಿಲಿ ಮೀಟರ್ ಮಳೆಯಾಗಿದೆ.

ಪೂರ್ವ ಮುಂಗಾರು ಉತ್ತಮವಾಗಿದ್ದರೆ ಇಷ್ಟೊತ್ತಿಗೆ ಕಾವೇರಿ ನದಿ ನೀರಿನ ಪ್ರಮಾಣದಲ್ಲಿ ಸ್ವಲ್ಪ ಹೆಚ್ಚಳವಾಗಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗುತ್ತಿತ್ತು. ಆದರೆ ಪೂರ್ವ ಮುಂಗಾರಿನಲ್ಲಿ ಹೇಳಿ ಕೊಳ್ಳುವಂತಹ ಮಳೆಯಾಗಿಲ್ಲ. ಇದರಿಂದ ಕೆಆರ್‌ಎಸ್ ಜಲಾಶಯಕ್ಕೆ ಕಾವೇರಿ ನದಿ ನೀರಿನ ಹರಿವಿಕೆ ಬಹುತೇಕ ಕಡಿಮೆಯಾಗಿದೆ.

ಕೆಆರ್ ಎಸ್ ಜಲಾಶಯದ ನೀರಿನ ಮಟ್ಟ ಏಪ್ರಿಲ್ 16 ರಂದು 100 ಅಡಿಗೆ ಕುಸಿದಿತ್ತು ಆದರೆ ಇಂದು 90 ಅಡಿಗೆ ಕುಸಿತ ಕಂಡಿದೆ. ಬೇಸಿಗೆಯಲ್ಲಿ ನೀರಿನ ಬಳಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕೆಆರ್ ಎಸ್‌ನಲ್ಲಿ ನೀರಿನ ಪ್ರಮಾಣ ದಿನ ಕಳೆದಂತೆ ಕುಸಿಯುತ್ತಿದೆ. ಕೇವಲ 24 ದಿನದ ಅವಧಿಯಲ್ಲಿ 10 ಅಡಿಗೆ ಕುಸಿತ ಕಂಡಿದೆ.

ಕಳೆದ ವರ್ಷ ಇದೇ ದಿನದಂದು ಕೆಆರ್ ಎಸ್ ಜಲಾಶಯದ ನೀರಿನ ಮಟ್ಟ 93.42 ಅಡಿಗಳಿತ್ತು. ಆದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ 3 ಅಡಿ ಕಡಿಮೆಯಾಗಿದೆ.

ಜಲಾಶಯದಲ್ಲಿ 90 ಅಡಿ ನಂತರ ನೀರಿನ ವಿಸ್ತಾರ ಹೆಚ್ಚಿನ ಪ್ರಮಾಣದಲ್ಲಿ ಕಡಿಮೆಯಾಗುತ್ತಾ ಹೋಗುತ್ತದೆ. ಅಷ್ಟರಲ್ಲಿ ಮುಂಗಾರು ಮಳೆ ಆರಂಭವಾದರೆ ಕೊಡಗು ಜಿಲ್ಲೆಯಲ್ಲಿ ವರುಣ ಆರ್ಭಟಿಸಿದಾಗ ಕೆಆರ್ ಎಸ್‌ಗೆ ಕಾವೇರಿ ನದಿ ನೀರಿನ ಹರಿಯುವಿಕೆ ಹೆಚ್ಚಾಗಿ ಜಲಾಶಯ ತುಂಬುತ್ತಾ ಹೋಗುತ್ತದೆ.

ಒಂದು ವೇಳೆ ನಿರೀಕ್ಷಿತ ಪ್ರಮಾಣದಲ್ಲಿ ಮುಂಗಾರು ಮಳೆಯಾಗದಿದ್ದರೆ ಕೆಆರ್ ಎಸ್ ಜಲಾಶಯದ ನೀರಿನ ಮಟ್ಟ ಕುಸಿಯುತ್ತಾ ಹೋಗುತ್ತದೆ. ಕೆಆರ್ ಎಸ್ ಜಲಾಶಯದ ನೀರಿನ ಮಟ್ಟ 60 ಅಡಿ ಇರುವವರೆಗೆ ಕುಡಿಯುವ ನೀರಿಗೆ ತೊಂದರೆ ಆಗುವುದಿಲ್ಲ. ಒಂದು ವೇಳೆ 60 ಅಡಿ ಡೆಡ್ ಸ್ಟೋರೇಜ್ ಆದರೆ ಆಗ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುತ್ತದೆ ಎಂಬ ಆತಂಕವಿದೆ.

ಕಾವೇರಿ ನದಿ ನೀರು ಹೊಗೆನಕಲ್ ಫಾಲ್ಸ್ ಮೂಲಕ ತಮಿಳುನಾಡಿನ ಮೆಟ್ಟೂರು ಜಲಾಶಯ ತಲುಪಲಿದೆ. ಕಾವೇರಿ ನದಿಯ ಮೂಲದಲ್ಲೆ ನೀರಿಲ್ಲದ ಹಿನ್ನೆಲೆಯಲ್ಲಿ ಮೆಟ್ಟೂರು ಜಲಾಶಯದ ನೀರಿನ ಮಟ್ಟ ಕೂಡ ಕಡಿಮೆಯಾಗಿದೆ. ಮೆಟ್ಟೂರು ಜಲಾಶಯದ ನೀರಿನ ಗರಿಷ್ಠ ಮಟ್ಟ 120 ಅಡಿಗಳಾಗಿದ್ದು, ಇಂದಿನ ಮಟ್ಟ 79.51 ಅಡಿಗಳಿಗೆ ಕುಸಿದಿದೆ.

ಖಾಸಗಿ ಕುಡಿಯುವ ನೀರಿನ ಶುದ್ಧೀಕರಣ ಘಟಕ ಸ್ಥಾಪನೆಗೆ ಅನುಮತಿ ಕಡ್ಡಾಯ

● ಎಂಜಿಪಿ ಸಭೆಯಲ್ಲಿ ವಾಣಿವಿಲಾಸ್ ವಾಟರ್ ವರ್ಕ್ಸ್ ಎಇಇ ರವಿಕುಮಾರ್ ಮಾಹಿತಿ ● ಖಾಸಗಿ ಶುದ್ಧೀಕರಣದ ನೀರಿಗೆ ಕೆಮಿಕಲ್ ಮಿಕ್ಸ್ ● ಹೊರವಲಯದಲ್ಲಿರುವ ಖಾಸಗಿ ಬಡಾವಣೆಗಳ ನೀರು ಮತ್ತು ಯುಜಿಡಿ ಸಮಸ್ಯೆಗೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಬೇಕು



ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಭಾನುವಾರ ನೀರಿನ ಸಮಸ್ಯೆ ಕುರಿತು ಚರ್ಚಿಸಲಾಯಿತು.

ಮೈಸೂರು, ಮೇ 10(ಎಸ್‌ಪಿಎನ್)– ಖಾಸಗಿ ಕುಡಿಯುವ ನೀರು ಶುದ್ಧೀಕರಣ ಘಟಕ ಸ್ಥಾಪನೆಗೆ ಸ್ಥಳೀಯ ಆಡಳಿತದಿಂದ ಅನುಮತಿ ಕಡ್ಡಾಯಗೊಳಿಸಲಾಗಿದೆ ಎಂದು ವಾಣಿವಿಲಾಸ್ ವಾಟರ್ ವರ್ಕ್ಸ್ ಎಇಇ(ಪೂರ್ವ) ಎಸ್.ಎಲ್.ರವಿಕುಮಾರ್ ತಿಳಿಸಿದರು.

ಮೈಸೂರಿನ ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಭಾನುವಾರ ನಡೆದ ಸಂವಾದದಲ್ಲಿ ಖಾಸಗಿ ಶುದ್ಧೀಕರಣ ನೀರಿನ ಘಟಕಗಳ ಸ್ಥಾಪನೆಗೆ ಕುರಿತು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

ಮೈಸೂರು ನಗರ ಮತ್ತು ಗ್ರಾಮಾಂತರ ಭಾಗದಲ್ಲಿ ಖಾಸಗಿ ವ್ಯಕ್ತಿಗಳು ಸ್ಥಾಪಿಸಿರುವ ಖಾಸಗಿ ನೀರು ಶುದ್ಧೀಕರಣ ಘಟಕಗಳಲ್ಲಿ ನೀರು ಕೆಡದಿರಲು ಕೆಮಿಕಲ್ ಮಿಕ್ಸ್ ಮಾಡುತ್ತಿರುವುದು ಕಂಡು ಬರುತ್ತಿದೆ. ಇದರಿಂದ ಈ ನೀರನ್ನು ಎರಡು ದಿನ ಶೇಖರಣೆ ಮಾಡಿಟ್ಟುಕೊಂಡರೆ ನೀರು ವಾಸನೆ ಬರುತ್ತಿದೆ. ಇದನ್ನು ತಡೆಗಟ್ಟಲು ಜಿಲ್ಲಾಡಳಿತ ಮುಂದಾಗಬೇಕು ಎಂದು ಸದಸ್ಯ ರಾಜೇಶ್ ಒತ್ತಾಯಿಸಿದರು. ಇದಕ್ಕೆ ಉತ್ತರಿಸಿದ ಎಇಇ ರವಿಕುಮಾರ್, ಖಾಸಗಿ ವ್ಯಕ್ತಿಗಳ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲು ಸ್ಥಳೀಯ ಆಡಳಿತದ ಅನುಮತಿ ಪಡೆಯಬೇಕು. ನಾನು ಕರ್ತವ್ಯ ನಿರ್ವಹಿಸುವ ವ್ಯಾಪ್ತಿಯಲ್ಲಿ ಶುದ್ದೀಕರಣ ಘಟಕದ ನೀರಿನಲ್ಲಿ ವಾಸನೆ ಬರುವ ಸಂಬಂಧ ಸಾರ್ವಜನಿಕರಿಂದ ದೂರು ಬಂದಿದ್ದ, ಎರಡು ಘಟಕಗಳಿಗೆ ನೋಟಿಸ್ ನೀಡಲಾಗಿದೆ ಎಂದರು.

ಸದಸ್ಯರೊಬ್ಬರು ಬೋಗಾದಿಯ ಟ್ರೆಂಡ್ಜ್ ವಿಲ್ಲಾಗಳಿಗೆ ನೀರು ಪೂರೈಸುವಂತೆ ಮನವಿ ಮಾಡಿದರು. ಇದಕ್ಕೆ ಎಇಇ ರವಿಕುಮಾರ್ ಪ್ರತಿಕ್ರಿಯಿಸಿ, ಹೊರವಲಯದ ನೀರಿನ ಯಾವುದೇ ಸಮಸ್ಯೆಗಳಿದ್ದರೂ ಜಿಲ್ಲಾಡಳಿತದ ಗಮನಕ್ಕೆ ತರಬೇಕು. ಇದು ನಮ್ಮ ವ್ಯಾಪ್ತಿಯಲ್ಲಿ ಇಲ್ಲದ ಕಾರಣ ನಾವು ಈ ಸಮಸ್ಯೆಗೆ ಸ್ಪಂದಿಸಲು ಸಾಧ್ಯ ವಿಲ್ಲ ಎಂದರು. ಶ್ರೀರಾಂಪುರ ಹಾಗೂ ಬೋಗಾದಿ ಪಟ್ಟಣ ಪಂಚಾಯತ್, ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ಗಳಲ್ಲಿ ನೀರಿನ ಸಮಸ್ಯೆ ಉಲ್ಬಣಿಸಿವೆ. ಈ ಕೂಡಲೇ ಕಬಿನಿ ಇಲ್ಲವೇ ಕಾವೇರಿ ನೀರು ಕೊಡಿ ಎಂದು ಸದಸ್ಯರು ಒತ್ತಾಯಿಸಿದರು.

"ಮೈಸೂರು ಹೊರವಲಯದಲ್ಲಿರುವ ಅಪಾರ್ಟ್‌ಮೆಂಟ್ ಮತ್ತು ವಿವಿಧ ಬಡಾವಣೆ ನಿವಾಸಿಗಳಿಗೆ ತೀವ್ರ ನೀರಿನ ಸಮಸ್ಯೆ ಎದುರಾಗಿದೆ. ಯುಜಿಡಿ ಸಮಸ್ಯೆ ಗಂಭೀರವಾಗಿದ್ದು, ಈ ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತ ಮುಂದಾಗಬೇಕು.

– ಎಂಜಿಪಿ

ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಯುಜಿಡಿ ವ್ಯವಸ್ಥೆಯಲ್ಲಿ ಸಾಕಷ್ಟು ಲೋಪಗಳಿವೆ. ಮಳೆಗಾಲದಲ್ಲಿ ಯುಜಿಡಿ ಕಟ್ಟಿಕೊಂಡು ಮಲಿನ ನೀರು ರಸ್ತೆಗೆ ಹರಿಯುತ್ತಿದೆ. ಇದು ವ್ಯವಸ್ಥೆಯ ಲೋಪ. ಆದರೆ, ಹೊರವಲಯದ ಬಡಾವಣೆ ಗಳಲ್ಲಿ ಯುಜಿಡಿ ಮತ್ತು ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ ಈ ಸಮಸ್ಯೆಗೆ ಕಡಿವಾಣ ಹಾಕಬೇಕು ಎಂದು ಸದಸ್ಯರೊಬ್ಬರು ಒತ್ತಾಯಿಸಿದರು.

ಅಲ್ಲದೆ, ಮೈಸೂರಿನ ಯುಜಿಡಿ ವ್ಯವಸ್ಥೆ ಬಹಳ ಹಳೆಯದಾಗಿದೆ. ಡಿ–ಸಿಲ್ಟ್ ವ್ಯವಸ್ಥೆಯಡಿ ಯುಜಿಡಿ ಪೈಪ್ ಲೈನ್ ನಿರ್ಮಾಣವಾದರೆ ಭವಿಷ್ಯದಲ್ಲಿ ಯಾವುದೇ ಸಮಸ್ಯೆಯಿಲ್ಲ. ಆದರೆ, ರಾಡಿಂಗ್ ವ್ಯವಸ್ಥೆಯಲ್ಲಿ ಯುಜಿಡಿ ಪೈಪ್ ಲೈನ್ ಅಳವಡಿಸಿದರೆ, ಸಮಸ್ಯೆ ಪದೇಪದೆ ಕಾಣಿಸಿಕೊಳ್ಳುತ್ತದೆ. ಅಲ್ಲದೆ, ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ತೀವ್ರವಾಗಿದೆ. ಈ ಸಮಸ್ಯೆ ಬಗೆಹರಿಸಲು ಕ್ರಮಕೈಗೊಳ್ಳಬೇಕು ಎಂದು ಎಂಜಿಪಿ ಸದಸ್ಯ ವಿಶ್ವನಾಥ್ ಮಾಹಿತಿ ನೀಡಿದರು.

ಸಭೆಯಲ್ಲಿ ಕಾರ್ಯಾಧ್ಯಕ್ಷ ಎಸ್.ಎ. ದಿನೇಶ್, ಕಾರ್ಯದರ್ಶಿ ಪ್ರಭಾ ನಂದೀಶ್, ಸದಸ್ಯ ಟಿ.ಆರ್.ರವೀಂದ್ರನ್, ರಾಜೇಶ್, ಕೆ.ವಿ.ಭಾನು ಪ್ರಶಾಂತ್, ಮನ್ಸೂರ್ ಆರೀಫ್, ಎಸ್.ಶೈಲಜೇಶ, ಲಕ್ಷ್ಮೀಶ್, ವಸಂತ್ ಕುಮಾರ್ ಮೈಸೂರ್ ಮಠ್, ಡಿ.ವಿ.ದಯಾನಂದ ಸಾಗರ್, ಎಂ.ವೆಂಕಟೇಶ್ ರಾವ್, ಪಿ.ರಾಕೇಶ್, ರವಿಶಂಕರ್ ಬಳೆ, ಸಂತೋಷ್,ಆರ್. ಗುರುರಾಜ್, ವಿ.ಎಸ್. ಸೇತುರಾಮ್, ಎಸ್.ಶೋಭಾ, ಎಸ್.ಸತೀಶ, ರಾಜಣ್ಣ, ಚಂದ್ರಶೇಖರ್, ಮಧು, ಕುಮಾರ ಸ್ವಾಮಿ, ಆತ್ಮಾನಂದ, ಬಿ.ವಿ.ಬೇವಿನಕಟ್ಟೆ, ಎಂ.ಶಿವಕುಮಾರ್ ಉಪಸ್ಥಿತರಿದ್ದರು.

ಉತ್ತಮ ಮಾರ್ಗದರ್ಶನದಿಂದ ಸುಂದರ ಬದುಕು

ಬಸವಮಾರ್ಗ ಫೌಂಡೇಷನ್‌ನ ಸಂಸ್ಥಾಪಕ ಎಸ್.ಬಸವರಾಜು



ಬಸವಮಾರ್ಗ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ವಸತಿ ಸಹಿತ ಉಚಿತ ಬೇಸಿಗೆ ಶಿಬಿರ ಸಮಾರೋಪ ಸಮಾರಂಭದಲ್ಲಿ ಉದ್ಯಮಿ ಬಾಬು ಗೌಡ ಮಕ್ಕಳಿಗೆ ಸ್ಮಾರ್ಟ್ ಕಿಟ್ ವಿತರಣೆ ಮಾಡಿದರು.ಸಂಸ್ಥಾಪಕ ಎಸ್.ಬಸವರಾಜು ಉಪಸ್ಥಿತರಿದ್ದರು

ಮೈಸೂರು, ಮೇ 10– ಬಾಲಾವಸ್ಥೆಯಲ್ಲಿ ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡಿದರೆ ಸುಂದರ ಬದುಕು ಕಟ್ಟಿಕೊಳ್ಳುತ್ತಾರೆ ಎಂದು ಬಸವಮಾರ್ಗ ಫೌಂಡೇಷನ್‌ನ ಸಂಸ್ಥಾಪಕ ಎಸ್.ಬಸವರಾಜು ತಿಳಿಸಿದರು.

ನಗರದ ಹೆಬ್ಬಾಳಿನ ಬಸವಮಾರ್ಗ ಫೌಂಡೇಷನ್‌ನ ಆಶ್ರಮ ಶಾಖೆಯಲ್ಲಿ ಶನಿವಾರ ನಡೆದ ಒಂದು ತಿಂಗಳ ವಸತಿ ಸಹಿತ ಉಚಿತ ಬೇಸಿಗೆ ಶಿಬಿರ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಾಮಾನ್ಯವಾಗಿ ಬಡ ಮತ್ತು ಗ್ರಾಮಾಂತರ ಭಾಗದ ಮಕ್ಕಳಿಗೆ ಬೇಸಿಗೆ ಶಿಬಿರಗಳು ಮರೀಚಿಕೆಯಾಗೆ ಉಳಿಯುತ್ತಿದೆ. ಅವರಿಗೂ ಬೇಸಿಗೆ ಶಿಬಿರದಂತಹ ಸೌಲಭ್ಯಗಳು ಸಿಗಬೇಕು. ಮುಂದಿನ ದಿನಗಳಲ್ಲಿ ಗ್ರಾಮಾಂತರ ಮಕ್ಕಳಿಗೂ ಬೇಸಿಗೆ ಶಿಬಿರಗಳನ್ನು ಆಯೋಜಿಸಲಾಗುವುದು ಎಂದರು

ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಮಕ್ಕಳು, ಮೊಬೈಲ್ ಅಡಿಕ್ಷನ್ ದುಷ್ಪರಿಣಾಮ ಹಾಗೂ ತಂದೆ–ತಾಯಿ, ಶಿಕ್ಷಣ ಹಾಗೂ ಸಮಯದ ಮೌಲ್ಯಗಳನ್ನು ಹಂತ–ಹಂತವಾಗಿ ಕಲಿತರು ಎಂದು ವಿವರಿಸಿದರು.

ಪವಾಡ ಬಯಲು ತಜ್ಞ ಡಾ.ಹುಲಿಕಲ್ ನಟರಾಜು ಅವರು ಮಕ್ಕಳಲ್ಲಿ ವೈಜ್ಞಾನಿಕ ಪ್ರಜ್ಞೆ ಮೂಡಿಸಿದರು. ಹಾವುಗಳ ಬಗ್ಗೆ ಉರುಗ ಸಂರಕ್ಷಕ ಸ್ನೇಕ್ ಶ್ಯಾಮ್ ಅವರು ಜಾಗೃತಿ ಮೂಡಿಸಿದರು. ಮಕ್ಕಳು ಮೃಗಾಲಯಕ್ಕೆ ಭೇಟಿ ನಾನಾ ಪ್ರಾಣಿಗಳನ್ನು ವೀಕ್ಷಿಸಿದರು. ಕುಂತಿ ಬೆಟ್ಟಕ್ಕೆ ಚಾರಣ ನಡೆಸಿ, ಸಾಹಸ ಪ್ರವೃತ್ತಿಯನ್ನು ಬೆಳಸಿಕೊಂಡರು.

ಶಿಬಿರದ ಮಕ್ಕಳು ಮೊಬೈಲ್ ಅಡಿಕ್ಷನ್ ಕುರಿತು ನಾಟಕ ಪ್ರದರ್ಶನ ಮಾಡಿದರು. ಜಾನಪದ ಸಂಗೀತ ಕಾರ್ಯಕ್ರಮ, ಯೋಗಾಸನ, ಚಿತ್ರಕಲಾ ಪ್ರದರ್ಶನ ತೋರುವ ಮೂಲಕ ಎಲ್ಲರ ಮೆಚ್ಚುಗೆ ಗಳಿಸಿದರು.

ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಡಾ.ಸುನೀಲ್, ಎಸ್.ಎಸ್. ಭಟ್, ನಿರಂಜನ್ ಅರಸ್, ಪುನೀತಾ, ಕೌಸಲ್ಯ, ಜ್ಯೋತಿ, ವಿಶ್ವನಾಥ್, ಕಿರಣ್, ಗಗನಾ, ರಕ್ಷಿತ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಕಾರ್ಯಕ್ರಮದಲ್ಲಿ ಬಾಬು ಗೌಡ, ಸುಪ್ರೀತ್, ಕಾರ್ತಿಕ್ ಸೇರಿದಂತೆ ಇನ್ನಿತರರಿದ್ದರು.

ಊರ್ವಿಲ್ ಆರ್ಭಟ; ಟೂರ್ನಿಯಿಂದ ಹೊರಬಿದ್ದ ಲಕ್ನೋ

ಚೆನ್ನೈ, ಮೇ 10(ವಿವಿಹೆಚ್)– ಊರ್ವಿಲ್ ಪಟೇಲ್ ಭರ್ಜರಿ ಬ್ಯಾಟಿಂಗ್ ಪ್ರದರ್ಶನದ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿದ ಚೆನ್ನೈಸೂಪರ್ ಕಿಂಗ್ಸ್ ಪಾಯಿಂಟ್ಸ್ ಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿತು.

ಇತ್ತ ಚೆನ್ನೈ ವಿರುದ್ಧ ಸೋತ ಲಕ್ನೋ ಸೂಪರ್ ಜೈಂಟ್ಸ್ ಟೂರ್ನಿಯಿಂದ ಹೊರಬಿದ್ದ ಮೊದಲ ತಂಡವಾಗಿ ಬೇಡದ ದಾಖಲೆ ಬರೆಯಿತು.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 203 ರನ್ ಗಳಿಸಿತು. ಇದನ್ನು ಸರಾಗವಾಗಿ ಬೆನ್ನತ್ತಿದ ಚೆನ್ನೈ 19.2 ಓವರ್‌ಗಳಲ್ಲಿ ಕೇವಲ 5 ವಿಕೆಟ್ ಕಳೆದುಕೊಂಡು 208 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟ್ ಮಾಡಿದ ಎಲ್‌ಎಸ್‌ಜಿ ಜೋಶ್ ಇಂಗ್ಲಿಸ್ ಅವರ 85 (33ಎ, 10ಬೌ 6ಸಿ) ರನ್‌ಗಳ ನೆರವಿನಿಂದ ಉತ್ತಮ ರನ್ ಕಲೆಹಾಕಿತು. ಮಿಚೆಲ್ ಮಾರ್ಷ್ 10, ರಿಷಬ್ ಪಂತ್ 15, ಅಕ್ಷತ್ ರಘುವಂಶಿ 18, ಹಿಮ್ಮತ್ ಸಿಂಗ್ 17 ರನ್ ಗಳಿಸಿದರು. ಇತ್ತ ಕೊನೆಯಲ್ಲಿ ಅಬ್ಬರಿಸಿದ ಶೆಹಬಾಜ್ ಅಹ್ಮದ್ 43 ರನ್ ಪೇರಿಸಿ, ತಂಡದ ಮೊತ್ತ 200ರ ಗಡಿ ದಾಟಿಸಿದರು.

ಚೆನ್ನೈ ಪರ ಜೆಮಿ ಓವರ್‌ಟನ್ 3, ಅಂಶುಲ್ ಕಾಂಬೋಜ್ 2 ಹಾಗೂ ನೂರ್ ಅಹ್ಮದ್ 1 ವಿಕೆಟ್ ಪಡೆದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಚೆನ್ನೈ, ಉರ್ವಿಲ್ ಪಟೇಲ್ ಅವರ 13 ಎಸೆತಗಳ ಅರ್ಧಶತಕದ ಬಲದಿಂದ ಇತಿಹಾಸ ಬರೆದರು. ಕಳೆದ 8 ವರ್ಷಗಳಿಂದ 180+ ರನ್ ಚೇಸ್ ಮಾಡದ ಸಿಎಸ್‌ಕೆ ಇಂದು ಆ ಅನಗತ್ಯ ದಾಖಲೆಯನ್ನು ಮುರಿಯಿತು.

ಊರ್ವಿಲ್ ಅಬ್ಬರದ ಇನ್ನಿಂಗ್ಸ್‌ನಲ್ಲಿ 2 ಬೌಂಡರಿಗಳು ಮತ್ತು 7 ಸಿಕ್ಸರ್‌ಗಳು ಸೇರಿದ್ದವು. ಅವರು ಕೇವಲ 23 ಎಸೆತಗಳಲ್ಲಿ 65ರನ್ ಗಳಿಸಿದರು. ಇತ್ತ ನಾಯಕ ಋತುರಾಜ್ ಗಾಯಕ್ವಾಡ್ 42(28), ಸಂಜು ಸ್ಯಾಮ್ಸನ್ 28(14) ರನ್ ಪೇರಿಸಿದರು.

ಉಳಿದಂತೆ ಕಾರ್ತಿಕ್ ಶರ್ಮಾ 20(20), ಡೆವಾಲ್ಡ್ ಬ್ರೇವಿಸ್ 10(12), ಶಿವಂ ದುಬೆ ಅಜೇಯ 15(7), ಪ್ರಶಾಂತ್ ವೀರ್ ಅಜೇಯ 18(12) ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು.

ರಾಜ್ಯಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ



ಯೋಗ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಟ್ರೋಫಿ ವಿತರಿಸಿದರು


ಮೈಸೂರು, ಮೇ 10– ಮೈಸೂರಿನ ಶ್ರೀಕಾಂತ್ ವಿದ್ಯಾ ಸಂಸ್ಥೆಯಲ್ಲಿ ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ಭಾನುವಾರ ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಶಾಸಕ ಟಿ.ಎಸ್.ಶ್ರೀವತ್ಸ, ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ಸಮಾಜ ಸೇವಕರಾದ ಡಾ.ರಘುರಾಂ ವಾಜಪೇಯಿ, ಎಂ.ಎನ್.ನವೀನ್ ಕುಮಾರ್ ಸೇರಿದಂತೆ ಇತರೆ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶುಭಹಾರೈಸಿದರು.

ಕಾರ್ಯಕ್ರಮದ ಅಂಗವಾಗಿ ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಹಾಗೂ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಸಹ ಆಯೋಜಿಸಲಾಗಿತ್ತು. ವಿಶೇಷವಾಗಿ ಸ್ಪರ್ಧೆಯಲ್ಲಿ ಚಾಂಪಿಯನ್ ಆಫ್ ಚಾಂಪಿಯನ್ಸ್ ಟ್ರೋಫಿ ಗೆದ್ದವರಿಗೆ ಸುವರ್ಣ ಬೆಳಕು ಫೌಂಡೇಷನ್ ಲೋಗೋ ವಿನ್ಯಾಸ ಹೊಂದಿರುವ ವಿಶೇಷ ಟ್ರೋಫಿಯನ್ನು ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಸುವರ್ಣ ಬೆಳಕು ಫೌಂಡೇಷನ್‌ನ ಮಹೇಶ್, ಯೋಗ ಶಿಕ್ಷಕರಾದ ಪಶುಪತಿ, ರವಿ, ಮಂಜುನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಗೀತಾ ನಿಧನ



ಮೈಸೂರು, ಮೇ 10– ನಗರದ ವಿವಿ ಮೊಹಲ್ಲಾದ ಮಂಜುನಾಥಪುರದ ನಿವಾಸಿ, ಭಾರತೀಯ ಜನತಾ ಪಾರ್ಟಿ ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರಾದ ಮಂಜುನಾಥಪುರ ಮಹೇಶ್ ಅವರ ಧರ್ಮಪತ್ನಿ ಗೀತಾ(43) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಸೋಮವಾರ) ಬೆಳಗ್ಗೆ 10 ಗಂಟೆಗೆ ಜೋಡಿ ತೆಂಗಿನಮರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗಮಲೆಗೆ ಪಾದಯಾತ್ರೆ ತೆರಳುತ್ತಿದ್ದ ಬಾಲಕ ಚಿರತೆ ದಾಳಿಗೆ ಬಲಿ

● ನಸುಕಿನಲ್ಲಿ ನಡೆದ ಘಟನೆ ● ಅರಣ್ಯ ಪ್ರದೇಶದ ಬಂಡೆಯ ನಡುವೆ ಬಾಲಕನ ಮೃತದೇಹ ಪತ್ತೆ



ಹರ್ಷಿತ್

ಮಲೆಮಹದೇಶ್ವರಬೆಟ್ಟ ಮೇ 10(ಎಂಟಿವೈ)– ನಾಗಮಲೆಯ ಮಲೆಮಹದೇಶ್ವರ ಸ್ವಾಮಿ ದೇಗುಲಕ್ಕೆ ಪೋಷಕರೊಂದಿಗೆ ಪಾದಯಾತ್ರೆಯಲ್ಲಿ ತೆರಳುತ್ತಿದ್ದ ಬಾಲಕನೋರ್ವನ ಮೇಲೆ ಚಿರತೆಯೊಂದು ಪೋಷಕರ ಮುಂದೆಯೇ ಹೊತ್ತೊಯ್ದು ದಾಳಿ ಮಾಡಿ ಹತ್ಯೆಗೈದಿರುವ ಘಟನೆ ಭಾನುವಾರ ಮುಂಜಾನೆ ಸಂಭವಿಸಿದ್ದು, ಭಕ್ತರಲ್ಲಿ ಆತಂಕ ಮೂಡಿಸಿದೆ.

ಬೆಂಗಳೂರಿನ ಕಾಮಾಕ್ಷಿ ಪಾಳ್ಯದ ನಿವಾಸಿ ಸುರೇಶ್ ಮತ್ತು ಪವಿತ್ರ ದಂಪತಿ ಪುತ್ರ ಹರ್ಷಿತ್(10) ಚಿರತೆ ದಾಳಿಗೆ ಬಲಿಯಾದ ಬಾಲಕನಾಗಿದ್ದು, ಮೃತ ಬಾಲಕನನ್ನು ಕಳೆದುಕೊಂಡು ತಾಯಿ ಹಾಗೂ ಸಂಬಂಧಿಕರು ದಿಗ್ಭ್ರಾಂತರಾಗಿದ್ದಾರೆ.

ಬೆಂಗಳೂರಿನಿಂದ ಕಳೆದ ಶನಿವಾರ ರಾತ್ರಿ ಬಾಲಕ ಹರ್ಷಿತ್, ಆತನ ತಾಯಿ ಪವಿತ್ರ ಹಾಗೂ ಆರೇಳು ಮಂದಿ ಸಂಬಂಧಿಕರು ಮಲೆಮಹದೇಶ್ವರಬೆಟ್ಟಕ್ಕೆ ಸಾರಿಗೆ ಬಸ್‌ನಲ್ಲಿ ಪ್ರಯಾಣ ಬೆಳೆಸಿದ್ದು, ಭಾನುವಾರ ಮುಂಜಾನೆ 1.30ಕ್ಕೆ ಮಹದೇಶ್ವರಬೆಟ್ಟ ತಲುಪಿದ್ದಾರೆ. ಮುಂಜಾನೆಯೇ ಎಲ್ಲರೂ ಸ್ನಾನ ಮಾಡಿ ಮಹದೇಶ್ವರಬೆಟ್ಟದ ದೇವಾಲಯಕ್ಕೆ ತೆರಳಿ ದರ್ಶನ ಮಾಡಿದ ಬಳಿಕ ನಾಗಮಲೆಗೆ ತೆರಳಲು ಸಜ್ಜಾಗಿದ್ದಾರೆ. ನಾಗಮಲೆಗೆ ಬೆಳಗ್ಗೆ 6 ಗಂಟೆಗೆ ಮಹದೇಶ್ವರ ಬೆಟ್ಟದಲ್ಲಿ ಜೀಪ್‌ನಲ್ಲಿ ಒಬ್ಬೊಬ್ಬರಿಗೆ 400 ರೂ. ಪಾವತಿಸಿ, ಏಳೆಂಟು ಮಂದಿ ಪ್ರಯಾಣ ಬೆಳೆಸಿದ್ದಾರೆ. ಬೆಟ್ಟದಿಂದ 6 ಕಿ.ಮೀ. ದೂರದಲ್ಲಿ ಇರುವ ಇಂಡಿಗನತ್ತ ಗ್ರಾಮದವರೆಗೂ ಜೀಪ್‌ನಲ್ಲಿ ತೆರಳಿ, ಅಲ್ಲಿ ಅರಣ್ಯ ಇಲಾಖೆಗೆ ತಲಾ 200 ರೂ. ಪ್ರವೇಶ ಶುಲ್ಕ ಪಾವತಿಸಿ, ನಾಗಮಲೆಯತ್ತ ಪಾದಯಾತ್ರೆ ಆರಂಭಿಸಿದ್ದಾರೆ.

ಬೆಳಗ್ಗೆ 6.30ರಲ್ಲಿ ಇಂಡಿಗನತ್ತ ಗ್ರಾಮದಿಂದ 700 ಮೀ. ದೂರ ಸಾಗುತ್ತಿದ್ದಂತೆ ಅರಣ್ಯ ಪ್ರದೇಶದ ಕಾಲುದಾರಿಯಲ್ಲಿ ಐದಾರು ಮಂದಿ ಮಹಿಳೆಯರೇ ಇದ್ದ ಗುಂಪಿಗೆ ಚಿರತೆಯೊಂದು ಕಾಣಿಸಿಕೊಂಡಿದೆ. ಚಿರತೆ ಕಂಡು ಗಾಬರಿಯಾದ ಮಹಿಳಾ ಭಕ್ತರು ರಕ್ಷಣೆಗೆ ಕೂಗಿಕೊಳ್ಳುವಷ್ಟರಲ್ಲಿ ಬಾಲಕ ಹರ್ಷಿತ್ ಮೇಲೆ ಮುಗಿ ಬಿದ್ದ ಚಿರತೆ ಏಕಾಏಕಿ ಅರಣ್ಯ ಪ್ರದೇಶಕ್ಕೆ ಎಳೆದುಕೊಂಡು ಹೋಗಿದೆ ಇದರಿಂದ ಬಾಲಕನ ಪೋಷಕರು ಮತ್ತು ಸಂಬಂಧಿಕರು ಕಿರುಚಾಡುತ್ತಿದ್ದಂತೆ ಮುಂದೆ ಹೋಗುತ್ತಿದ್ದ ಮೂವರು ಪುರುಷರು ಹಾಗೂ ಇಂಡಿಗನತ್ತ ಗ್ರಾಮದಿಂದ ಬರುತ್ತಿದ್ದ ಮತ್ತೆ ನಾಲ್ಕೈದು ಮಂದಿ ರಕ್ಷಣೆಗೆ ಧಾವಿಸಿ ಬಂದಿದ್ದಾರೆ. ಅಷ್ಟರಲ್ಲಾಗಲೇ ಚಿರತೆ ಬಾಲಕನನ್ನು 200 ಮೀ. ಕಾಡೊಳಗೆ ಎಳೆದುಕೊಂಡು ಹೋಗಿ ಕಲ್ಲು ಬಂಡೆಗಳ ಸಂದಿಯಲ್ಲಿ ಬಿಟ್ಟು ಪರಾರಿಯಾಗಿದೆ.

ವಿಷಯ ತಿಳಿದು ಪಾದಯಾತ್ರಿಗೆ ಪ್ರವೇಶ ಟಿಕೆಟ್ ನೀಡುತ್ತಿದ್ದ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಬಂದು, ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಚಿರತೆ ದಾಳಿ ಮಾಡಿದ ಸ್ಥಳ ಕಾವೇರಿ ವನ್ಯಧಾಮದ ವ್ಯಾಪ್ತಿಗೆ ಸೇರುವುದರಿಂದ ಅಲ್ಲಿನ ಸಿಬ್ಬಂದಿಗಳು ಆಗಮಿಸಿದ್ದಾರೆ. ಕಲ್ಲು ಬಂಡೆಗಳ ನಡುವೆ ಸಿಲುಕಿದ್ದ ಬಾಲಕನ ಮೃತದೇಹವನ್ನು ಸ್ಥಳೀಯರ ಸಹಕಾರದಿಂದ ತಂದು ಮಲೆಮಹದೇಶ್ವರಬೆಟ್ಟದ ಆಸ್ಪತ್ರೆಗೆ ತರಲಾಯಿತು.

ಮುಗಿಲು ಮುಟ್ಟಿದ ಆಕ್ರಂದನ: ಮಲೆ ಮಹದೇಶ್ವರರ ದರ್ಶನ ಮಾಡಲು ಮಕ್ಕಳೊಂದಿಗೆ ಬಂದ ಪೋಷಕರು ಮಗನನ್ನು ಕಳೆದುಕೊಂಡು ರೋದಿಸತೊಡಗಿದರು. ಬೆಂಗಳೂರಲ್ಲಿ ಆಟೋ ಚಾಲಕರಾಗಿರುವ ಸುರೇಶ್ ಅವರು ಮಗನ ಸಾವಿನ ಸುದ್ದಿ ತಿಳಿದು ಬೆಂಗಳೂರಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಬಂದು ಆಸ್ಪತ್ರೆಯಲ್ಲಿದ್ದ ಮಗನ ಮೃತದೇಹ ಕಂಡು ಎದೆ ಬಡಿದುಕೊಂಡು ಅಳುತ್ತಿದ್ದ ದೃಶ್ಯ ಮಲಕಲಕುವಂತಿತ್ತು. ಅಲ್ಲದೆ, ಕಣ್ಣೆದುರೆ ಚಿರತೆಗೆ ಬಲಿಯಾದ ಮಗನನ್ನು ಕಂಡು ತಾಯಿ ಪವಿತ್ರ ತಲೆ ಚಚ್ಚಿಕೊಂಡು ಆಕ್ರೋಶ ಹೊರಹಾಕುತ್ತಿದ್ದರು.

5 ಲಕ್ಷ ಪರಿಹಾರ: ಮಲೆಮಹದೇಶ್ವರ ಬೆಟ್ಟದ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕಾವೇರಿ ವನ್ಯಧಾಮದ ಡಿಸಿಎಫ್ ಸುರೇಂದ್ರ, ಮಲೆಮಹದೇಶ್ವರ ವನ್ಯಧಾಮದ ಡಿಸಿಎಫ್ ಭಾಸ್ಕರ್ ಹಾಗೂ ಇನ್ನಿತರರು ಮೃತ ಬಾಲಕನ ಪೋಷಕರಿಗೆ ಸಾಂತ್ವನ ಹೇಳಿದರು. ಚಿರತೆ ದಾಳಿ ಮಾಡಿದ ಸ್ಥಳ ಕಾವೇರಿ ವನ್ಯಧಾಮದ ಗೋಪಿನಾಥಂ ವಲಯ ವ್ಯಾಪ್ತಿಗೆ ಸೇರಿರುವ ಹಿನ್ನೆಲೆಯಲ್ಲಿ ಕಾವೇರಿ ವನ್ಯಧಾಮದ ವತಿಯಿಂದ ಪ್ರಾಥಮಿಕವಾಗಿ 5 ಲಕ್ಷ ರೂ. ಪರಿಹಾರ ವಿತರಿಸಲಾಯಿತು. ಉಳಿದ 15 ಲಕ್ಷ ರೂ. ಪರಿಹಾರವನ್ನು ಪೋಷಕರ ಖಾತೆಗೆ ಆರ್‌ಟಿಜಿಎಸ್ ಮೂಲಕ ವರ್ಗಾಯಿಸುವುದಾಗಿ ಭರವಸೆ ನೀಡಲಾಯಿತು. ಈ ಸಂಬಂಧ ಮಲೆಮಹದೇಶ್ವರಬೆಟ್ಟದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರಣ್ಯ ಸಿಬ್ಬಂದಿ ಗೈರು

ಮಲೆಮಹದೇಶ್ವರಬೆಟ್ಟದಿಂದ ಇಂಡಿಗನತ್ತ ಗ್ರಾಮದವರೆಗೂ ಭಕ್ತರು ಜೀಪ್‌ನಲ್ಲಿ ಬಂದು ಆನಂತರ ಮಲೆಮಹದೇಶ್ವರ ವನ್ಯಧಾಮದ ಸಿಬ್ಬಂದಿಗಳಿರುವ ಕೌಂಟರ್‌ನಲ್ಲಿ ತಲಾ 200 ರೂ. ಪ್ರವೇಶ ಶುಲ್ಕ ನೀಡಿ ನಾಗಮಲೆಯತ್ತ ಪಾದಯಾತ್ರೆ ಆರಂಭಿಸುವರು. ನಿಯಮಾನುಸಾರ 10 ಜನರ ಒಂದು ತಂಡದೊಂದಿಗೆ ಓರ್ವ ಸಿಬ್ಬಂದಿಯನ್ನು ಭದ್ರತೆಗೆ ಕಳುಹಿಸಿಕೊಡಬೇಕಾಗಿದೆ. ಆದರೆ ಇಂದು ಬೆಳಗ್ಗೆ ಮಹಿಳಾ ಭಕ್ತರ ತಂಡದೊಂದಿಗೆ ಯಾವ ಸಿಬ್ಬಂದಿಯನ್ನೂ ಕಳುಹಿಸಿಕೊಟ್ಟಿಲ್ಲ. ಅಲ್ಲದೇ ಮಾರ್ಗ ಮಧ್ಯೆ ವನ್ಯಜೀವಿಗಳಿರುವ ಬಗ್ಗೆಯೂ ಮಾಹಿತಿ ನೀಡಿಲ್ಲ. ಬೆಂಗಳೂರಿಂದ ಬಂದ ಮಹಿಳಾ ಭಕ್ತರ ತಂಡದಲ್ಲಿದ್ದವರು ಇದೇ ಮೊದಲ ಬಾರಿಗೆ ನಾಗಮಲೆಗೆ ಬರುತ್ತಿದ್ದವರಾಗಿದ್ದು, ಅಲ್ಲಿನ ಹಾದಿ ದುರ್ಗಮವಾಗಿರುತ್ತದೆ ಎಂಬ ಮಾಹಿತಿಯೂ ಅವರಿಗಿರಲಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಅನಗತ್ಯ ಮರ ಕಡಿತಕ್ಕೆ ಕಡಿವಾಣ ಹಾಕಿ, ಸುಸ್ಥಿರ ಅಭಿವೃದ್ಧಿ ಸಾಕು

ಮರಗಳ ಹನನ ವಿರೋಧಿಸಿ ಮೈಸೂರಲ್ಲಿ ನಡೆದ ಪರಿಸರವಾದಿಗಳ ಪ್ರತಿಭಟನಾ ಸಭೆಯಲ್ಲಿ ಆಗ್ರಹ

●ಮರಗಳನ್ನು ಉಳಿಸಿಕೊಂಡು ಅಭಿವೃದ್ಧಿಪಡಿಸಿ ●ಅವೈಜ್ಞಾನಿಕವಾಗಿ ಮರ ಕಡಿಯಬೇಡಿ

ಮೈಸೂರು, ಮೇ. 10(ಎಂಟಿವೈ)– ಅಭಿವೃದ್ಧಿ ಹೆಸರಲ್ಲಿ ಮೈಸೂರಿನ ಹಸಿರು ವಲಯದ ಮೇಲೆ ದೌರ್ಜನ್ಯ ನಡೆಸದೆ, ಅನಗತ್ಯವಾಗಿ ಮರ ಕಡಿಯುವುದಕ್ಕೆ ಕಡಿವಾಣ ಹಾಕಬೇಕು ಸುಸ್ಥಿರ ಅಭಿವೃದ್ಧಿಗೆ ಪೂರಕವಾಗಿ ಕ್ರಮ ಕೈಗೊಳ್ಳಬೇಕು ಎಂದು ಪರಿಸರವಾದಿಗಳು ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ.

ಮೈಸೂರಿನ ಬನ್ನಿಮಂಟಪದ ಮಿಲನ್ ಫಂಕ್ಷನ್ ಹಾಲ್ ಎದುರಿನ ಪಾರ್ಕ್‌ನಲ್ಲಿ ಭಾನುವಾರ ಬೆಳಗ್ಗೆ 'ಪರಿಸರಕ್ಕಾಗಿ ನಾವು' ಸಂಘಟನೆ ನೇತೃತ್ವದಲ್ಲಿ 'ಮರಗಳ ಹನನ' ವಿರೋಧಿಸಿ ನಡೆದ ಪ್ರತಿಭಟನಾ ಸಭೆಯಲ್ಲಿ ಪರಿಸರವಾದಿಗಳು, ರೈತ ಮುಖಂಡರು ಪಾಲ್ಗೊಂಡು ಒಕ್ಕೊರಲಿನಿಂದ ಮರಗಳ ಹನನ ವಿರೋಧಿಸಿದರು.



ಫ್ಲೈಓವರ್, ರಸ್ತೆ ಅಗಲೀಕರಣಕ್ಕೆ ಮರ ತೆರವು ಮಾಡಲು ಉದ್ದೇಶಿಸಿರುವುದನ್ನು ಖಂಡಿಸಿ ಪರಿಸರವಾದಿಗಳು ಬನ್ನಿಮಂಟಪದ ಮಿಲನ್ ಫಂಕ್ಷನ್ ಹಾಲ್ ಎದುರಿನ ಪಾರ್ಕ್‌ನಲ್ಲಿ ಪ್ರತಿಭಟನಾ ಸಭೆ ನಡೆಸಿದರು.

ಕಲುಷಿತ ವಾತಾವರಣ ಶುದ್ಧಿ ಮಾಡುವುದೇ ಮರಗಳು: ಸಭೆಯಲ್ಲಿ ಪರಿಸರ ಹೋರಾಟಗಾರ ಮೇಜರ್ ಜನರಲ್ ಒಂಬತ್ಕೆರೆ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೈಸೂರಲ್ಲಿ ಅಗಲವಾದ ರಸ್ತೆ ನಿರ್ಮಿಸಿ, ಅದರ ಎರಡೂ ಬದಿಯಲ್ಲಿ ಗಿಡ–ಮರ ಬೆಳೆಸಿ ಮೈಸೂರು ನೈಸರ್ಗಿಕ ಸಂಪತ್ತು ತುಂಬಿರುವಂತೆ ಮಾಡಿದರು. 1903ರಲ್ಲಿ ಸ್ಥಾಪನೆಯಾದ ಸಿಐಟಿಬಿ ರಸ್ತೆ ಬದಿಯಲ್ಲಿ ಗಿಡ–ಮರ ಬೆಳೆಸಲು ಆದ್ಯತೆ ನೀಡಿತ್ತು. ನಂತರ, ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ವೇಳೆ(1976) ಕರ್ನಾಟಕ ಮರಗಳ ಸಂರಕ್ಷಣಾ ಕಾಯಿದೆ ಜಾರಿಗೆ ತಂದರು. ಇದು ಮರಗಳ ಸಂರಕ್ಷಣೆ ಮಹತ್ವ ಸಾರುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಮರಗಳ ಹನನ ಹೆಚ್ಚಾಗುತ್ತಿದೆ. ತಾಪಮಾನದ ತೀವ್ರತೆ ತಗ್ಗಿಸುವ, ಕಲುಷಿತ ವಾತಾವರಣವನ್ನು ಶುದ್ಧೀಕರಿಸುವ, ಶಬ್ದವನ್ನು ಕಡಿಮೆ ಮಾಡುವುದರೊಂದಿಗೆ ನೆರಳು ನೀಡಿ, ನಗರದ ಸೌಂದರ್ಯ ಹೆಚ್ಚಿಸಲು ಮರಗಳು ಪ್ರಮುಖ ಪಾತ್ರವಹಿಸಿವೆ ಈ ಹಿನ್ನೆಲೆಯಲ್ಲಿ ಮರಗಳನ್ನು ಕಡಿಯುವುದಕ್ಕೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ಸುಸ್ಥಿರ ಅಭಿವೃದ್ಧಿ ಬಗ್ಗೆ ಮನವರಿಕೆ ಅಗತ್ಯ: ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ನಾವು ಅಭಿವೃದ್ಧಿ ವಿರೋಧಿಗಳಲ್ಲ. ಆದರೆ, ಅಭಿವೃದ್ಧಿ ಹೆಸರಲ್ಲಿ ಹಸಿರು ವಲಯದ ಮೇಲೆ ದೌರ್ಜನ್ಯ ಮಾಡಿದರೆ ಸಹಿಸುವುದಿಲ್ಲ. ಹಸಿರು, ಪರಿಸರವಿದ್ದರೆ ನಾವು. ಹಸಿರೇ ಕಣ್ಮರೆಯಾದರೆ ಜನರು ಬದುಕಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಫ್ಲೈಓವರ್, ರಸ್ತೆ ಅಗಲೀಕರಣಕ್ಕಾಗಿ ಅವೈಜ್ಞಾನಿಕವಾಗಿ ಮರ ಕಡಿಯಬಾರದು. ಬೆಂಗಳೂರಿಂದ ಮೈಸೂರು ಕಡೆ ಹೆಚ್ಚಿನ ವಾಹನಗಳು ಬರುತ್ತಿವೆ. ಅವುಗಳಲ್ಲಿ ಬಹುತೇಕ ವಾಹನಗಳು ಮಡಿಕೇರಿ ಮಾರ್ಗವಾಗಿ ತೆರಳುತ್ತವೆ. ಶ್ರೀರಂಗಪಟ್ಟಣ ಬಳಿ ಕುಶಾಲನಗರದ ಕಡೆಗೆ ಹೊಸ ಹೈವೆ ರಸ್ತೆ ನಿರ್ಮಾಣವಾಗುತ್ತಿದ್ದು, ಆ ರಸ್ತೆ ಕಾಮಗಾರಿ ಮುಗಿದ ಮೇಲೆ ಮಡಿಕೇರಿ, ಮಂಗಳೂರು, ಕೇರಳ ಕಡೆಗೆ ಹೋಗುವ ವಾಹನಗಳು ಹೊಸ ರಸ್ತೆಯಲ್ಲೇ ಸಂಚರಿಸುತ್ತವೆ. ಇದರಿಂದ ಮೈಸೂರಿನತ್ತ ಬರುವ ವಾಹನಗಳ ಸಂಖ್ಯೆ ಕಡಿಮೆಯಾಗಲಿದೆ. ಈ ಹಿನ್ನೆಲೆಯಲ್ಲಿ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ನಿರ್ಮಿಸಲಾಗುತ್ತಿರುವ ಫ್ಲೈಓವರ್‌ಗೆ ಅನಗತ್ಯವಾಗಿ ಮರ ಕಡಿಯದೇ ಲಭ್ಯವಿರುವ ಸ್ಥಳದಲ್ಲೇ ಫ್ಲೈಓವರ್ ಕಾಮಗಾರಿ ನಡೆಸಬೇಕು. ಅನಗತ್ಯವಾಗಿ ಮರಗಳನ್ನು ತೆರವು ಮಾಡಬಾರದು ಎಂದು ಆಗ್ರಹಿಸಿದರಲ್ಲದೆ, ಸುಸ್ಥಿರ ಅಭಿವೃದ್ಧಿ ಬಗ್ಗೆ ಪರಿಸರವಾದಿಗಳೇ ಜನರಿಗೆ ಮನವರಿಕೆ ಮಾಡಿಕೊಡುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಪಿಯುಸಿಎಲ್ ಸದಸ್ಯ ಮನ್ಸೂರ್ ಅಹ್ಮದ್ ಮಾತನಾಡಿ, ವಾಹನಗಳ ಸಂಚಾರದಟ್ಟಣೆಯಿಂದ ಉಂಟಾಗುತ್ತಿರುವ ವಾಯುಮಾಲಿನ್ಯ ತಗ್ಗಿಸಲು ಎಸ್‌ಎಸ್ ನಗರ ಮತ್ತು ಸಿದ್ದಿಕಿ ನಗರಗಳಲ್ಲಿ ಹೆಚ್ಚಿನ ಮರಗಳನ್ನು ಬೆಳೆಸುವ ಬದಲಿಗೆ ಇರುವ ಮರಗಳನ್ನು ಕಡಿಯುವುದು ಸರಿಯಲ್ಲ. ಮರ ಉಳಿಸಿಕೊಂಡು ಪರ್ಯಾಯ ಮಾರ್ಗದ ಬಗ್ಗೆ ಚಿಂತಿಸಬೇಕು ಎಂದು ಮನವಿ ಮಾಡಿದರು.

ರೀಪ್ ಬೆನಿಫಿಟ್ ಸಂಸ್ಥೆಯ ಸಾರಾ ಮಿಶ್ರ ಮಾತನಾಡಿ, ನಮಗೆ ಸುಸ್ಥಿರ ಅಭಿವೃದ್ಧಿ ಬೇಕು. ಯಾವುದೇ ಯೋಜನೆ ಜಾರಿ ಮಾಡುವಾಗ ನಾಗರಿಕರ ಅಭಿಪ್ರಾಯ ಕೇಳಬೇಕು. 350 ಮರಗಳನ್ನು ಕಡಿದರೆ ಆಗುವ ಹಾನಿಯನ್ನು ಗಿಡಗಳನ್ನು ನೆಡುವುದರಿಂದ ಮತ್ತು ಮರಗಳನ್ನು ಸ್ಥಳಾಂತರ ಮಾಡುವುದರಿಂದ ಸರಿದೂಗಿಸಲು ಸಾಧ್ಯವೇ ಇಲ್ಲ ಎಂದರು.

ಪರಿಸರಕ್ಕಾಗಿ ನಾವು ಸಂಘಟನೆ ಸದಸ್ಯ ರವಿ ಬಳೆ ಅವರು, ಯೋಜನೆಯ ಡಿಪಿಆರ್ ನೀಡಬೇಕು. ಪರಿಸರ ತಜ್ಞರು ಮತ್ತು ಪರಿಸರ ಸಂಘಟನೆಗಳ ಕಾರ್ಯಕರ್ತರ ಸಭೆ ಮಾಡಿ ಯೋಜನೆ ಬಗ್ಗೆ ವಿವರಿಸಬೇಕು' ಎಂಬ ನಿರ್ಣಯ ಮಂಡಿಸಿದರು. ಇದನ್ನು ಸಭೆ ಸರ್ವಾನುಮತದಿಂದ ಅನುಮೋದಿಸಿತು. ಸಭೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಹೊಸಕೋಟೆ ಬಸವರಾಜು, ವಕೀಲ ಮನ್ನನ್ ಖಾನ್, ಪರಿಸರವಾದಿಗಳಾದ ಗಂಟಯ್ಯ, ಬಾನು ಪ್ರಶಾಂತ್, ಲೋಲಕುಮಾರ್, ಬಾನು ಮೋಹನ್, ಸಂಜಯ್ ದತ್ತಾತ್ರಿ, ವಿಶ್ವಾಥ್, ದರ್ಶನ್, ನಿರುಂಜನ್, ಅಕ್ಬರ್, ಶಿವಶಂಕರ್, ಶ್ರೀಕಾಂತ್, ಗೀತಾ, ಐಶ್ವರ್ಯ, ರೈತ ಮುಖಂಡ ಮರಂಕಯ್ಯ ಹಾಗೂ ಸ್ಥಳೀಯರಾದ ಪ್ರೊ.ನಬೀಜಾನ್, ಫಯಾಜ್ ಅಹ್ಮದ್, ಸರೂಷ್, ಮುದಸಿರ್ ಅಲಿ ಖಾನ್, ಖುರ್ಷೀದ್ ಅಹ್ಮದ್, ನೇಹಾ ಅಫ್ಸರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

> "ಮೈಸೂರಿನಲ್ಲಿ ಹಲವು ಕಡೆ ಮರಗಳನ್ನು ಉಳಿಸಿಕೊಂಡು ರಸ್ತೆ ಅಗಲೀಕರಣ ಮಾಡಲಾಗಿದೆ. ನಾವೆಲ್ಲ ಹೋರಾಟ ಮಾಡಿದರೆ ಇಲ್ಲಿನ ಮರಗಳನ್ನು ಕೂಡ ಉಳಿಸಲು ಸಾಧ್ಯವಿದೆ. 'ಪರಿಸರಕ್ಕಾಗಿ ನಾವು ಸಂಘಟನೆ'ಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಮಾತನಾಡಿ ಮೇಲ್ಸೇತುವೆ ನಿರ್ಮಿಸಲು ನಮ್ಮ ವಿರೋಧವಿಲ್ಲ. ಆದರೆ ಅದಕ್ಕಾಗಿ 350 ಮರಗಳನ್ನು ಕಡಿಯುವುದು ಸರಿಯಲ್ಲ. ಅಗತ್ಯವಿರುವಷ್ಟು ಮಾತ್ರ ರಸ್ತೆ ಅಗಲೀಕರಣ ಮಾಡಲಿ. ನಮ್ಮ ಮೈಸೂರಿನ ಪರಿಸರ ಮತ್ತು ಪರಂಪರೆಯನ್ನು ಉಳಿಸಿಕೊಳ್ಳಲು ಎಲ್ಲರೂ ಕೈಜೋಡಿಸಬೇಕು.
> –ಪ್ರೊ.ಕಾಳಚನ್ನೇಗೌಡ, ನಿವೃತ್ತ ಪ್ರಾಧ್ಯಾಪಕ

ರಂಗಾಯಣ ಚಿಣ್ಣರ ಮೇಳಕ್ಕೆ ವರ್ಣರಂಜಿತ ತೆರೆ

ಮಕ್ಕಳ ಸಂತೆಯಲ್ಲಿ ದೊಡ್ಡವರು ನಾಚಿಸುವಂತೆ ವ್ಯಾಪಾರ ಮಾಡಿದ ಚಿಣ್ಣರು



ಮೈಸೂರಿನ ರಂಗಾಯಣದ ಆವರಣದಲ್ಲಿ ನಡೆದ ಚಿಣ್ಣರ ಮೇಳದಲ್ಲಿ ಭಾನುವಾರ ಮಕ್ಕಳ ಸಂತೆ ನಡೆಯಿತು.

ಮೈಸೂರು, ಮೇ 10(ಎಂಕೆ)– ಹೂ, ಹಣ್ಣು–ತರಕಾರಿ ಮಾತ್ರವಲ್ಲದೆ ಬಗೆ ಬಗೆಯ ತಿಂಡಿ–ತಿನಿಸುಗಳ ಮಾರಾಟ ಮಾಡಿ, ಕಲಾ ಕೌಶಲ್ಯತೆ ಮೂಲಕ ಗಮನ ಸೆಳೆದ ಪುಟಾಣಿಗಳು 'ರಂಗಾಯಣ ಚಿಣ್ಣರ ಮೇಳ–2026'ಕ್ಕೆ ವರ್ಣರಂಜಿತ ತೆರೆ ಎಳೆದರು.

ಏ.14ರ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಂದು 'ಈ ಮಣ್ಣು ನಮ್ಮದು' ಶೀರ್ಷಿಕೆಯಡಿ ಆರಂಭವಾದ ರಂಗಾಯಣ ಚಿಣ್ಣರ ಮೇಳದ ಕಡೇ ದಿನವಾದ ಭಾನುವಾರ ನಡೆದ 'ಮಕ್ಕಳ ಸಂತೆ'ಯಲ್ಲಿ ವ್ಯಾಪಾರ–ವಹಿವಾಟು ನಡೆಸಿದ ಪುಟಾಣಿಗಳು, ಪೋಷಕರು ಬೆರಗಾಗುವಂತೆ ಮಾರಾಟದಲ್ಲಿ ತಲ್ಲೀನರಾಗಿದ್ದರು.

ರಂಗಾಯಣ ಕಲಾವಿದರು ಸುಗಮ ಸಂಗೀತದ ನಡುವೆ ವ್ಯಾಪಾರ–ವಹಿವಾಟು ನಡೆಸಿ, ನೀರಿನಲ್ಲಿ ಆಟವಾಡಿ, ಮಾಡಿಟ್ಟಿದ್ದ ಮಣ್ಣಿನ ಪುಟಾಣಿ ಮನೆಗಳ ನಡುವೆ ನಿಂತು ಫೋಟೋ ಕ್ಲಿಕ್ಕಿಸಿಕೊಂಡು ಚಿಣ್ಣರು ಕುಣಿದು ಕುಪ್ಪಳಿಸಿದರು.

ವೇಷಭೂಷಣ ತೊಟ್ಟು ಮಕ್ಕಳನ್ನು ಸ್ವಾಗತಿಸಿದ ರಂಗಾಯಣದ ಕಲಾವಿದರು, ಮಕ್ಕಳ ಸಂತೆಗೆ ಹೊಸ ಮೆರುಗು ತಂದರು. ಜೊತೆಗೆ ಜಾನಪದ ಹಾಡುಗಳು, ರಂಗಗೀತೆಗಳು ಕಿವಿಗೆ ಇಂಪು ನೀಡಿದರೆ, ಕಲಿತು, ಹಾಡಿ, ಕುಣಿದು ಹೊಸ ಅನುಭವ ಪಡೆದು ಪುಟಾಣಿಗಳು ಮುಂದಿನ ವರ್ಷದ ಚಿಣ್ಣರ ಮೇಳಕ್ಕೆ ಅಣಿಯಾದರು.

ಹೊಸ ಆಯಾಮ: ಈ ವರ್ಷದ ಚಿಣ್ಣರ ಮೇಳ ಹೊಸ ಆಯಾಮವನ್ನೇ ಸೃಷ್ಟಿಸಿದೆ. ಈ ಮಣ್ಣು ನಮ್ಮದು ಪರಿ ಕಲ್ಪನೆಯಲ್ಲಿ ರೂಪುಗೊಂಡ ಚಿಣ್ಣರ ಮೇಳದಲ್ಲಿ ಕೈ ತೋಟ, ಪರಿಸರ ನಡಿಗೆ, ಮಣ್ಣಿನಿಂದ ಮಡಿಕೆ–ಕುಡಿಕೆ ಹಾಗೂ ಮನೆಗಳ ತಯಾರಿಕೆ, ಬಿದಿರು ಬುಟ್ಟಿಗಳನ್ನು ಹೆಣೆಯುವಿಕೆ, ಕೈಮಗ್ಗ, ತೊಗಲುಗೊಂಬೆ ಕುರಿತು ವಿಶೇಷ ತರಗತಿಗಳು ಮಕ್ಕಳನ್ನು ನೈಜ ಜೀವನಕ್ಕೆ ಹೊಂದಿಕೊಳ್ಳುವಂತೆ ಮಾಡಿದವು ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಕ್ಕಳು ಅತ್ಯಂತ ಖುಷಿಯಾಗಿ ಭಾಗವಹಿಸಿದ್ದಾರೆ. ಹೊಸ ನಾಟಕ ಪ್ರಯೋಗಗಳ ಜೊತೆಗೆ ಕರಾವಳಿ ಮತ್ತು ಮೂಡಲ ಪಾಯ ಶೈಲಿಯ ಯಕ್ಷಗಾನ, ಪೌರಾಣಿಕ ನಾಟಕಗಳ ಪ್ರಯೋಗ ಮಕ್ಕಳಿಗೆ ಹೊಸ ಅನುಭವ ನೀಡಿತು. ಯಕ್ಷಗಾನ ಕಲಾ ವಿದರೂ ರಂಗಾಯಣದಲ್ಲೇ ಇದ್ದು, ಮಕ್ಕಳೊಂದಿಗೆ ಬೆರೆತು ತರಬೇತಿ ನೀಡಿದರು. ಮಣ್ಣನ್ನು ಮುಟ್ಟಲು ಹಿಂದೆ–ಮುಂದೆ ನೋಡುವ ನಗರ ಪ್ರದೇಶದ ಮಕ್ಕಳಿಗೆ ರೆಡಿಮೇಡ್ ಜೀವನದಿಂದ ನೈಜ ಜೀವನಾನುಭವ ನೀಡುವಲ್ಲಿ ಈ ವರ್ಷದ ರಂಗಾಯಣ ಚಿಣ್ಣರ ಮೇಳ ಯಶಸ್ವಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ತಾಯಂದಿರ ದಿನವೇ

ಹೆತ್ತಮ್ಮನ ಗುಂಡಿಕ್ಕಿ ಕೊಂದ ಮಗ



ಉತ್ತರ ಪ್ರದೇಶ: ಆಸ್ತಿ ವಿಚಾರವಾಗಿ ನಡೆದ ಜಗಳದಲ್ಲಿ ಮಗನೇ ತನ್ನ ತಾಯಿ ಮತ್ತು ತಮ್ಮನ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿರುವ ಘಟನೆ ಉತ್ತರ ಪ್ರದೇಶದ ಬಂಡಾ ಜಿಲ್ಲೆಯಲ್ಲಿ ನಡೆದಿದೆ.

ಆರೋಪಿಯನ್ನು ರಾಜ್ ಕಿಶೋರ್ ಗುಪ್ತಾ ಎಂದು ಗುರುತಿಸಲಾಗಿದೆ. ಇಂದು ಮುಂಜಾನೆ ಮನೆಯೊಳಗೆ ಗುಂಡಿನ ಸದ್ದು ಕೇಳಿ ಸ್ಥಳೀಯರು ಪೊಲೀಸರಿಗೆ ತಿಳಿಸಿದ್ದಾರೆ. ಬಳಿಕ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದಾಗ ಘಟನೆ ಬಹಿರಂಗವಾಗಿದೆ.

ಕುಟುಂಬದ ಪಿತ್ರಾರ್ಜಿತ ಆಸ್ತಿಯನ್ನು ಆರೋಪಿಯ ತಂದೆ ಮಾರಾಟ ಮಾಡಿದ್ದರು. ಆದರೆ ಈ ವಿಚಾರಕ್ಕೆ ರಾಜ್‌ಕಿಶೋರ್ ವಿರೋಧ ವ್ಯಕ್ತಪಡಿಸಿದ್ದ. ಇದೇ ವಿಷಯವಾಗಿ ಮನೆಯಲ್ಲಿ ತಾಯಿ ಮತ್ತು ತಮ್ಮನೊಂದಿಗೆ ಜಗಳ ನಡೆದಿದೆ. ಜಗಳ ತೀವ್ರವಾಗುತ್ತಿದ್ದಂತೆ ಆರೋಪಿ ಬಂದೂಕು ತೆಗೆದು ತಾಯಿ ಮತ್ತು ತಮ್ಮನ ಮೇಲೆ ಗುಂಡು ಹಾರಿಸಿದ್ದಾನೆ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಬ್ಬರು ಮೃತ ಪಟ್ಟಿದ್ದಾರೆ. ಘಟನೆ ಬಳಿಕ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ. ಆರೋಪಿಯನ್ನು ಬಂಧಿಸಲು ನಾಲ್ಕು ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸ್ ಇಲಾಖೆಯಲ್ಲಿ ಮೇಜರ್ ಸರ್ಜರಿ

293 ಪೊಲೀಸ್ ಇನ್ಸ್‌ಪೆಕ್ಟರ್, 74 ಡಿವೈಎಸ್‌ಪಿಗಳ ವರ್ಗಾವಣೆ

ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಗಳ ಮಾಹಿತಿ ಇಲ್ಲಿದೆ

ಮೈಸೂರು,ಮೇ 10(ಪಿಎಂ)– ರಾಜ್ಯ ಸರ್ಕಾರದಿಂದ ಪೊಲೀಸ್ ಇಲಾಖೆಯಲ್ಲಿ ಮೇಜರ್ ಸರ್ಜರಿ ಮಾಡಿದ್ದು, 293 ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಹಾಗೂ 74 ಡಿವೈಎಸ್‌ಪಿಗಳ (ಸಿವಿಲ್) ವರ್ಗಾವಣೆ ಮಾಡಿ ಭಾನುವಾರ ಆದೇಶ ಹೊರಡಿಸಲಾಗಿದೆ.

ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ (ಸಿವಿಲ್) ಸಂಬಂಧಿಸಿದಂತೆ ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಎಂ.ಎಲ್.ಶೇಖರ್ ಅವರನ್ನು ಬೆಂಗಳೂರು ನಗರ ನಂದಿನ ಲೇಔಟ್ ಪೊಲೀಸ್ ಠಾಣೆಗೆ, ಕೊಡಗು ಜಿಲ್ಲೆಯ ಮಡಿಕೇರಿ ಟೌನ್ ವೃತ್ತದ ಪಿ.ಕೆ.ರಾಜು ಅವರನ್ನು ಮೈಸೂರು ನಗರ ಎನ್‌ಆರ್ ಪೊಲೀಸ್ ಠಾಣೆಗೆ, ಪಿಟಿಎಸ್ ಮೈಸೂರು ಇಲ್ಲಿಗೆ ವರ್ಗಾವಣೆ ಆದೇಶದಲ್ಲಿರುವ ಪಿ. ಉಮೇಶ್ ಅವರನ್ನು ಮೈಸೂರು ನಜರ್‌ಬಾದ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ (ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಗಳ ಸಂಬಂಧ).

ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆ ಆದೇಶದಲ್ಲಿರುವ ಕೆ.ಆರ್.ಪ್ರಸಾದ್ ಅವರನ್ನು ಮೈಸೂರು ದೇವರಾಜ ಪೊಲೀಸ್ ಠಾಣೆಗೆ, ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆ ಆದೇಶದಲ್ಲಿರುವ ಕೆ.ಬಿ.ಶಿವಪ್ರಸಾದ್ ರಾವ್ ಅವರನ್ನು ಮೈಸೂರು ಸಿದ್ಧಾರ್ಥನಗರ ಸಂಚಾರ ಠಾಣೆಗೆ, ಮೈಸೂರು ನಜರ್‌ಬಾದ್ ಠಾಣೆಯ ಎಂ.ಮಹದೇವಸ್ವಾಮಿ ಅವರನ್ನು ಮೈಸೂರು ಎನ್‌ಆರ್ ಸಂಚಾರ ಠಾಣೆಗೆ, ಮೈಸೂರು ಎನ್‌ಆರ್ ಸಂಚಾರ ಠಾಣೆಯ ರೇಖಾಭಾಯಿ ಅವರನ್ನು ಕರ್ನಾಟಕ ಲೋಕಾಯುಕ್ತಕ್ಕೆ, ಮೈಸೂರು ಸಿದ್ಧಾರ್ಥನಗರ ಸಂಚಾರ ಠಾಣೆಯ ಕೆ.ವಿ. ಶ್ರೀಧರ್ ಅವರನ್ನು ಮೈಸುರು ಆಲನಹಳ್ಳಿ ಠಾಣೆಗೆ, ಸಿಸಿಬಿ ಬೆಂಗಳೂರು ನಗರಕ್ಕೆ ವರ್ಗಾವಣೆ ಆದೇಶದಲ್ಲಿರುವ ಕೆ.ಎಂ. ಮಂಜು ಅವರನ್ನು ಚಾಮರಾಜನಗರ ಎಂಎಂ ಹಿಲ್ಸ್ ಠಾಣೆಗೆ, ಮೈಸೂರು ವಿವಿಪುರಂ ಸಂಚಾರ ಠಾಣೆಯ ಎಂ.ಆರ್.ಲವ ಅವರನ್ನು ಮೈಸೂರು ವಿಜಯನಗರ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ.

ಮೈಸೂರು ವಿಜಯನಗರ ಠಾಣೆಯ ಎಸ್.ಡಿ.ಸುರೇಶ್ ಕುಮಾರ್ ಅವರನ್ನು ಕರ್ನಾಟಕ ಲೋಕಾಯುಕ್ತಕ್ಕೆ, ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆ ಆದೇಶದಲ್ಲಿರುವ ಎಂ.ಎ.ರವಿಕಿರಣ್ ಅವನರನ್ನು ಮೈಸೂರು ಸರಸ್ವತಿಪುರಂ ಠಾಣೆಗೆ, ಮೈಸೂರು ಸರಸ್ವತಿಪುರಂ ಠಾಣೆಯ ಜಿ.ಪುರುಷೋತ್ತಮ ಅವರನ್ನು ಮೈಸೂರು ಜಯಲಕ್ಷ್ಮೀಪುರಂ ಠಾಣೆಗೆ, ಮೈಸೂರು ಜಯಲಕ್ಷ್ಮೀಪುರಂ ಠಾಣೆಯ ಕುಮಾರ ಅವರನ್ನು ಕರ್ನಾಟಕ ಲೋಕಾಯುಕ್ತಕ್ಕೆ, ಮೈಸೂರು ಗ್ರಾಮೀಣ ವೃತ್ತದ ಸಿ.ಶಿವನಂಜಶೆಟ್ಟಿ ಅವರನ್ನು ಮೈಸೂರು ತಲಕಾಡು ಠಾಣೆಗೆ, ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ವೃತ್ತದ ಎಂ.ಶಿವಮಾದಯ್ಯ ಅವರನ್ನು ಮೈಸೂರು ಜಿಲ್ಲೆ ಹುಣಸೂರು ಟೌನ್ ಠಾಣೆಗೆ, ಹುಣಸೂರು ಟೌನ್ ಠಾಣೆಯ ಆರ್.ಸಂತೋಷ್ ಕಶ್ಯಪ್ ಅವರನ್ನು ಹುಣಸೂರು ಗ್ರಾಮೀಣ ಠಾಣೆಗೆ, ಚಾಮರಾಜನಗರ ಎಂಎಂ ಹಿಲ್ಸ್ ಠಾಣೆಯ ಪಿ.ಜಗದೀಶ್ ಅವರನ್ನು ಮೈಸೂರು ಜಿಲ್ಲೆ ಬಿಳಿಗೆರೆ ವೃತ್ತಕ್ಕೆ, ಬಿಳಿಗೆರೆ ವೃತ್ತದ ವೈ.ಎಸ್.ಚಂದ್ರಶೇಖರ್ ಅವರನ್ನು ಕರ್ನಾಟಕ ಲೋಕಾಯುಕ್ತಕ್ಕೆ, ಮೈಸೂರು ಐಜಿಪಿ ದಕ್ಷಿಣ ವಲಯದ ಡಿ.ಬಿ.ಜಯಪ್ರಕಾಶ್ ಅವರನ್ನು ಮೈಸೂರು ಗ್ರಾಮೀಣ ವೃತ್ತಕ್ಕೆ, ಮೈಸೂರು ಟಿ.ನರಸೀಪುರ ಠಾಣೆಯ ಧನಂಜಯ ಅವರನ್ನು ಮೈಸೂರು ದಕ್ಷಿಣ ಠಾಣೆಗೆ, ಸಿಐಡಿಯಲ್ಲಿರುವ ಎನ್.ರವೀಂದ್ರ ಅವರನ್ನು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ವೃತ್ತಕ್ಕೆ, ಸ್ಥಳ ನಿರೀಕ್ಷಣೆಯಲ್ಲಿರುವ ಎಸ್.ನಾಗೇಶ್ ಅವರನ್ನು ಮೈಸೂರು ಉದಯಗಿರಿ ಠಾಣೆಗೆ, ಉದಯಗಿರಿ ಠಾಣೆಯ ಕೆ.ಎನ್.ಸುಧಾಕರ ಅವರನ್ನು ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾಯಿಸಲಾಗಿದೆ.

ರಾಜ್ಯ ಗುಪ್ತವಾರ್ತೆಯಲ್ಲಿರುವ ಬಿ.ಜಿ. ಪ್ರಕಾಶ್ ಅವರನ್ನು ಚಾಮರಾಜನಗರ ಚೆಸ್ಕಾಂ ಜಾಗೃತ ದಳಕ್ಕೆ, ಮೈಸೂರು ನಗರ ದೇವರಾಜ ಸಂಚಾರ ಠಾಣೆಯ ವಿ.ಡಿ. ಮಮತಾ ಅವರನ್ನು ಮೈಸೂರು ವಿವಿ ಪುರಂ ಸಂಚಾರ ಠಾಣೆಗೆ, ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆ ಆದೇಶದಲ್ಲಿರುವ ಆನಂದೇಗೌಡ ಅವರನ್ನು ಮಂಡ್ಯ ಜಿಲ್ಲೆಯ ಮೇಲುಕೋಟೆ ಠಾಣೆಗೆ, ಡಿಸಿಆರ್‌ಇಯಲ್ಲಿರುವ ಎನ್.ಎಂ.ಭವಿತ ಅವರನ್ನು ಮಂಡ್ಯ ಚೆಸ್ಕಾಂ ಜಾಗೃತ ದಳಕ್ಕೆ, ಡಿಸಿಆರ್‌ಇಯಲ್ಲಿರುವ ಸಿ.ಯು.ಸವಿ ಅವರನ್ನು ಮಡಿಕೇರಿ ಚೆಸ್ಕಾಂ ಜಾಗೃತ ದಳಕ್ಕೆ, ಮಡಿಕೇರಿ ಚೆಸ್ಕಾಂ ಜಾಗೃತ ದಳದ ರಾಮಕುಮಾರ್ ಸುಣಗಾರ್ ಅವರನ್ನು ಕೊಡಗು ಜಿಲ್ಲೆಯ ಸೈಬರ್ ಕ್ರೈಂ ಠಾಣೆಗೆ, ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆ ಆದೇಶದಲ್ಲಿರುವ ವೈ.ಪಿ.ಚಂದ್ರಕಲಾ ಅವರನ್ನು ಮೈಸೂರು ನಗರ ಪಿಟಿಎಸ್‌ಗೆ, ಮೈಸೂರು ನಗರ ಪಿಟಿಎಸ್‌ನಲ್ಲಿರುವ ಕೆ.ಷಣ್ಮುಗ ವರ್ಮ ಅವರನ್ನು ಮೈಸೂರು ದಕ್ಷಿಣ ವಲಯ ಐಜಿಪಿ ಕಚೇರಿಗೆ ವರ್ಗ ಮಾಡಲಾಗಿದೆ.

ಡಿವೈಎಸ್‌ಪಿ (ಸಿವಿಲ್): ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ 74 ಡಿವೈಎಸ್‌ಪಿಗಳನ್ನು (ಸಿವಿಲ್) ವರ್ಗಾವಣೆ ಮಾಡಲಾಗಿದೆ. ಸಿಐಟಿಯಲ್ಲಿರುವ ಎ.ಕೆ.ರಾಜೇಶ್ ಅವರನ್ನು ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಗೆ, ಬೆಂಗಳೂರು ನಗರ ವಿಶೇಷ ಶಾಖೆಗೆ ಸ್ಥಳ ನಿಯುಕ್ತಿಯಲ್ಲಿರುವ ಐ.ಪಿ.ಮೇದಪ್ಪ ಅವರನ್ನು ಕೊಡಗು ಜಿಲ್ಲೆ ಸಿಸಿಪಿಎಸ್‌ಗೆ, ಕೊಡಗು ಜಿಲ್ಲೆ ಸಿಸಿಪಿಎಸ್‌ನಲ್ಲಿರುವ ಲಕ್ಷ್ಮೀಕಾಂತ ಕರಿಯಪ್ಪ ತಳವಾರ ಅವರನ್ನು ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಗೆ, ಸಿಐಡಿಯಲ್ಲಿರುವ ಜೆ.ಮೋಹನ್ ಅವರನ್ನು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ಉಪವಿಭಾಗಕ್ಕೆ, ಕೊಳ್ಳೇಗಾಲ ಉಪವಿಭಾಗದ ಎಂ.ಧರ್ಮೇಂದ್ರ ಅವರನ್ನು ಮೈಸೂರು ಜಿಲ್ಲೆ ನಂಜನಗೂಡು ಉಪವಿಭಾಗಕ್ಕೆ, ನಂಜನಗೂಡು ಉಪವಿಭಾಗದ ಜಿ.ಎಸ್.ರಘು ಅವರನ್ನು ಡಿಸಿಆರ್‌ಇಗೆ, ಸಿಐಡಿ ಘಟಕಕ್ಕೆ ವರ್ಗಾವಣೆ ಆದೇಶದಲ್ಲಿರುವ ಕೆ.ಸಿ.ಪ್ರಕಾಶ್ ಅವರನ್ನು ಮೈಸೂರು ನಗರ ಕೃಷ್ಣರಾಜ ಉಪವಿಭಾಗಕ್ಕೆ, ಕೃಷ್ಣರಾಜ ಉಪವಿಭಾಗದಲ್ಲಿರುವ ಹೆಚ್.ಬಿ.ರಮೇಶ್‌ಕುಮಾರ್ ಅವರನ್ನು ಡಿಸಿಆರ್‌ಇಗೆ ವರ್ಗಾವಣೆ ಮಾಡಲಾಗಿದೆ.

ರಿಸರ್ವ್ ಪಿಐ: ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ (ಸಶಸ್ತ್ರ)ಗಳನ್ನು ವರ್ಗಾವಣೆ ಮಾಡಲಾಗಿದೆ. ಚನ್ನಪಟ್ಟಣ ಕೆಎಸ್‌ಪಿಟಿಎಸ್‌ನಲ್ಲಿರುವ ಬಿ.ಜಗದೀಶ ಅವರನ್ನು ಮಂಡ್ಯ ಜಿಲ್ಲೆಯ ಡಿಎಆರ್‌ಗೆ ವರ್ಗ ಮಾಡಿರುವುದೂ ಸೇರಿದಂತೆ 35 ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ವರ್ಗ ಮಾಡಲಾಗಿದೆ.